ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ



ಕನ್ನಡ ವಾರಪತ್ರಿಕೆ

Blog :janashakthi.wordpress.com   e-mail : js_weekly@yahoo.com


ಸಂಪುಟ 6 ಸಂಚಿಕೆ 10

ಮಾರ್ಚ್ 04, 2012

ಪುಟ 16   ರೂ. 5/-




ತೃಣಮೂಲ ಗೂಂಡಾರಾಜ್:
ಹಾಡು ಹಗಲೇ ಸಿಪಿಐ(ಎಂ) ಮುಖಂಡರ ಕಗ್ಗೊಲೆ



ಎನ್.ಟಿ.ಟಿ.ಸಿ.
ಭಯೋತ್ಪಾದನೆಯ ವಿರುದ್ಧವೋ ಅಥವಾ ಒಕ್ಕೂಟ ತತ್ವದ ವಿರುದ್ಧವೋ



ಅಧಿಕಾರ ದಾಹಿಗಳ ಮತ್ತೊಂದು ಕಿತ್ತಾಟ



ಸಂಗಾತಿ ಎನ್.ಕೆ. ಉಪಾಧ್ಯಾಯ



ಕಾಂ.ಎನ್.ಕೆ.ಉಪಾಧ್ಯಾಯ ಭವನ ಉದ್ಘಾಟನೆ

ರಾಜ್ಯ ಬಜೆಟ್- ಯುವಜನ ಪರ ಆಗಬೇಕಾದರೆ.....

ದೇವದಾಸಿ ಮಹಿಳೆಯರ ಮಕ್ಕಳ ಸ್ವಾಭಿಮಾನದ ಬದುಕಿಗಾಗಿ ಸಮಾವೇಶ

ಒಳಮಿಸಲಾಯಿತಿ ಕಲ್ಪಿಸಲು ಒತ್ತಾಯ

ದೇವದಾಸಿ ಮಕ್ಕಳಿಗೆ ಪರಿಷ್ಠ ಜಾತಿ ಮತ್ತು ಪಂಗಡದಲ್ಲಿ ಒಳಮಿಸಲಾತಿ ಸೌಲಭ್ಯ ಕಲ್ಪಿಸುವಂತೆ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಗೌರವ ಸಲಹೆಗಾರ ಯು. ಬಸವರಾಜ್ ಒತ್ತಾಯಿಸಿದರು. ಸಂಘಟನೆಯ ತಾಲೂಕು ಸಮಿತಿ ಸಂಘಟಿಸಿದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ದೇವದಾಸಿ ಮಹಿಳೆಯರಿಗೆ ಸರ್ಕಾರ ಕೂಡಲೇ 2 ಎಕರೆ ಭೂಮಿ ನೀಡಬೇಕು, ಶೋಷಿತರ ಬದುಕಿಗೆ ಭದ್ರತೆ ಕಲ್ಪಿಸುವ ನಿಟ್ಟಿನಲ್ಲಿ ಅಗತ್ಯ ಯೋಜನೆ ರೂಪಿಸಬೇಕು, ರಾಜ್ಯ ಸರ್ಕಾರ, ಹೋರಾಟಗಳನ್ನು ದಮನಗೊಳಿಸುವ ನಿಟ್ಟಿನಲ್ಲಿ ಕಳೆದೆರಡು ವರ್ಷದಿಂದ ಬರೀ ಭರವಸೆ ನೀಡುತ್ತಿದೆ ಎಂದು ಅವರು ಕಿಡಿಕಾರಿದರು. ಅನಿಷ್ಟ ಪದ್ಧತಿ ಜಾರಿಗೊಳಿಸಿದ ಜನರು ದೇವದಾಸಿಯರ ಮಕ್ಕಳಿಗೆ ಆಸ್ತಿ ಹಕ್ಕು ನೀಡಬೇಕು ಎಂದು ಆಗ್ರಹಿಸಿದ ಬಸವ ರಾಜ್ ಈ ಕುರಿತು ಶೀಘ್ರದಲ್ಲೆ ರಾಜ್ಯ ಮಟ್ಟದಲ್ಲಿ ಹೋರಾಟ ರೂಪಿಸಲಾಗುವುದು ಎಂದೂ ಪ್ರಕಟಿಸಿದರು.

ಸಂಘದ ರಾಜ್ಯ ಅಧ್ಯಕ್ಷೆ ಬಿ. ಮಾಳಮ್ಮ ದೇವದಾಸಿಯರ ಮಕ್ಕಳಿಗೆ ಸ್ವಯಂ ಉದ್ಯೋಗ ಒದಗಿಸಲು ಹೊಲಿಗೆ, ಕಂಪ್ಯೂಟರ್ ತರಬೇತಿ ಸೇರಿ, ವಿವಿಧ ವೃತ್ತಿ ತರಬೇತಿ ನೀಡಬೇಕು, ರಿಯಾಯಿತಿ ದರದ ಬಡ್ಡಿಯಲ್ಲಿ ಸಾಲ ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿದರು. ಅಲ್ಲದೆ ಮಕ್ಕಳಿಗೆ ಪ್ರತ್ಯೇಕವಾಗಿ ವಸತಿ ಶಾಲೆ ಸೌಲಭ್ಯ ಕಲ್ಪಿಸಿ ಉನ್ನತ ವ್ಯಾಸಂಗದ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ದೇವದಾಸಿ ಮಹಿಳೆಯರ ಕಲ್ಯಾಣ ಮಂಡಳಿ ಸ್ಥಾಪನೆ ಕುರಿತು ಸರ್ಕಾರ ಕೂಡಲೇ ಸೂಕ್ತ ನಿರ್ಣಯ ಕೈಗೊಳ್ಳಬೇಕು, ಮಾಸಿಕ ಪಿಂಚಣಿಗೆ ಅಗತ್ಯವಾದ 45 ಕೋಟಿ ರೂಪಾಯಿ ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು. ಸಂಘದ ಉಪಾಧ್ಯಕ್ಷೆ ದೊಡ್ಡಬಸಮ್ಮ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಕಾರ್ಯದರ್ಶಿ ಚಾಂದಬಿ, ಸಂಘಟನೆಯ ಸದಸ್ಯರಾದ ದುರುಗಮ್ಮ, ಹನುಮಕ್ಕ, ಮೈಲಮ್ಮ, ಹುಲಿಗೆಮ್ಮ ರಂಭಕರು, ನಾಗರತ್ನ ಪಾಲ್ಗೊಂಡಿದ್ದರು.

–ಬಿ. ಮಾಳಮ್ಮ

ತುಮಕೂರು

ಪೌರ ಕಾರ್ಮಿಕರ ಸಾವು: ಪರಿಹಾರ, ಆಯುಕ್ತರ ಮೇಲೆ ಕ್ರಿಮಿನಲ್ ಮೊಕದ್ದಮೆಗೆ ಆಗ್ರಹ



ಧಾರವಾಡ ನಗರದ ಟೋಲ್‌ನಾಕ್ ಸಮೀಪ ಗುರುವಾರ ಚರಂಡಿ ಸ್ವಚ್ಛಗೊಳಿಸುವ ಕೆಲದಲ್ಲಿ ನಿರತರಾಗಿದ್ದ ಯಾಕುಬ್ ದೇವಪ್ಪ ಯಲಕಪಾಟಿ 55 ವರ್ಷ ಇವರು ಉಸಿರುಗಟ್ಟಿ ಮರಣ ಹೊಂದಿರುವ ಘಟನೆಗೆ ಹೊಣೆಗಾರರನ್ನಾಗಿಸಿ ಹುಬ್ಬಳಿ ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು, ಮೃತ ದೇವಪ್ಪನ ಕುಟುಂಬದ ಅವಲಂಬಿತರೊಬ್ಬರಿಗೆ ಸರ್ಕಾರಿ ಕೆಲಸ ನೀಡಬೇಕು ಮತ್ತು ಕನಿಷ್ಟ 10 ಲಕ್ಷ ರೂಪಾಯಿ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ತುಮಕೂರು ಜಿಲ್ಲಾ ಪೌರ ಕಾರ್ಮಿಕರ ಸಂಘ ಸಿಐಟಿಯು ನೇತೃತ್ವದಲ್ಲಿ ಫೆಬ್ರವರಿ 17,2012ರ ಶುಕ್ರವಾರ ತುಮಕೂರು ನಗರದ ಪುರಭವನದ ಬಳಿ ಪ್ರತಿಭಟನೆ ನಡೆಸಲಾಯಿತು.

ಈ ಪ್ರತಿಭಟನೆಯನ್ನು ಉದ್ದೇಶಿಸಿ ಸಂಘದ ಅಧ್ಯಕ್ಷರಾದ ಸೈಯದ್ ಮುಜೀಬ್ ಮಾತನಾಡಿ ನಗರ ಮತ್ತು ಪಟ್ಟಣಗಳಲ್ಲಿರುವ ಸ್ಥಳೀಯ ಸಂಸ್ಥೆಗಳು ಹೈಕೋರ್ಟ್ ನೀಡಿರುವ ನಿರ್ದೇಶನಗಳನ್ನು ಉಲ್ಲಂಘಿಸುತ್ತಿವೆ. ರಾಜ್ಯದಲ್ಲಿ ದಲಿತ ಪೌರ ಕಾರ್ಮಿಕರ ಸರಣಿ ಸಾವು ಸಂಭವಿಸುತ್ತಿದ್ದರೂ ಸರ್ಕಾರ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿಲ್ಲ, ಸ್ವಚ್ಛೀಕರಣ ಅಪಾಯರಹಿತ ಆಗುವಂತೆ ಯಂತ್ರಗಳ ಖರೀದಿ ಆಗಿಲ್ಲ ಎಂದು ಕಿಡಿಕಾರಿದರು.

ಸಂಘದ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಮಾತನಾಡಿ ಪೌರ ಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ದುಡಿಸಿಕೊಳ್ಳುತ್ತಾ ತೀವ್ರ ಶೋಷಣೆ ಮಾಡಲಾಗುತ್ತಿದೆ. ಕಾರ್ಮಿಕರ ಸಂಕಷ್ಟಗಳ ಬಗ್ಗೆ ರಾಜ್ಯ ಸರ್ಕಾರ ಗಮನ ಹರಿಸದೆ ದಲಿತ ಪೌರ ಕಾರ್ಮಿಕರಿಗೆ ಬಗ್ಗೆ ಅಸಡ್ಡೆ ತೋರಿಸುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಸಂಘದ ಖಜಾಂಚಿ ಕೆ.ಮಂಜುನಾಥ್, ಸಹಕಾರ್ಯದರ್ಶಿ ನರಸಿಂಹರಾಜು, ಸ್ವಾಮಿ, ವೆಂಕಟೇಶ್, ಸಿದ್ದಲಿಂಗಪ್ಪ, ರಾಜು, ಉಪಾಧ್ಯಕ್ಷೆ ಇಂದಿರಮ್ಮ, ನರಸಿಂಹಮೂರ್ತಿ, ಕೆಂಪಣ್ಣ, ಮತ್ತಿತರರು ವಹಿಸಿದ್ದರು. ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತೋಟ ಕಾರ್ಮಿಕರ ಪ್ರತಿಭಟನೆ

ಕಾಫಿ ತೋಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕನಿಷ್ಠ ವೇತನ ತಿಂಗಳಿಗೆ ರೂ. 10,000/- ನೀಡಬೇಕು. ಸಣ್ಣ ತೋಟಗಳ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚನೆ ಹಾಗೂ ತೋಟ ಕಾರ್ಮಿಕರ ತಿದ್ದುಪಡಿ ಕಾಯ್ದೆಗೆ ಕಾನೂನು ರಚಿಸುವಂತೆ ಒತ್ತಾಯಿಸಿ 18-1-2012 ರಂದು ಸಿಐಟಿಯು ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು. ಈ ಸಭೆಯಲ್ಲಿ ರಾಜ್ಯ ಮುಖಂಡರಾದ ಕಾಂ॥ ಬಾಲಕೃಷ್ಣ ಶೆಟ್ಟಿಯವರು ಬಾಗವಹಿಸಿ ಮಾತನಾಡಿ ಕಾರ್ಮಿಕರಿಗೆ ನೀಡಬೇಕಾದ ಮೂಲ ಸೌಕರ್ಯವನ್ನು ನೀಡದೇ ಸರ್ಕಾರ ವಂಚಿಸುತ್ತಿದೆ. ಸರ್ಕಾರದ ಮಂತ್ರಿಗಳು ಭ್ರಷ್ಟರಾಗಿದ್ದು ಒಬ್ಬೊಬ್ಬರಾಗಿ ಜೈಲು ಸೇರುತ್ತಿದ್ದಾರೆ. ಕಾರ್ಮಿಕ ಮಂತ್ರಿಗೆ ಕಾರ್ಮಿಕರ ಬಗ್ಗೆ ಕಾಳಜಿ ಇಲ್ಲದಾಗಿದೆ. ಕನಿಷ್ಠ ವೇತನ ಜಾರಿಗೆ ಮೀನಾಮೇಷ ಎಣಿಸುತ್ತಿದ್ದಾರೆ. ಗುತ್ತಿಗೆ ಪದ್ಧತಿ ವ್ಯಾಪಕವಾಗುತ್ತಿದೆ. ಹಂಗಾಮಿ ಹೆಸರಿನಲ್ಲಿ ವರ್ಷವಿಡೀ ದುಡಿಯುತ್ತಿರುವ ಕಾರ್ಮಿಕರಿಗೆ ಅಕ್ರಮ ಪದ್ಧತಿಯಿಂದಾಗಿ ತೋಟ ಕಾರ್ಮಿಕರಿಗೆ ಯಾವುದೆ ಸೌಲಭ್ಯ ಸಿಗದೆ ವಂಚಿತರಾಗುತ್ತಿದ್ದಾರೆ ಎಂದು ಹೇಳಿದರು.

ಈ ಸಭೆಯನ್ನು ಉದ್ದೇಶಿಸಿ ಅಧ್ಯಕ್ಷರಾದ ಕಾಂ॥ ದುರ್ಗಾಪ್ರಸಾದ್, ಮಾತನಾಡಿ ತೋಟದಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ತೋಟ ಕಾರ್ಮಿಕ ಕಾಯ್ದೆ ಹಾಗೂ ಸರ್ಕಾರ ಘೋಷಿಸಿರುವ ಯಾವುದೇ ಸಾಮಾಜಿಕ ಭದ್ರತೆ ಸೌಲಭ್ಯ ಇಲ್ಲದಂತಾಗಿದ್ದು ಈ ಬಗ್ಗೆ ಕೂಡಲೇ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಕಾರ್ಯದರ್ಶಿ ಮಹದೇವ ಮಾತನಾಡಿ ಕಾರ್ಮಿಕರ ಬಗ್ಗೆ ಸರ್ಕಾರ ಕಾಳಜಿ ವಹಿಸುತ್ತಿಲ್ಲ. ಕನಿಷ್ಠ ವೇತನ ಜಾರಿಯಾಗಿಲ್ಲ. ಕಾರ್ಮಿಕರು ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದಾರೆ. ಕಾರ್ಮಿಕ ಕಾನೂನು ಸಮರ್ಪಕವಾಗಿ ಜಾರಿಯಾಗಬೇಕೆಂದು ಒತ್ತಾಯಿಸಿದರು. ಈ ಸಭೆಯಲ್ಲಿ ರಮೇಶ್, ಆರ್‌ಮುಗಂ, ಕೃಷ್ಣ ಕುಮಾರ್ ಭಾಗವಹಿಸಿದ್ದರು.

ವರದಿ–ರಮೇಶ್.ಹೆಚ್.ಬಿ.

ಸ್ಟೀಲ್ ಕಾರ್ಮಿಕರ ಹೋರಾಟ– ಹಾಸನ

ಹಾಸನ ನಗರದ ಹೊರವಲಯದ ಕಂಚನಹಳ್ಳಿ ಪ್ರದೇಶದಲ್ಲಿರುವ ಮೆ॥ ಹರಿಯಾಣ ಸ್ಟೀಲ್ ವಿಂಡ್ ಪವರ್ ಕಾರ್ಖಾನೆಯ ಸುಮಾರು 150 ಕಾರ್ಮಿಕರು ತಮ್ಮ 15 ಜೊತೆ ಕೆಲಸಗಾರರಿಗೆ ಆಡಳಿತ ಮಂಡಳಿಯವರು ಅಕ್ರಮವಾಗಿ ಕೆಲಸ ನಿರಾಕರಿಸಿದ್ದನ್ನು ಪ್ರತಿಭಟಿಸಿ ನಡೆಸುತ್ತಿದ್ದ ಮಿಂಚಿನ ಮುಷ್ಕರವನ್ನು ಚಿಕ್ಕಮಗಳೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಾದ ಶ್ರೀವಳ್ಳಿ, ಹಾಸನ ಜಿಲ್ಲಾ ಕಾರ್ಮಿಕ ಅಧಿಕಾರಿ ಗುರುಪ್ರಸಾದ್ ಸಿಐಟಿಯು ಜಿಲ್ಲಾಧ್ಯಕ್ಷರಾದ ವಿ.ಸುಕುಮಾರ್ ಮತ್ತಿತರ ಮುಖಂಡರ ಮಧ್ಯಪ್ರವೇಶದಿಂದ ಆಡಳಿತ ಮಂಡಳಿಯವರೊಡನೆ ನಡೆಸಿದ ಸುದೀರ್ಘ ಮಾತುಕತೆಯ ನಂತರ ತಕ್ಷಣದಿಂದ ಕೆಲಸ ನಿರಾಕರಿಸಲ್ಪಟ್ಟ 15 ಜನ ಕಾರ್ಮಿಕರಿಗೆ ಕೆಲಸವನ್ನು ಕೊಡಲು ಹಾಗೂ ಎಲ್ಲಾ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಲು ನೀಡಿದ ಭರವಸೆಯ ಮೇರೆಗೆ ಮುಷ್ಕರವನ್ನು ತಾತ್ಕಾಲಿಕವಾಗಿ ಮುಕ್ತಾಯಗೊಳಿಸಲಾಗಿದೆ.

ವಿವಿಧ ಕಾರ್ಮಿಕ ಕಾಯ್ದೆ – ಕಾನೂನುಗಳ ಸೌಲಭ್ಯ ನಿರಾಕರಣೆಯ ವಿರುದ್ಧ, ವೇತನ ಹೆಚ್ಚಳದ ಬಗ್ಗೆ ಹಾಗೂ ಸದರಿ ಸಹಾಯಕ ಆಯುಕ್ತರ ಮುಂದೆ ಕಾರ್ಖಾನೆ ಹಾಗೂ ಬಾಯ್ಲರ್ ಹಿರಿಯ

ಪುಟ 15ಕ್ಕೆ......

ಸಂಪಾದಕೀಯ- ಬರ ಕಾಮಗಾರಿ ನಿರ್ಲಕ್ಷ್ಯ ಸಲ್ಲದು

ರಾಜ್ಯದಲ್ಲಿ 123 ತಾಲೂಕುಗಳು ತೀವ್ರ ಬರಗಾಲಕ್ಕೆ ತುತ್ತಾಗಿದ್ದು ನೀರು, ಮೇವಿನ ವ್ಯವಸ್ಥೆ ಕೂಡಲೇ ಮಾಡಬೇಕೆಂದು ಜಿಲ್ಲಾಡಳಿತಗಳಿಗೆ ತಾಕೀತು ಮಾಡುವ ಸರ್ಕಾರದ ಇಂದಿನ ಕ್ರಮದ ಹಿಂದಿನ ನಿಜ ಕಾಳಜಿಯೇ ಪ್ರಶ್ನಾರ್ಹವಾಗಿದೆ. ತೀವ್ರ ಮಳೆಯ ಅಭಾವದಿಂದ ಸುಮಾರು 83 ತಾಲೂಕುಗಳು ಬರದ ದವಡೆಗೆ ಈಡಾಗುವ ಸಮೀಕ್ಷೆ ಇರುವಾಗಲೂ ಅದನ್ನೆದುರಿಸಲು ಯಾವುದೇ ಪೂರ್ವ ಸಿದ್ಧತೆ ಮಾಡಿಕೊಳ್ಳದೇ, 2000 ಕೋಟಿ ರೂಪಾಯಿಗಳ ಕೇಂದ್ರದ ನೆರವಿಗೆ ಕೇವಲ ಮನವಿಮಾಡಿ ಕೈಬಿಟ್ಟ ಕ್ರಮವೇ ಜವಾಬ್ದಾರಿಯುತವಾದುದಲ್ಲ. ಬೇಸಿಗೆ ಕಾಲದ ಆರಂಭದೊಂದಿಗೆ ತೀವ್ರ ತರವಾಗಿ ನೀರು, ಮೇವಿನ ಕೊರತೆ ಕಾಣಿಸಿಕೊಂಡಿದೆ. ಈ ಕೊರತೆ ನೀಗಲು 100 ಕೋಟಿ ಬಿಡುಗಡೆ ಮಾಡಿರುವುದಾಗಿ ಭರವಸೆಯ ಪುನರುಚ್ಛಾರವೇ ಆಗಿದೆ. ಮು.ಮಂ.ಗಳೇ ಹೇಳಿರುವಂತೆ 169 ಕೋಟಿ ರುಪಾಯಿಗಳು ಇದಕ್ಕಾಗಿ ಸರ್ಕಾರದಲ್ಲಿ ಲಭ್ಯವಿದ್ದು ಅದನ್ನು ಬಳಸಬೇಕೆಂದು ಹೇಳಿರುವುದು ಜಾರಿಯಾಗಬೇಕಿದೆ. ಮತ್ತು ಅದನ್ನು ಪ್ರಾಮಾಣಿಕವಾಗಿ ಖರ್ಚು ಮಾಡಬೇಕಿದೆ. ಬರದ ನಿರ್ವಹಣೆ, ಪರಿಹಾರ ನೀಡಿಕೆಯ ಹೊಣೆಯನ್ನು ಕೇವಲ ಜಿಲ್ಲಾಡಳಿತದ ಮೇಲೆ ಮಾತ್ರ ಹಾಕಿ ರಾಜ್ಯ ಸರ್ಕಾರ ಕೈ ಕಟ್ಟಿ ಕುಳಿತುಕೊಳ್ಳುವುದು ಕೂಡದು. ನಿರಂತರವಾಗಿ ನಿಗಾ ಮತ್ತು ಸೂಕ್ತ ನಿರ್ದೇಶನ, ಸಹಕಾರ ನೀಡಬೇಕು.ಆದರೆ ಸದಾ ಕಿತ್ತಾಟದಲ್ಲೇ ಸರಕಾರ ಮಗ್ನವಾಗಿರುವಾಗ ಎಂತಹ ನ್ಯಾಯ ಒದಗಬಹುದು?

ಪ್ರಸಕ್ತವಾಗಿ ಸರ್ಕಾರ ಕೇವಲ ನೀರು, ಮೇವಿನ ಬಗ್ಗೆ ತರಾತುರಿಯ ಮಾತುಗಳನ್ನು ಆಡುತ್ತಿದೆ. ಅದರ ಲಕ್ಷ್ಯ ಹಾಳಾದ ಕೃಷಿಯತ್ತ, ದುಡಿಮೆಯೂ ಇಲ್ಲದೇ ಉದ್ಯೋಗ ಹೀನತೆಯಿಂದ ಕಂಗಾಲಾಗಿರುವ ಜನರತ್ತ ಇಲ್ಲವಾಗಿದೆ. ಈ ಪ್ರದೇಶಗಳಲ್ಲಿ ಗ್ರಾಮಾಂತರ ಉದ್ಯೋಗ ಸೃಷ್ಟಿಗೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನಷ್ಟೇ ಬಳಸಲು ಸೂಚಿಸಿರುವುದು ನಿಜಕ್ಕೂ ಪರಿಹಾರವನ್ನು ಸರ್ಕಾರ ನೀಡಿದಂತೆಯೇ ಅಲ್ಲ. ನಮ್ಮ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ಜನರ ನಡುವೆ ಜಾರಿಗೊಳಿಸುವಲ್ಲಿ ಪೂರ್ಣ ನಿರ್ಲಕ್ಷ್ಯ ತೋರಲಾಗಿದೆ. ಮತ್ತು ಕೆಲಸ ನೀಡದೇ ಹಣವನ್ನು ನುಂಗಿದ ಭ್ರಷ್ಟಾಚಾರದ ಪ್ರಕರಣಗಳು ಹೊರಬರುತ್ತಿವೆ. ಇದನ್ನು ಸರಿ ಪಡಿಸದೇ, ಇಚ್ಛಾ ಶಕ್ತಿಯೂ ಇಲ್ಲದ ಸರ್ಕಾರ ರೇಗಾ ಯೋಜನೆ ಬಳಕೆಯ ಬಗ್ಗೆ ಮಾತನಾಡುವುದು ವಂಚನೆಯದ್ದಾಗಿದೆ. ಈಗಲಾದರೂ ಈ ಯೋಜನೆ ಜಾರಿಗೆ ಕೇವಲ ಮಾತನ್ನಾಡುವುದನ್ನು ಬಿಟ್ಟು ಪ್ರಾಮಾಣಿಕವಾಗಿ ಜಾರಿಯಾಗಲು, ಕೆಲಸ ,ಕೂಲಿ ನೀಡುವ ಯೋಜನೆಗಳನ್ನು ರೂಪಿಸಿ, ಹಣದ ಸಂಪನ್ಮೂಲ ಒದಗಿಸಿ ಜನತೆಯ ಸಹಾಯಕ್ಕೆ ಬರಬೇಕು. ಆದರೆ ಪ್ರತೀ ಬರಗಾಲವನ್ನೂ ಲೂಟಿ ಹೊಡೆಯಲು, ಆಸ್ತಿ ಲಪಟಾಯಿಸುವ ಸಂದರ್ಭವನ್ನಾಗಿ ನೋಡುವ ಶೋಷಕ ವರ್ಗಹಿತಾಸಕ್ತಿಗಳ ಎದುರಿನಲ್ಲಿ ಇದು ಎಷ್ಟು ಸಾಧ್ಯವೆಂಬ ಪ್ರಶ್ನೆ ಏಳುತ್ತದೆ.

ಆದರೆ ಸದಾ ಅಧಿಕಾರದಾಹ, ಕಿತ್ತಾಟ ಜನರ ಸಮಸ್ಯೆಗಳನ್ನು ಪೂರ್ಣ ನಿರ್ಲಕ್ಷಿಸಿದ, ಭೋಗಲಾಲಸೆಗಳಲ್ಲಿ ಮುಳುಗಿದ ಜನಪ್ರತಿನಿಧಿಗಳಿರುವಾಗ ಮತ್ತು ಆಡಳಿತವೇ ಎಲ್ಲಾ ಹಂತಗಳಲ್ಲಿಯೂ ಪೂರ್ಣ ವಿಫಲವಾಗಿ, ಸರ್ಕಾರವೇ ಜನರ ಪಾಲಿಗೆ ಇಲ್ಲದಿರುವ ಸಂದರ್ಭ ಇರುವಾಗ ಜನರಿಗೆ ಪರಿಹಾರ ಒದಗಿಸುವುದು ಅಸಾಧ್ಯವೇ ಸರಿ. ಇಂತಹ ಸರ್ಕಾರ, ಆಡಳಿತವನ್ನು ಸರಿದಾರಿಗೆ ತರಲು, ಜನರೇ ಕ್ರಮ ವಹಿಸಬೇಕು.

ಜಾನುವಾರು ಹತ್ಯೆ ನಿಷೇದ ಕಾಯ್ದೆ ರದ್ದಾಗಲಿ

ಕರ್ನಾಟಕದ ಬಿಜೆಪಿ ಸರ್ಕಾರವು ಅಂಗೀಕಾರಕ್ಕೆಂದು ಕಳುಹಿಸಿದ್ದ ಜಾನುವಾರು ಹತ್ಯೆ ನಿಷೇಧ ಕಾಯ್ದೆಯನ್ನು ರಾಷ್ಟ್ರಪತಿಗಳು ಹಿಂತಿರುಗಿಸಿರುವುದು ಸ್ವಾಗತಾರ್ಹ. ಈ ಕಾಯ್ದೆಯಲ್ಲಿರುವ 'ಎಮ್ಮೆ' ಯನ್ನು ಕೈಬಿಡುವ ಮತ್ತು ಇತರೆ ಸಣ್ಣ ಕೆಲ ಬದಲಾವಣೆ ಗಳನ್ನು ಮಾಡಿ ಕಳುಹಿಸುವಂತೆ ರಾಷ್ಟ್ರಪತಿಗಳು ತಿಳಿಸಿದ್ದಾರೆರಿದು ಮುಖ್ಯಮಂತ್ರಿ ಸದಾನಂದಗೌಡರು ಹೇಳಿದ್ದಾರೆ. ಆದರೆ ಇತರೆ 'ಸಣ್ಣ' ಎಂಬುದು ಏನು ಎಂಬುದೇ ಪ್ರಶ್ನೆ. ವಿಶೇಷವಾಗಿ ತಿದ್ದುಪಡಿಗೊಂಡು ಕಳುಹಿಸಿದ ಇಡೀ ಈ ಕಾಯ್ದೆಯನ್ನು ಮತೀಯ ದ್ವೇಷದ ಕಿಚ್ಚು ಹೊತ್ತಿಸಲು ಈ ಕೋಮುವಾದಿ ಸರಕಾರ ತಂದದ್ದು ಮತ್ತು ಸಂವಿಧಾನದ ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆಯ ಮೂಲ ಆಶಯಕ್ಕೆ ವಿರೋಧವಾದುದು. ಮುಖ್ಯವಾಗಿ ಇದು ರೈತರ ವಿರೋಧಿ, ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ತಂದದ್ದು ಮತ್ತು ಪ್ರಜೆಗಳ ಆಹಾರ (ಮಾಂಸಾಹಾರ)ದ ಹಕ್ಕಿನ ಮೇಲೆ ನಡೆಸಿದ ಧಾಳಿ. ಅಲ್ಲದೇ ವಿಚಾರಣೆ ಇಲ್ಲದೇ ಜೈಲಿಗೆ ತಳ್ಳುವ, ಹತ್ತಾರು ಸಾವಿರ ದಂಡ ವಿಧಿಸುವತಂಹ ಕ್ರೂರ ಶಿಕ್ಷೆಗಳಿರುವ ಕಾಯ್ದೆಯಾಗಿದೆ. ಈ ಹಿನ್ನೆಲೆಯಲ್ಲೇ ಇಡೀ ಮಸೂದೆಯನ್ನೇ, ನಂತರ ಕಾಯ್ದೆಯನ್ನೇ ತಿರಸ್ಕರಿಸಬೇಕೆಂಬ ಕೂಗು, ಪ್ರತಿರೋಧವು ವ್ಯಾಪಕತೆಯನ್ನು ಪಡೆಯಿತು. ರಾಜ್ಯಪಾಲರ ಆಕ್ಷೇಪವನ್ನು ಪರಿಗಣಿಸದೇ ಶಾಸನ ಸಭೆಯಲ್ಲಿ ಸರಿಯಾಗಿ ಚರ್ಚೆಯನ್ನೂ ನಡೆಸದೇ ತರಾತುರಿಯಲ್ಲಿ ಅಂಗೀಕರಿಸಿ ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಲಾಗಿತ್ತು ಎಂಬುದು ಈ ಸರ್ಕಾರ ಹೊಂದಿದ ದುರುದ್ದೇಶವನ್ನು ಸಾರುತ್ತದೆ.

ರಾಜ್ಯಪಾಲರ ತೀವ್ರ ಆಕ್ಷೇಪ, ರಾಷ್ಟ್ರಪತಿಗಳು ಹಿಂತಿರುಗಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕಾಯ್ದೆಯನ್ನು ಮತ್ತೇ ತಿದ್ದುಪಡಿ ಮಾಡಿ ಅಂಗೀಕಾರಕ್ಕೆ ಪುನಃ ಕಳುಹಿಸುವ ನಿರ್ಧಾರವನ್ನು ಕೈ ಬಿಡಬೇಕು. ಮಾತ್ತವಲ್ಲ ಗೋ ರಕ್ಷಣಾ ಆಯೋಗ ರಚಿಸುವ ಪ್ರಸ್ತಾಪವನ್ನು ಮುಖ್ಯಮಂತ್ರಿಗಳು ಪ್ರಕಟಿಸಿದ್ದು ಅದನ್ನು ಕೈ ಬಿಡಬೇಕು. ಜಾನುವಾರು-ಗೋವುಗಳ ಹೆಸರಿನಲ್ಲಿ ನರಹತ್ಯೆ ನಡೆಯಕೂಡದು ಎಂಬ ಕನಿಷ್ಠ ಕಾಳಜಿ ನಾಗರೀಕ ಸರಕಾರವೊಂದಕ್ಕಿರುವುದನ್ನು ನೆನಪಿಡಬೇಕು.ಇದೇ ಹೊತ್ತಿನಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಇತ್ತೀಚೆಗೆ ಇಂತಹುದೇ ಕಾಯ್ದೆಗೆ ರಾಷ್ಟ್ರಪತಿಗಳು ಅಂಕಿತಹಾಕಿರುವುದು ಗಂಭೀರವಾದ ವಿಚಾರವಾಗಿದೆ. ಆದ್ದರಿಂದ ಕರ್ನಾಟಕ ಸರಕಾರ ಕಾಯ್ದೆಯನಲ್ಲು ಕಳುಹಿಸದಂತೆ ಆಗ್ರಹಿಸಿ ತೀವ್ರ ಜನಾಂದೋಲನ ನಡೆಸಬೇಕಿರುವುದು ಜರೂರಾಗಿದೆ.

ಅಧಿಕಾರ ದಾಹಿಗಳ ಮತ್ತೊಂದು ಕಿತ್ತಾಟ

ಬಿಜೆಪಿಯೊಳಗೆ ಮತ್ತೇ ಭಿನ್ನ ಮತ ಭುಗಿಲೆದ್ದಿದೆ. ಯಡಿಯೂರಪ್ಪನವರು ತಮ್ಮನ್ನು ಮತ್ತೇ ಮುಖ್ಯಮಂತ್ರಿಯನ್ನಾಗಿಸಬೇಕೆಂದು ಹೈಕಮಾಂಡ್ ಮೇಲೆ ಒತ್ತಡ ಹೇರಲು ಔತಣ ಕೂಟಕ್ಕೆಂದು ಆಹ್ವಾನಿಸಿ ತಮ್ಮ ಬೆಂಬಲಿಗ, ನಿಷ್ಠ ಶಾಸಕರ ಬಲ ಪ್ರದರ್ಶನಕ್ಕೆ ಇಳಿದು ಯಶಸ್ವಿಯೂ ಆಗಿದ್ದಾರೆ. ಈಗೇನಿದ್ದರೂ ಚಿಂತನ-ಮಂಥನ ಸಭೆಗೆ ಬರಲಿರುವ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿಗೆ ಅಹವಾಲು ಸಲ್ಲಿಕೆ ಅರ್ಥಾತ್ ಎಚ್ಚರಿಕೆ!

ಯಡಿಯೂರಪ್ಪ ತನ್ನನ್ನು ಸಿ.ಎಂ. ಮಾಡಿರೆಂದು ದಬಾಯಿಸುತ್ತಾ, ಇನ್ನೊಂದೆಡೆ ಹೈಕಮಾಂಡ್‌ನ ದುಂಬಾಲು ಬೀಳುತ್ತಾ ದೆಹಲಿ-ಕಾಶೀ ಯಾತ್ರೆಗಳನ್ನು ನಡೆಸುತ್ತಿರುವುದು ನಿತ್ಯ ನಡೆಯುವ ಸಂಗತಿ.ಅಧಿಕಾರದ ಹಪಾಹಪಿಯಲ್ಲಿ ಕುದಿಯುತ್ತಿರುವ ಅವರಿಗೆ 'ಮೊದಲು ಆರೋಪಗಳಿಂದ ಮುಕ್ತರಾಗಿಬನ್ನಿ, ನಂತರ ನೋಡೋಣ 'ಎಂಬ ಸಾಂತ್ವನದ ಉಪದೇಶ ಸಮಾಧಾನ ತರಲು ಸಾಧ್ಯ ಹೇಗೆ?.



ಕಹಳೆ ಊದಿದ ಕಾರಣ!

ಸದಾನಂದಗೌಡರು ಮುಂದುವರಿಯಲೆಂದು ಹೇಳುವಾಗಲೂ ಎಲ್ಲದರ ಫಲಾನುಭವಿಯಾಗಿರುವ ಹೈಕಮಾಂಡ್ ಹೇಳಿದ್ದನ್ನು ಪಾಲಿಸಿ ಎಂದು ನಿರ್ದೇಶಿಸುವ ಶಕ್ತಿಯೂ ಈ ಶಿಸ್ತಿನ ಪಕ್ಷಕ್ಕಿಲ್ಲ. ಅಂದು ರಾಜಿನಾಮೆ ಕೊಡಿಸುವಾಗ ನೀಡಿದ್ದ ಭರವಸೆಗಳಾದರೂ ಏನು ? ಇದ ಬಲ್ಲವರು ಅವರುಗಳೇ, ತಮ್ಮದು ಪಾರದರ್ಶಕ ಆಡಳಿತವೆಂದು ಬಿಜೆಪಿ ಹೇಳಿಕೊಂಡರೂ ಇಲ್ಲಿ ಯಾವುದೂ ಪಾರದರ್ಶಕವಿಲ್ಲ. 'ಆರು ತಿಂಗಳೊಳಗೆ ಮತ್ತೇ ಬರ್ತೀನ್ರೀ' ಎಂದು ಉನ್ನತ ಅಧಿಕಾರಿಗಳಿಗೆ ಇವರು ಹೇಳಿ ನಿರ್ಗಮಿಸಿದ್ದರಲ್ಲ ಅದರರ್ಥ..? ಆ ಬಳಿಕ ಏನೂ ಆಗದಿರುವುದರಿಂದ ಈಗ ಏಳು ತಿಂಗಳಾಯಿತೆಂದು ಕಹಳೆ ಊದುತ್ತಿದ್ದಾರೆಯೇ?.

'ಅವರು ಕೇವಲ ಆರೋಪಿಗಳು ಮಾತ್ರ, ಅಪರಾಧಿಗಳಲ್ಲ'ವೆಂದು ಬಿಜೆಪಿ ನಾಯಕ ಗಣ ಹೊರಗೆ ಎಷ್ಟೇ ಹೇಳಿಕೊಂಡರೂ ಅವರನ್ನು ಮೂಲೆಗೊತ್ತುವ ಪ್ರಯತ್ನಗಳೇನು ನಿಂತಿಲ್ಲ. ಈ ಮಾಜಿ ಸಿಎಂ ಅಧಿಕಾರಕ್ಕೇರಲು ಹಲವಾರು ವರಸೆ ನಡೆಸಿದ್ದೂ ಕಡಿಮೆಯೇನಲ್ಲ.

ಹಾಗೇ ಈ ಬಾರಿಯ ಭಿನ್ನಮತದ ಸ್ಫೋಟ, ಬಹಿರಂಗ ಕಿತ್ತಾಟಕ್ಕೆ ಕಾರಣಗಳಾದರೂ ಏನು?.

ಬಿಜೆಪಿ ಈಗ ಪೂರ್ಣ ಒಡೆದ ಮನೆ. ಅಲ್ಲೀಗ ಇರುವುದು ಒಂದೆರಡಲ್ಲ ಹಲವು ಗುಂಪುಗಳು. ಯಡ್ಡಿ, ರೆಡ್ಡಿ, ಅನಂತ್, ಶೆಟ್ಟರ್,... ಎಲ್ಲರೂ ಮುಖ್ಯಮಂತ್ರಿ ಪಟ್ಟಾಕಾಂಕ್ಷಿಗಳೇ. ಇದರ ಹಿಂದಿರುವುದು ಭೂ ಹಾಗೂ ಗಣಿ ಮಾಫಿಯಾಗಳ ಒತ್ತಾಸೆಗಳೆ.

ಹಲವು ಲೆಕ್ಕಾಚಾರಗಳು

ಈ ಬಾರಿ ಯಡಿಯೂರಪ್ಪ ಯುದ್ಧ ಸಾರಿರುವುದರ ಹಿಂದೆ ಹಲವಾರು ಪ್ರಮುಖ ಬೆಳವಣಿಗೆಗಳು ಇವೆ. 'ಅಧಿಕಾರದ ಆಶೆ ಈಗ ಬಿಡಿ.' ಎಂದೆಲ್ಲಾ ಆರೆಸ್ಸೆಸ್, ಬಿಜೆಪಿ ಹೈಕಮಾಂಡ್ ಏನೆಲ್ಲಾ ಹೇಳಿದರೂ ಕೇಳುವ ಸ್ಥಿತಿಯಲ್ಲಿ ಯಡಿಯೂರಪ್ಪ ಇಲ್ಲವೇ ಇಲ್ಲ. ಕಾರಣ, ಈಗಾಗಲೇ ಹಲವಾರು ಪ್ರಮುಖ ಭೂ ಡಿನೋಟಿಫಿಕೇಷನ್, ಅಕ್ರಮ ಗಣಿಗಾರಿಕೆ-ಸಾಗಾಣಿಕೆಯ ಹಗರಣಗಳು, ಭ್ರಷ್ಟಾಚಾರದ ಪ್ರಕರಣದಲ್ಲಿ, ಲೋಕಾಯುಕ್ತವನ್ನು ಒಳಗೊಂಡು ಹಲವಾರು ಹಂತಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಹಲವಾರು ಬಲವಾದ ಸಾಕ್ಷ್ಯಗಳಿವೆ. ಇದು ಸಾಬೀತಾಗದಂತಿರಬೇಕಾದರೆ ಅಧಿಕಾರದ ಪ್ರಮುಖ ಸ್ಥಾನದಲ್ಲಿದ್ದರೆ, ಮಾತ್ರವೇ ಕರತಾಲ ಮಲಕ ಯಕ್ಷಿಣಿ ಮಾಡಬಹುದೆಂಬ ಲೆಕ್ಕಾಚಾರ. ಆದರೆ ಸದಾನಂದರಿಂದ ಅದು ಆಗುತ್ತಿಲ್ಲ, ಮಾಡುತ್ತಿಲ್ಲ. ಹೀಗಾಗಿಯೇ ಅವರನ್ನು ಬದಲಾಯಿಸಬೇಕು ಎಂಬುದು ಯಡಿಯೂರಪ್ಪ ನವರ ವರಾತ. ಆದರೆ ಇವೇ ಪ್ರಕರಣಗಳನ್ನು ಹಿಡಿದು ಯಡಿಯೂರಪ್ಪನವರ ಬಣವನ್ನು ಹಣ್ಣುಕಾಯಿ, ನೀರುಗಾಯಿ ಮಾಡಿ ಮೇಲುಗೈ ಸಾಧಿಸಬೇಕೆಂಬುದು ವಿರೋಧಿಗಳ ಲೆಕ್ಕಾಚಾರ!.

ರಾಜಕೀಯವಾಗಿ ಯಡಿಯೂರಪ್ಪನವರು ತೋರಿಸುತ್ತಿದ್ದ ಲಿಂಗಾಯತರ ಜಾತಿ ಬೆಂಬಲದ ನೆಲೆ ಒಲ್ಲೆಕೆಗೆ ಮಠಾಧೀಶರ ಮೂಲಕವೇ ಅನಂತಕುಮಾರ್, ಈಶ್ವರಪ್ಪ, ಸದಾನಂದಗೌಡರು ಕೈ ಹಾಕಿದ್ದು ಯಡಿಯೂರಪ್ಪಗೆ ನೀಡಿದ ಮರ್ಮಾಘಾತವೇ ಆಯಿತು.

ಗೋಕಾಕ್‌ನಲ್ಲಿ ನಡೆದ ಪಂಚಮಸಾಲಿ ಲಿಂಗಾಯತ ಸಮಾವೇಶಕ್ಕೆ ಹಾಗೂ ತುಮಕೂರು ಸಿದ್ಧಗಂಗಾ ಮಠದಲ್ಲಿನ ಬೃಹತ್ ಲಿಂಗ ಸ್ಥಾಪನೆ ಅಡಿಗಲ್ಲು ಸಮಾರಂಭದಲ್ಲಿ ಯಡಿಯೂರಪ್ಪನವರನ್ನು ಆಹ್ವಾನಿಸದೇ ಕೈಬಿಟ್ಟು

ಪುಟ 15ಕ್ಕೆ......

ಕಾರ್ಟೂನ್ ಕಾರ್ನರ್



ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ)ನ ರಾಜ್ಯ ಸಮಾವೇಶ ಬೆಂಗಳೂರು ನಗರದ ಕೆ.ಎಚ್.ಪಾಟೀಲ್ ಸಭಾಂಗಣದಲ್ಲಿ ಫೆಬ್ರವರಿ 18 ಮತ್ತು 19 ರಂದು ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು. ಯುವಜನ ಬಜೆಟ್.. ಯುವಜನ ಬಜೆಟ್... ಎಂದು ಬಿಜೆಪಿ ಸರ್ಕಾರ ಬೊಬ್ಬೆ ಹೊಡೆಯುತ್ತಿರುವ ಸಂದರ್ಭದಲ್ಲಿ ನಮ್ಮ ಕೇಂದ್ರ ರಾಜ್ಯ ಸರ್ಕಾರಗಳು ಯುವಜನರ ಬದುಕಿನ ಪ್ರಶ್ನೆಯಲ್ಲಿ ನಿಜಕ್ಕೂ ಅನುಸರಿಸುತ್ತಿರುವ ಧೋರಣೆ ಏನು? ಯುವಜನ ಬಜೆಟ್ ಮಂಡಿಸುವುದೇ ಆದಲ್ಲಿ ಅದು ನಿಜಕ್ಕೂ ಹೇಗಿರಬೇಕು ಎಂಬ ಕುರಿತು ಚರ್ಚೆಗಳು ಸಂಘಟಿಸಲಾಗಿತ್ತು. ಸಮಾರಂಭದ ವರದಿ–ಬದಲಿ ನೀತಿಗಳ ಕಣ್ಣೋಟದ ಕುರಿತ ಲೇಖನವನ್ನು(ಪುಟ 5) ಇಲ್ಲಿ ನೀಡಲಾಗಿದೆ.

"ಉದ್ಯೋಗ ನಾಶದ ಜಾಗತೀಕರಣದ ಯುಗದಲ್ಲಿ ನಷ್ಟದ ರಾಷ್ಟ್ರೀಕರಣ, ಲಾಭದ ಖಾಸಗೀಕರಣ ? !"

ಯಶಸ್ವಿ ಡಿವೈಎಫ್ಐ ರಾಜ್ಯ ಸಮಾವೇಶದಲ್ಲಿ ಎಂ.ಬಿ.ರಾಜೇಶ್

1990ರಲ್ಲಿ ಸೋವಿಯತ್ ಒಕ್ಕೂಟವು ಕುಸಿದಾಗ ಅದನ್ನು ಇತಿಹಾಸದ ಕೊನೆ.... ಸಿದ್ಧಾಂತದ ಅಂತ್ಯ.... ಎಂದೆಲ್ಲಾ ಲೇಖನ ಮಾಲೆಗಳನ್ನು ಬರೆಯಲಾಯಿತು. ಬಂಡವಾಳವಾದವೇ ಅಂತಿಮ ಅದೇ ಕೊನೆ ಎನ್ನಲಾಯಿತು.

"ಡೂಯಿಂಗ್ ಬಿಸಿನೆಸ್ ಇಸ್ ನಾಟ್ ದ ಬಿಸಿನೆಸ್ ಆಫ್ ದ ಗೌರ್ನ್‌ಮಂಟ್" ಅಂದರೆ "ಬಿಸಿನೆಸ್ ಮಾಡುವುದು ಸರ್ಕಾರದ ಬಿಸಿನೆಸ್ ಅಲ್ಲ" ಎಂದು ವಾದಿಸಲಾಯಿತು. ಈಗ ಎರಡು ದಶಕಗಳ ನಂತರ ಬಂಡವಾಳಶಾಹಿ ವ್ಯವಸ್ಥೆಯೇ ತೀವ್ರ ಬಿಕ್ಕಟ್ಟಿನಲ್ಲಿದೆ. ಅಂತರರಾಷ್ಟ್ರೀಯವಾಗಿ ಜಪಾನ್, ಯೂರೋಪಿಯನ್ ದೇಶಗಳು, ಅಮೆರಿಕ ಬಿಕಟ್ಟಿನಿಂದ ಹೊರಬರಲಾಗದೆ ಒದ್ದಾಡುತ್ತಿವೆ. ಸರ್ಕಾರದ ಸಹಾಯಕ್ಕಾಗಿ ಕೂಗು ಕೇಳಿ ಬರುತ್ತಿದೆ. ಸರ್ಕಾರಗಳು ಬಿಸಿನೆಸ್‌ನಲ್ಲಿ ಮಧ್ಯ ಪ್ರವೇಶ ಮಾಡುತ್ತಿವೆ. ಜನರಿಂದ ಸಂಗ್ರಹಿಸಲಾದ ತೆರಿಗೆಯ ಹಣದಿಂದ ಲಕ್ಷಾಂತರ ಕೋಟಿ ರೂಪಾಯಿಗಳ ನೆರವನ್ನು ಬಂಡವಾಳಗಾರರಿಗೆ, ಕಾರ್ಪೋರೇಟ್ ಕಂಪನಿಗಳ ಮಾಲಿಕರಿಗೆ ನೀಡಲಾಗುತ್ತಿದೆ. ಆದರೆ ದುಡಿಯುವ ಜನರ ಸೌಲಭ್ಯಗಳನ್ನು ಕಡಿತಗೊಳಿಸಿ ಅವರನ್ನು ಬೀದಿಗೆ ತಳ್ಳಲಾಗುತ್ತಿದೆ. ಈ ಪ್ರಕಿಯೆಯಲ್ಲಿ ಖಾಸಗಿ ಕಂಪನಿಗಳ ನಷ್ಟವನ್ನು ರಾಷ್ಟ್ರೀಕರಣ ಮಾಡಲಾಗುತ್ತಿದೆ ಹಾಗೂ ಸಾರ್ವಜನಿಕ ಕಂಪನಿ ಗಳ ಲಾಭವನ್ನು ಖಾಸಗೀಕರಣ ಮಾಡಲಾಗುತ್ತಿದೆ... ಎಂದು ಡಿವೈಎಫ್‌ನ ಅಖಿಲ ಭಾರತ ಉಪಾಧ್ಯಕ್ಷರೂ ಹಾಗೂ ಲೋಕಸಭಾ ಸದಸ್ಯರಾದ ಕಾಂ. ಎಂ.ಬಿ. ರಾಜೇಶ್ ಹೇಳಿದರು.

ಉದ್ಯೋಗ ನಾಶದ ನೀತಿಗಳು

ಈ ಅಂತರ ರಾಷ್ಟ್ರೀಯ ಬಿಕ್ಕಟ್ಟಿನ ದುಷ್ಪರಿಣಾಮ ಜಗತ್ತಿನ ಮೇಲೆ ಹಾಗೂ ಭಾರತದ ಮೇಲೆ ಆಗಿದೆ. ದೇಶದಲ್ಲಿ ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿಗೆ ಏನನ್ನೂ ಮಾಡುತ್ತಿಲ್ಲ. 20 ಲಕ್ಷ ಹುದ್ದೆಗಳು ಖಾಲಿ ಇವೆ. ಕರ್ನಾಟಕ ರಾಜ್ಯದಲ್ಲಿ 1.80 ಲಕ್ಷ ಹುದ್ದೆಗಳು ಖಾಲಿ ಇವೆ. 5 ಸಾವಿರ ಬ್ಯಾಕ್ ಲಾಗ್ ಹುದ್ದೆಗಳು ಖಾಲಿ ಇವೆ. ಕೇರಳದಲ್ಲಿ 'ಅನಗತ್ಯ' ನೌಕರರನ್ನು ಹುದ್ದೆಯಿಂದ ತೆಗೆಯಲು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರ ಸಮಿತಿ ನೇಮಿಸಿದೆ. ರಾಜ್ಯದ ಬಿಜೆಪಿ ಸರ್ಕಾರಕ್ಕೆ ನೈತಿಕತೆ ಎಂಬುದೇ ಇಲ್ಲ. ಈ ಸರ್ಕಾರದ ಸಚಿವರು ಸದನದಲ್ಲಿ ನೀಲಿ ಚಿತ್ರ ನೋಡುತ್ತಾರೆ. ಬಿಜೆಪಿ ಸರ್ಕಾರದ ಮುಖ್ಯಮಂತ್ರಿ, ಸಚಿವರು ಸಾಲು ಸಾಲಾಗಿ ಜೈಲು ಸೇರುತ್ತಿದ್ದಾರೆ. ಸು.ಎಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಕಾಮನ್ ವೆಲ್ತ್ ಹಗರಣದಲ್ಲಿ ಸಿಲುಕಿರುವ ಕಾಂಗ್ರೆಸ್ ಸಂಸದೀಯ ಪಕ್ಷದ ಕಾರ್ಯದರ್ಶಿ ಸುರೇಶ್ ಕಲ್ಮಾಡಿಯವರಿಗೆ ಎಲ್ಲ ಮುಗಿದ ಮೇಲೆ ಈಗ ಡೆಮನಷಿಯಾ ಕಾಯಿಲೆ ಅಂದರೆ 'ಮರೆವಿನ ರೋಗ' ಕಾಡುತ್ತಿದೆ. ಅಗತ್ಯ ವಸ್ತುಗಳ ಬೆಲೆಗಳು ಏರುತ್ತಿವೆ. ಯುವಜನ ಈ ಜನ ವಿರೋಧಿ ನೀತಿಗಳು, ಭ್ರಷ್ಟಾಚಾರಗಳ ವಿರುದ್ಧ ಹೋರಾಡಬೇಕು ಹಾಗೂ ಯುವಜನಪರ ಬಜೆಟ್‌ಗಾಗಿ ಪ್ರಬಲ ಆಂದೋಲನದ ಮೂಲಕ ಒತ್ತಡ ತರಬೇಕು. ಡಿವೈಎಫ್ಐ ಸಂಘಟನೆಯನ್ನು ಬಲಪಡಿಸಬೇಕು ಎಂದು ರಾಜೇಶ್ ಕರೆ ನೀಡಿದರು.

ಆರಂಭದಲ್ಲಿ ಡಿವೈಎಫ್ಐನ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಪ್ರಾಸ್ತಾವಿಕ ಮಾತುಗಳನ್ನಾಡಿ ರಾಜ್ಯದಲ್ಲಿ ನೇಮಕಾತಿ ಮೇಲೆ ನಿರ್ಬಂಧವಿದೆ, ಯುವಜನರ ಬದುಕು ದುರ್ಬರವಾಗಿದೆ. ಕಳೆದ ವರ್ಷ ರೈತ ಬಜೆಟ್ ಎಂದು ಮಂಡಿಸಿ, ರೈತರಿಗೆ ಏನನ್ನೂ ಕೊಡದೇ ಮೋಸಗೊಳಿಸಲಾಯಿತು. ಈ ವರ್ಷ ಯುವಜನ ಬಜೆಟ್ ಎನ್ನುತ್ತಾ ಯುವಜನರಿಗೆ ಮೋಸ ಮಾಡಲು ಸಂಚು ಮಾಡಲಾಗಿದೆ. ಯುವ ಬಜೆಟ್ ಮಂಡಿಸುವುದೇ ಆದಲ್ಲಿ ಅದರಲ್ಲಿ ಏನೇನಿರಬೇಕೆಂಬ ಪರ್ಯಾಯ ಬಜೆಟ್‌ನ ಸೂಚನೆಯನ್ನು ಡಿವೈಎಫ್ಐ ಸಲ್ಲಿಸಲಿದೆ. ಈ ಕುರಿತು ಸಮಾವೇಶದಲ್ಲಿ ಚರ್ಚಿಸಿ ಮುಖ್ಯ ಮಂತ್ರಿಗಳನ್ನು ಕಂಡು ಸೂಚನೆ ಸಲ್ಲಿಸಲಾಗುವುದು ಎಂದರು. ಲಿಂಗರಾಜು ವಂದಿಸಿದರು. ಸಮಾರಂಭದ ವೇದಿಕೆಯಲ್ಲಿ ಡಿವೈಎಫ್ಐನ ರಾಜ್ಯ ಪದಾಧಿಕಾರಿಗಳಾದ ಮುನೀರ್ ಕಾಟಿಪಳ್ಳ, ನಾಗರಾಜ್ ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಎಂದರೆ....



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಅಧ್ಯಕ್ಷರಾದ ಎನ್.ಎಲ್. ಭರತ ರಾಜು ಅವರು ಮಾತನಾಡಿ ಡಿವೈಎಫ್ಐ ಶಹೀದ್ ಭಗತ್ ಸಿಂಗರ ತ್ಯಾಗ ಬಲಿದಾನದ ಪರಂಪರೆಯಲ್ಲಿ ಬೆಳೆದು ಬಂದ ಸಂಘಟನೆ. 1980ರಲ್ಲಿ ಸ್ಥಾಪನೆಯಾದರೂ ಈ ಸಂಘಟನೆಯ ಮೂಲ ಬೇರು ಸಮ್ರಾಜ್ಯ ಶಾಹಿ ವಿರೋಧಿ ಪರಂಪರೆಯೊಂದಿಗೆ ಬೆಳೆದು ಬಂದಿದೆ. ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆಯಲ್ಲ. ಅನ್ಯಾಯ, ಅಸಮಾನತೆಯ ಬುನಾದಿ ಮೇಲೆ ನಿಂತಿರುವ ವ್ಯವಸ್ಥೆಯ ಬದಲಾವಣೆಯಾಗದೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂಬ ಭಗತ್ ಸಿಂಗರ ಚಿಂತನೆ ಮತ್ತು ಭಗತ್ ಸಿಂಗ್ ಹಾಗೂ ಅವರ ಸಂಗಡಿಗ ಸಂಗಾತಿಗಳ ಹೋರಾಟದ ಸ್ಫೂರ್ತಿಯೊಂದಿಗೆ ಕೆಲಸ ಮಾಡುತ್ತಿದೆ. ಕರ್ನಾಟಕದಲ್ಲಿಯೂ ಯುವಜನರ ನೈಜ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಡಿವೈಎಫ್ಐ ಹೋರಾಟ ನಡೆಸಲಿದೆ ಎಂದರು.

ಮಾರ್ಚ್ 15 ಪ್ರತಿಭಟನೆ

ರಾಜ್ಯದ ವಿವಿಧ ಜಿಲ್ಲೆಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಮಾರ್ಚ್ 15, 2012ರಂದು ಜಿಲ್ಲಾಧಿಕಾರಿ ಕಛೇರಿಯ ಮುಂದೆ ಸಮರ್ಪಕ ಯುವಜನ ಬಜೆಟ್ಟಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸುವುದು ಸೇರಿದಂತೆ ವಿವಿಧ ತೀರ್ಮಾನಗಳನ್ನು ಸಮಾವೇಶ ಕೈಗೊಂಡಿದೆ. ●



ಎನ್‌ಸಿಟಿಸಿ ವಿವಾದ :
ಒಕ್ಕೂಟ ತತ್ವಕ್ಕೆ ಅಪಚಾರದ ಇನ್ನೊಂದು ಉದಾಹರಣೆ

ಯುಪಿಎ-2 ಸರಕಾರ 'ರಾಷ್ಟ್ರೀಯ ಪ್ರತಿ-ಭಯೋತ್ಪಾದನೆ ಕೇಂದ್ರ (ಸಂಘಟನಾ ಕಾರ್ಯನಿರ್ವಹಣೆಗಳು, ಅಧಿಕಾರಗಳು ಮತ್ತು ಕರ್ತವ್ಯಗಳು) ಆದೇಶ 2012' ನ್ನು ಹೊರಡಿಸಿ ಇದನ್ನು ಮಾರ್ಚ್ 1 ರಿಂದ ಪಾಲಿಸಬೇಕು ಎಂದು ರಾಜ್ಯ ಸರಕಾರಗಳಿಗೆ ಹೇಳಿರುವುದು ಈಗ ವಿವಾದವಾಗಿ ಮಾರ್ಪಟ್ಟಿದೆ. ಯುಪಿಯೇತರ ಪಕ್ಷಗಳ ರಾಜ್ಯ ಸರಕಾರಗಳಷ್ಟೇ ಅಲ್ಲ, ಟಿಎಂಸಿ-ಕಾಂಗ್ರೆಸ್ ಸರಕಾರ ಇರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಿಂದಲೂ ಇದಕ್ಕೆ ವಿರೋಧ ಬಂದ ಮೇಲೆ ಸದ್ಯಕ್ಕೆ ಇದನ್ನು ತಡೆ ಹಿಡಿಯಲು ಪ್ರಧಾನ ಮಂತ್ರಿಗಳು ಗೃಹಮಂತ್ರಿಗಳಿಗೆ ಹೇಳಿದ್ದಾರಂತೆ, ರಾಜ್ಯ ಸರಕಾರಗಳೊಂದಿಗೆ ಸಮಾಲೋಚನೆಗಳನ್ನು ನಡೆಸಲೂ ಹೇಳಿದ್ದಾರಂತೆ.

ಕಾನೂನು ವ್ಯವಸ್ಥೆ ಮತ್ತು ಪೋಲಿಸ್ ರಾಜ್ಯ ಸರಕಾರದ ಅಧಿಕಾರ ವ್ಯಾಪ್ತಿಗೆ ಬರುವಂತದ್ದು, ಇದಕ್ಕೆ ಸಂಬಂಧಪಟ್ಟ ಆದೇಶವೊಂದನ್ನು ಹೊರಡಿಸುವ ಮೊದಲು ಸಮಾಲೋಚನೆ ನಡೆಸಬೇಕೆಂದು ಯುಪಿಎ-2 ಮುಖಂಡರಿಗೆ ಮೊದಲೇ ತಿಳಿದಿರಲಿಲ್ಲವೇ? ಅದಕ್ಕೂ ಒಂದು ವಿವಾದ ಸೃಷ್ಟಿಸಬೇಕಿತ್ತೇ? –ಇದು ಪ್ರಜಾಪ್ರಭುತ್ವವಾದಿಗಳು ಕೇಳುವ ಪ್ರಶ್ನೆ. (ಇಲ್ಲಿಯೂ ಭಯೋತ್ಪಾದನೆಯನ್ನು ಎದುರಿಸುವ ಕಾಳಜಿಗಿಂತ ಹೆಚ್ಚಾಗಿ ಅಮೇರಿಕನ್ ದೊರೆಗಳಿಗೆ ನೀಡಿದ ವಚನಗಳ ಒತ್ತಡ ಇದೆ ಎಂದು ಹೇಳಲಾಗುತ್ತಿದೆ–ಈ ಸಂಚಿಕೆಯ ಪುಟ 8ರಲ್ಲಿ ಪ್ರಕಟವಾಗಿರುವ ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯವನ್ನು ನೋಡಿ.)

ವಾಸ್ತವವಾಗಿ, ಸ್ವಾತಂತ್ರ್ಯ ಆಂದೋಲನದ ಅನುಭವಗಳ ಹಿನ್ನೆಲೆಯಲ್ಲಿ ನಾವು ರೂಪಿಸಿಕೊಂಡ ಒಕ್ಕೂಟ ತತ್ವ ದೇಶದ ಬಂಡವಾಳಶಾಹಿ ಆಳರಸರಿಗೆ ಹೆಚ್ಚೆಚ್ಚು ಕಿರಿಕಿರಿ ಉಂಟು ಮಾಡುತ್ತಿದೆ. ಆದ್ದರಿಂದ ಇದನ್ನು ಉಲ್ಲಂಘಿಸುವ ಪ್ರಕ್ರಿಯೆ ನಡೆಯುತ್ತಲೇ ಬಂದಿದೆ. "ಇತ್ತೀಚೆಗಂತೂ ಸಂವಿಧಾನದ ಈ ಮೂಲತತ್ವವನ್ನು ಉಲ್ಲಂಘಿಸುವ ಪ್ರಕ್ರಿಯೆ ಹೆಚ್ಚುತ್ತಿದೆ ಎಂಬುದು ನನಗೆ ನೋವು ತಂದಿದೆ, ಇದನ್ನು ನಿರುತ್ಸಾಹಿತಗೊಳಿಸಬೇಕಾಗಿದೆ" ಎಂದು ತ್ರಿಪುರಾ ಎಡರಂಗ ಸರಕಾರದ ಮುಖ್ಯಮಂತ್ರಿಗಳು ಪ್ರಧಾನ ಮತ್ರಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದರು.

"ಗೃಹ ಮಂತ್ರಾಲಯ ಹೊರಡಿಸಿರುವ ಏಕಪಕ್ಷೀಯ ಆದೇಶ ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ತಪ್ಪು ತಿಳುವಳಿಕೆಗಳನ್ನು ಸೃಷ್ಟಿಸುತ್ತದೆ ಮತ್ತು ಯಾವ ಉದ್ದೇಶದಿಂದ ಈ ಆದೇಶವನ್ನು ಹೊರಡಿಸಲಾಗಿದೆಯೋ ಅದನ್ನೇ ವಿಫಲಗೊಳಿಸುತ್ತದೆ" ಎಂದು ಎಡರಂಗ ಸರಕಾರದ ಮುಖ್ಯಮಂತ್ರಿಗಳು ಎಚ್ಚರಿಸಿದ್ದರು. ತ್ರಿಪುರಾ ಸರಕಾರ, ರಾಜ್ಯದ ಶಾಂತಿಪ್ರಿಯ ಜನತೆ ಮತ್ತು ಕೇಂದ್ರದ ಸಹಕಾರದೊಂದಿಗೆ ಕೈಗೊಂಡ ಕ್ರಮಗಳಿಂದಾಗಿ ರಾಜ್ಯದಲ್ಲಿ ಭಯೋತ್ಪಾದನೆಯನ್ನು ಹತೋಟಿಗೆ ತಂದಿರುವ ಅನುಭವವನ್ನೂ ಅವರು ನೆನಪಿಸಿದ್ದಾರೆ.

ಯುವಜನ ಪರ ಬಜೆಟ್ ಆಗಬೇಕಾದರೆ.....

ಬಿ.ರಾಜಶೇಖರಮೂರ್ತಿ

ಬಿಜೆಪಿ ರಾಜ್ಯ ಸರ್ಕಾರ ಈ ಬಾರಿಯ ಬಜೆಟ್ ಯುವಜನರದ್ದಾಗಿರುತ್ತದೆ ಎಂದು ಬಿಂಬಿಸುತ್ತಿದೆ. ಈಗಾಗಲೇ ಮೂರು ಬಾರಿ ಬಿಜೆಪಿ ಸರ್ಕಾರ ಮಂಡಿಸಿರುವ ಅಭಿವೃದ್ಧಿ ಪರ, ಜನಪರ, ರೈತಪರ ಎಂಬ ಘೋಷವಾಕ್ಯಗಳ ಬಜೆಟ್ ಪರಿಣಾಮ ವೇನೆಂದರೆ, ಯತೇಚ್ಛವಾದ ಖಾಸಗೀಕರಣ. ರಾಜ್ಯದ ಉತ್ತಮ ಭವಿಷ್ಯ ಆರೋಗ್ಯ ರೂಪಿಸುವ ಮತ್ತು ಉದ್ಯೋಗ ಹೆಚ್ಚಿಸುವಂತಹ ಸರ್ಕಾರಿ ಶಾಲಾ-ಕಾಲೇಜುಗಳನ್ನು, ಆಸ್ಪತ್ರೆಗಳನ್ನು, ಸಮಾಜ ಕಲ್ಯಾಣ ಸಂಸ್ಥೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಆರಂಭಿಸದೆ ಖಾಸಗಿಯವರ ನಿಯಂತ್ರಣಕ್ಕೆ ಕೊಡಮಾಡಿರುವುದು. ವಿಶ್ವ ಜಾಗತಿಕ ಹೂಡಿಕೆದಾರರ ಮೇಳಗಳ ಮುಖಾಂತರ ಸಾವಿರಾರು ಎಕರೆ ಭೂಮಿಯನ್ನು ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಪರಭಾರೆ ಮಾಡುತ್ತಿರುವುದು, ನೈಸರ್ಗಿಕ ಸಂಪನ್ಮೂಲಗಳನ್ನು ವಿಪರೀತ ಬಳಸಿಕೊಳ್ಳಲು ಅವಕಾಶ ನೀಡುವುದು.


ಉದ್ಯೋಗ ಸೃಷ್ಟಿಸುವ ಖಾತ್ರಿ ಇಲ್ಲ

ಇಷ್ಟೆಲ್ಲಾ ಪ್ರಾಧಾನ್ಯತೆ ನೀಡಿದರೂ.ಉದ್ಯೋಗ ಸೃಷ್ಟಿಸುವ ಖಾತರಿಗಳಿಲ್ಲ. ಮುಖ್ಯವಾಗಿ ಉದ್ಯೋಗ ಸೃಷ್ಟಿಸುವ ಸಣ್ಣ-ಮಧ್ಯಮ ಕೈಗಾರಿಕೆಗಳಿಗೆ ಆದ್ಯತೆ ಇಲ್ಲ. ಕುಶಲಕರ್ಮಿಗಳಿಗೆ ಪ್ರೋತ್ಸಾಹವಿಲ್ಲ. ಇದಕ್ಕೊಂದು ತಾಜಾ ಉದಾಹರಣೆಯೆಂದರೆ ಖಾದಿ ಮತ್ತು ಗ್ರಾಮೋದ್ಯೋಗದ ಉದ್ಯಮ ತುಕ್ಕು ಹಿಡಿದಿರುವುದು. ಮುಖ್ಯವಾಗಿ ಉದ್ಯೋಗಾಧಾರಿತ ಉದ್ಯಮಗಳ ಸ್ಥಾಪನೆಗೆ ವಿದ್ಯುತ್ತಿನ ತೀವ್ರ ಕೊರತೆ. ರಾಜ್ಯದಲ್ಲಿ ಜೀವನಾಧಾರಕ್ಕೆ 68% ರಷ್ಟು ಕೃಷಿಯ ಮೇಲೆ ಅವಲಂಬನೆಯಾಗಿರುವ ನಮಗೆ, ಅದರಲ್ಲೂ ಹೆಚ್ಚೆಚ್ಚು ಉದ್ಯೋಗ ನಿರ್ಮಾಣ ಮಾಡುವಂತಹ ತೋಟಗಾರಿಕಾ ಉತ್ಪನ್ನಗಳು, ರೇಷ್ಮೆ, ತರಕಾರಿ, ಹೂ-ಹಣ್ಣುಗಳು ವಿವಿಧ ಧಾನ್ಯ ಮುಂತಾದವುಗಳ ಬೆಲೆಗಳು ಏರುಪೇರಾಗುತ್ತಲೇ ಇರುತ್ತವೆ. ಇದರಿಂದಾಗಿ ಉದ್ಯೋಗ ನಾಶದ ಜೊತೆಗೆ ಕೃಷಿ ಕ್ಷೇತ್ರ ಕುಂಠಿತಗೊಂಡು ರೈತಾಪಿ ಜನ ಪರಿತಪಿಸುತ್ತಿದ್ದಾರೆ.

ನಿರ್ಮಾಣ ಕ್ಷೇತ್ರದಲ್ಲಿ ಯಾಂತ್ರೀಕರಣ

ಸರ್ಕಾರ ಮತ್ತು ಸರ್ಕಾರೇತರರು ನಡೆಸುವ ಮೂಲಭೂತ ಸೌಕರ್ಯಗಳ ನಿರ್ಮಾಣ ಕಾಮಗಾರಿಗಳಲ್ಲಿ ಅಂದರೆ ರಸ್ತೆ, ಸೇತುವೆ ಮತ್ತು ಕಟ್ಟಡಗಳ ನಿರ್ಮಾಣಗಳಲ್ಲಿ ದೊಡ್ಡ ದೊಡ್ಡ ಯಂತ್ರೋಪಕರಣಗಳ ಬಳಕೆ. ಕೃಷಿ ರಂಗದಲ್ಲೂ ಯಂತ್ರಗಳ ಬಳಕೆಗೆ ಪ್ರೋತ್ಸಾಹ ಹೀಗೆ ಉದ್ಯೋಗ ಸೃಷ್ಟಿಯಾಗಬೇಕಾಗಿದ್ದ ಕಡೆಯಲ್ಲೆಲ್ಲಾ ಉದ್ಯೋಗ ನಾಶವಾಗುತ್ತಿದೆ.

ರಾಜ್ಯ ಸರ್ಕಾರಿ ಇಲಾಖೆಗಳಲ್ಲಿ 1,80,000ಕ್ಕಿಂತ ಹೆಚ್ಚಿನ ಹುದ್ದೆಗಳು ಖಾಲಿ ಇವೆ. ಬಹುತೇಕ ಗ್ರೂಪ್ 'ಡಿ' ನೌಕರರು, ಸೆಕ್ಯೂರಿಟಿ, ಸ್ವಚ್ಛತಾಗಾರರು, ಸೇವಾವಲಯಗಳ ನೌಕರರನ್ನು ಸಂಪೂರ್ಣವಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿ ಕೊಳ್ಳಲಾಗುತ್ತಿದೆ. ಅದರಲ್ಲೂ ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳಲ್ಲಿ ಖಾಸಗಿ ಸ್ವಯಂಸೇವಾ ಸಂಸ್ಥೆಗಳಿಂದ ಗುತ್ತಿಗೆ ನೀಡುವುದೇ ಯತೇಚ್ಛವಾಗಿದೆ. ಎಲ್ಲಾ ಇಲಾಖೆಗಳ ಕಂಪ್ಯೂಟರ್ ಆಪರೇಟರ್‌ಗಳು (ಡಿಟಿಪಿ ಆಪರೇಟರ್‌ಗಳು) ಮತ್ತು ಆನ್ಲೈನ್ ಆಪರೇಟರ್‌ಗಳು ಸೇರಿದಂತೆ ಇನ್ನಿತರ ವಿಭಾಗಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಮುಖಾಂತರ ದುಡಿಸಿಕೊಳ್ಳಲಾಗುತ್ತಿದೆ. ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ 38,000 ಶಿಕ್ಷಕ ಹುದ್ದೆಗಳು ಖಾಲಿ ಇವೆ. ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳು 48% ರಷ್ಟು, ಸರ್ಕಾರಿ ಮತ್ತು ಅನುದಾನಿತ ಪದವಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ 32% ಹುದ್ದೆಗಳು ಖಾಲಿ ಇವೆ. ಈ ರೀತಿಯಲ್ಲದೆ, ಬಿ.ಪಿಎಡ್ ಶಿಕ್ಷಕರು, ಕಂಪ್ಯೂಟರ್ ತರಬೇತಿ ಶಿಕ್ಷಕರು, ಭೂಮಾಪಕರು, ಶುಶ್ರೂಷಕಿಯರು, ಕೆಇಬಿ ಇಲಾಖೆಯಲ್ಲಿನ ದಿನಗೂಲಿ ಮತ್ತು ಗುತ್ತಿಗೆ ನೌಕರರು, ಅಂಗನವಾಡಿ ನೌಕರರು, ಬಿಸಿಯೂಟ, ನೆಮ್ಮದಿ ಕೇಂದ್ರ, ಗ್ರಾಮ ಪಂಚಾಯತಿ ನೌಕರರು ಜೊತೆಗೆ ಅತ್ಯಂತ ಅಮಾನವೀಯ ಸ್ಥಿತಿಯಲ್ಲಿರುವ ಇದೇ ನಗರ-ಪ್ರದೇಶಗಳನ್ನು ಸ್ವಚ್ಛಗೊಳಿಸುವ ನಗರ ಪಾಲಿಕೆಗಳ, ನಗರ ಸಭೆ, ಪುರಸಭೆಗಳಲ್ಲಿರುವ ಸ್ವಚ್ಛತಾಗಾರರು ಹೀಗೆ ಬೆಳೆಯುವ ಪಟ್ಟಿಯಲ್ಲಿ ಎಲ್ಲಾ ಇಲಾಖೆಗಳಲ್ಲೂ ಕನಿಷ್ಠ ವೇತನವಿಲ್ಲದೇ ಅಭದ್ರತೆಯಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಇಲ್ಲವೇ ಬಹುತೇಕ ಗುತ್ತಿಗೆ-ಹೊರಗುತ್ತಿಗೆ ಮುಖಾಂತರ ಯೋಜನೆಯನ್ನು ಅತ್ಯಂತ ಕಡಿಮೆ ಕೂಲಿಗೆ ನಿಷ್ಕೃಷ್ಟವಾಗಿ ದುಡಿಸಿಕೊಳ್ಳುತ್ತಿದೆ. ಅಸಂಘಟಿತ ವಲಯಗಳಲ್ಲಿ ಅಂದರೆ ಹೋಟೆಲ್‌ಗಳಲ್ಲಿ, ವರ್ಕ್‌ಶಾಪ್‌ಗಳಲ್ಲಿ ಸಣ್ಣ-ಸಣ್ಣ ವ್ಯಾಪಾರ ಕ್ಷೇತ್ರಗಳಲ್ಲಿ ಕೃಷಿಗೆ ಪೂರಕ ರಂಗಗಳಲ್ಲಿ, ಸಾರಿಗೆ ಮಾರುಕಟ್ಟೆ ಮುಂತಾದೆಡೆಗಳಲ್ಲಿ 86% ದುಡಿಯುವ ಯುವಜನತೆಗೆ ಕನಿಷ್ಠ ವೇತನವಿಲ್ಲ. ಹೀಗಾಗಿ ಪ್ರತಿದಿನ ಬಡತನದ ಬೇಗೆಯಲ್ಲಿ ಬೆಂದು ಕುಟುಂಬ ಸಮೇತ (ಎಳೆಯ ಕಂದಮ್ಮಗಳ ಜೊತೆಯಲ್ಲೇ) ಆತ್ಮಹತ್ಯೆಯ ಹಾದಿಯನ್ನು ಹಿಡಿಯುತ್ತಿರುವುದನ್ನು ದಿನಂಪ್ರತಿ ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಇಂತಹ ಯಾವ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೂ ಬಿಜೆಪಿ ಸರ್ಕಾರದ 3 ಬಜೆಟ್‌ಗಳೂ ಸ್ಪಂದಿಸಲಿಲ್ಲ. ಬದಲಾಗಿ ಉದ್ಯೋಗ ನೇಮಖಾತಿಗೆ ನಿರ್ಬಂಧ ಹೇರಲಾಗಿದೆ.



ಹೀಗಾಗಿ ಬಿಜೆಪಿ ಸರ್ಕಾರದ ಸಾಧನೆ ಯೆಂದರೆ ಉದ್ಯೋಗ ನಾಶ... ಉದ್ಯೋಗ ನಾಶ... ಉದ್ಯೋಗ ನಾಶ...



ಇನ್ನೂ ಭೂಮಿ, ಗಣಿ, ಸರ್ಕಾರಿ ಯೋಜನೆಗಳಲ್ಲಿ, ಆಡಳಿತದಲ್ಲಿ ಭ್ರಷ್ಟಾಚಾರ. ಈ ಅಪರಿಮಿತ ಭ್ರಷ್ಟಾಚಾರಗಳಿಂದಾಗಿ ರಾಜ್ಯದ ಬೊಕ್ಕಸಕ್ಕೆ ಅತಿದೊಡ್ಡ ನಷ್ಟ ಉಂಟಾಗಿ ಅಭಿವೃದ್ಧಿಯಲ್ಲಿ ಹತ್ತಿಪ್ಪತ್ತು ವರ್ಷ ಹಿಂದಕ್ಕೆ ಜನತೆಯನ್ನು ಬಿಜೆಪಿ ಸರ್ಕಾರ ಕೊಂಡೊಯ್ದಿದೆ. ಹೀಗಾಗಿ ಮಹಾ ಭ್ರಷ್ಟಾಚಾರಗಳಿಂದ ಬಜೆಟ್‌ಗೆ ಶೇಖರಣೆಯಾಗಬೇಕಾಗಿದ್ದ ಹಣ ಶೇಖರಣೆಯಾಗದೆ (ಕಳೆದ ವರ್ಷ ರೂ.85 ಸಾವಿರ ಕೋಟಿ, ಪ್ರಸಕ್ತ ವರ್ಷದಲ್ಲಿ 1 ಲಕ್ಷ ಕೋಟಿಯಷ್ಟು ಆಯವ್ಯಯವೆಂದು ಅಂದಾಜಿಸಲಾಗಿದೆ.) ಇಂತಹ ಸಣ್ಣ ಬಜೆಟ್‌ನಲ್ಲಿ ಮಠಮಾನ್ಯಗಳಿಗೆ ಮತ್ತು ಸಂಘ ಪರಿವಾರದ ಆರ್.ಎಸ್.ಎಸ. ಅಂಗ ಸಂಘಟನೆಗಳಿಗೆ ರೂ 391.26 ಕೋಟಿಯಷ್ಟು ಹಣವನ್ನು ಧಾರೆಯೆರೆಯಲಾಗಿದೆ.

ಒಂದೆಡೆ ಉದ್ಯೋಗ ನಾಶ. ಇನ್ನೊಂದೆಡೆ ಭ್ರಷ್ಟಾಚಾರ, ಸಂವಿಧಾನ ಬಾಹಿರ ಆಡಳಿತ, ಲೈಂಗಿಕ ಹಗರಣಗಳು, ಮತೀಯ ಗಲಭೆಗಳು ಜಾತಿ-ಅಸ್ಪೃಶ್ಯತೆ ಆಚರಣೆಯಂತ ಕಂದಾಚಾರಗಳನ್ನು ಇನ್ನಷ್ಟು ಬೇರೂರಿಸುವುದು. ಒಟ್ಟಾರೆ ಸಾಮಾನ್ಯ ಬಡಜನತೆ ಪರಸ್ಪರ ಕಚ್ಚಾಡಿಕೊಂಡು ತಮ್ಮ ದೈನಂದಿನ ಜೀವನ ಸಮಸ್ಯೆಗಳನ್ನು ಮರೆಮಾಚಿಸುವಂತಹ ಕೃತ್ಯಗಳನ್ನು ಬಿಜೆಪಿ ನಡೆಸುತ್ತಿದೆ. ಈ ರೀತಿಯಲ್ಲಿನ ಉದ್ಯೋಗ ನಾಶ ಮತ್ತು ಮಹಾ ಭ್ರಷ್ಟಾಚಾರಗಳಿಲ್ಲದಿದ್ದರೆ ಸರ್ಕಾರಿ ಶಾಲಾ-ಕಾಲೇಜುಗಳು ಮತ್ತು ಸರ್ಕಾರಿ ಆಸ್ಪತ್ರೆಗಳು ಹಾಗೂ ಜನ ಕಲ್ಯಾಣ ಸಂಸ್ಥೆಗಳನ್ನು 3-4 ಪಟ್ಟು ಹೆಚ್ಚಿಸಬಹುದಾಗಿತ್ತು. ಜೊತೆಗೆ ಸೇವಾ ವಲಯ ಮತ್ತು ಸಾರ್ವಜನಿಕ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡಬಹುದಾಗಿತ್ತು. ಹಾಗಾದಾಗ ಮಾತ್ರ ಯುವಜನರ ಮೂಲಾಧಾರವಾಗಿರುವ ಉದ್ಯೋಗ ದಕ್ಕುತ್ತಿತ್ತು. ಇಂತಹ ಧೋರಣೆಯನ್ನು ಅನುಸರಿಸದೇ ಯುವಜನಪರವಾದಂತಹ ಬಜೆಟನ್ನು ರಾಜ್ಯ ಸರ್ಕಾರ ಒದಗಿಸಿದಾಗ ಮಾತ್ರ ಯುವಜನತೆ ನಿರುದ್ಯೋಗ ಸಮಸ್ಯೆಗಳ ಸುಳಿಯಿಂದ ಹೊರಬರಲು ಸಾಧ್ಯವಾಗುತ್ತದೆ.

ಹೀಗಾಗಿ ರಾಜ್ಯ ಸರ್ಕಾರ ಖಾಲಿ ಇರುವ 1.8 ಲಕ್ಷ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವ ಕುರಿತು ಬಜೆಟ್‌ನಲ್ಲಿ ಘೋಷಿಸಬೇಕು. ಶಿಕ್ಷಣ ಇಲಾಖೆ ಮತ್ತು ಮತ್ತಿತರ ಸರ್ಕಾರಿ ವಲಯಗಳಲ್ಲಿರುವ ಎಲ್ಲಾ ಗುತ್ತಿಗೆ, ದಿನಗೂಲಿ ಮತ್ತು ಅರೆಕಾಲಿಕ ಹುದ್ದೆಗಳನ್ನು ಖಾಯಂಗೊಳಿಸಬೇಕು. ತಕ್ಷಣದಲ್ಲೇ ನೇಮಕಾತಿ ನಿರ್ಬಂಧ ಹೇರಿಕೆಯನ್ನು ಹಿಂತೆಗೆದುಕೊಳ್ಳಬೇಕು. ನೆನೆಗುದಿಗೆ ಬಿದ್ದಿರುವ ಮತ್ತು 5,000 ಖಾಲಿ ಇರುವ ಬ್ಲಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು. ನಿರುದ್ಯೋಗಿ ಯುವಕ-ಯುವತಿಯರಿಗೆ ನಿರುದ್ಯೋಗ ಭತ್ಯೆಯನ್ನು ನೀಡುವಂತಾಗ ಬೇಕು. ಹಾಗೆಯೇ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಉದ್ದಿಮೆಗಳನ್ನು, ಸ್ವಯಂ ಉದ್ದಿಮೆಗಳನ್ನು ಪ್ರಾರಂಭಿಸಲು ಬಜೆಟ್‌ನಲ್ಲಿ ಪ್ರೋತ್ಸಾಹ ಸಿಗಬೇಕು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭ್ರಷ್ಟಾಚಾರ ಕೊನೆಗೊಳಿಸಿ ಸಮರ್ಪಕವಾಗಿ ಜಾರಿಗೊಳಿಸಬೇಕು. ಜೊತೆಗೆ ತ್ರಿಪುರ ಮಾದರಿಯಲ್ಲಿ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವ ಯುವಜನತೆಗೆ ಕನಿಷ್ಠ ವೇತನ ರೂ 10 ನಿಗದಿ ಮಾಡುವಂತಹ ರೀತಿಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ರೀತಿಯಲ್ಲಿ ಬಜೆಟ್‌ನಲ್ಲಿ ವ್ಯಕ್ತವಾಗಬೇಕು. ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಹಣ ನೀಡಿ ಶಿಕ್ಷಣ ವ್ಯಾಪಾರೀಕರಣ ತಡೆಗಟ್ಟಬೇಕು. ಸಾರ್ವಜನಿಕ ಉದ್ದಿಮೆಗಳ ಸ್ಥಾಪನೆಗೆ - ಪುನಶ್ಚೇತನಕ್ಕೆ ಒತ್ತು ನೀಡಬೇಕು. ಎಲ್ಲಾ ಯುವಜನತೆಯ ಕ್ರೀಡಾ-ಸಾಂಸ್ಕೃತಿಕ ಬೆಳವಣಿಗೆಗಳಿಗೆ ಆದ್ಯತೆ ನೀಡಬೇಕು. ಆಗ ಮಾತ್ರ ನಿಜವಾದ ಯುವಜನಪರವಾದ ಬಜೆಟ್ ಆಗುತ್ತದೆ. ಇಂತಹ ಧೋರಣೆಯನ್ನು ಬಿಜೆಪಿಯ ರಾಜ್ಯ ಸರ್ಕಾರ ಜಾರಿಗೆ ತಂದಾಗ ಮಾತ್ರ ಬಿಜೆಪಿ ಯುವಜನರ ಸಮಸ್ಯೆಗಳಿಗೆ ಸ್ಪಂದಿಸುತ್ತದೆ. ಈ ರೀತಿಯಲ್ಲಿ ಸ್ಪಂದಿಸಬೇಕಾದರೆ ತನ್ನ ವಿಶ್ವ ಬಂಡವಾಳ ಹೂಡಿಕೆ ಯೋಜನೆಯನ್ನು ಮೊದಲಿಗೆ ರದ್ದುಗೊಳಿಸಬೇಕು. ಇಂತಹ ಕೆಲಸಕ್ಕೆ ಬಿಜೆಪಿ ಕೈ ಹಾಕುವುದಿಲ್ಲ. ಯಾಕೆಂದರೆ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳ ಮತ್ತು ಪುರೋಹಿತಶಾಹಿಗಳ ಕೈ ಗೊಂಬೆಯಾಗಿರುವ ಬಿಜೆಪಿ ಸಾಮಾನ್ಯ ಜನಪರ ಮತ್ತು ಯುವಜನ ಪರವಾಗಿ ಸ್ಪಂದಿಸುವುದು ಅಸಾಧ್ಯವಾಗಿದೆ. ಉದಾಹರಣೆಗೆ: 'ಕೊಕ್ಕರೆ ಮೀನನ್ನು ಪ್ರೀತಿಸುವುದುಂಟೆ?'

ಹೀಗಾಗಿ ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕನ್ನು ಕಳೆದುಕೊಂಡಿರುವ ಬಿಜೆಪಿ ತನ್ನ ಒಡಲಿನಲ್ಲಿ ಇಟ್ಟುಕೊಂಡಿರುವ ಭ್ರಷ್ಟರನ್ನು ಶಿಕ್ಷಿಸಬೇಕು. ಅದಕ್ಕಾಗಿ ಲೋಕಾಯುಕ್ತ ವರದಿಯನ್ನು ಜಾರಿಗೆ ತರಬೇಕು ಇಂತಹ ಪ್ರಜಾಪ್ರಭುತ್ವವಾದಿ ಕೆಲಸಕ್ಕೆ ಕೈಹಾಕುವ ಯಾವ ಲಕ್ಷಣಗಳು ಕಾಣುತ್ತಿಲ್ಲ. ಹೀಗಾಗಿ ಬಿಜೆಪಿಯ ಜನ ವಿರೋಧಿ ನೀತಿಗಳ ವಿರುದ್ಧ ಯುವಜನಾಂದೋಲನದ ಅಗತ್ಯತೆ ಹೆಚ್ಚು ಇದೆ. ಆ ಮುಖಾಂತರ ಬಜೆಟ್‌ನಲ್ಲಿ ಯುವಜನತೆಗೆ ಆದ್ಯತೆ ನೀಡಲು ಸ್ವಲ್ಪವಾದರೂ ಸಾಧ್ಯವಾಗುತ್ತದೆ.

ಕೃಷಿ ಕೂಲಿಕಾರರ ಉಡುಪಿ ಜಿಲ್ಲಾ ಸಮಾವೇಶ

ಸ್ವಾತಂತ್ರ್ಯದ ಬಳಿಕ ದೇಶದ ರೈತರಲ್ಲಿ ಬಹಳಷ್ಟು ಮಂದಿ ಕೃಷಿ ಕೂಲಿಕಾರರಾಗಿ ಬದಲಾಗಿದ್ದಾರೆ. ಹೀಗಾಗಿ ಈಗ ಸುಮಾರು 20 ಕೋಟಿಯಷ್ಟು ಮಂದಿ ಕೃಷಿ ಕೂಲಿಕಾರರಾಗಿದ್ದಾರೆ. ಕೇಂದ್ರ ಸರಕಾರದ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣ ಧೋರಣೆಯ ಪರಿಣಾಮವಾಗಿ ಆರ್ಥಿಕ ಬಿಕ್ಕಟ್ಟಿನಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬುದಾಗಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಮುಖಂಡರಾದ ಕೆ.ನೀಲಾ ನುಡಿದರು. ಅವರು ಕುಂದಾಪುರ ಕಾರ್ಮಿಕ ಭವನದಲ್ಲಿ ನಡೆದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದ ಸ್ವಾಮಿ ಮಾತನಾಡಿ, ಸರಕಾರ ಕೃಷಿ ಕ್ಷೇತ್ರಕ್ಕೆ ಶೇ.32 ರಷ್ಟನ್ನು ಒದಗಿಸಬೇಕಿದ್ದು, ಈಗ ಅದು ಶೇ.11 ರಿಂದ 12 ಕ್ಕೆ ಇಳಿದಿದೆ. ಕೃಷಿಯಿಂದ ರೈತ ದಿವಾಳಿಯಾಗಿದ್ದಾನೆ, ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಕೃಷಿ ಕೂಲಿಕಾರರಿಗೆ ಸಾಮಾಜಿಕ ಭದ್ರತೆ ಕೊಡಬೇಕು; ನಿವೇಶನ, ವಸತಿ, ವಿದ್ಯುತ್, ರೇಶನ್, ಪಿಂಚಣಿ ಇತ್ಯಾದಿ ಮೂಲಭೂತ ಸೌಕರ್ಯ ಒದಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಯು.ದಾಸ ಭಂಡಾರಿ ಸಭೆಯ ಅಧ್ಯಕ್ಷತೆ ವಹಿಸಿದ್ದು, ಸಿಐಟಿಯು ಮುಖಂಡರಾದ ಕೆ.ಶಂಕರ್, ಎಚ್.ನರಸಿಂಹ ಸಮಾವೇಶಕ್ಕೆ ಶುಭಕೋರಿ ಮಾತನಾಡಿದರು. ಕುಂದಾಪುರ ತಾಲೂಕು ಪಂಚಾಯತು ಸದಸ್ಯೆ ಶಶಿಕಲಾ ಪೂಜಾರ್ತಿ, ಮನೋರಮಾ ಭಂಡಾರಿ, ಉಡುಪಿ ತಾಲೂಕು ಕೃಷಿ ಕೂಲಿಕಾರರ ಮುಖಂಡರಾದ ದೋಗು ಸುವರ್ಣ, ಎಚ್.ವಿಠಲ ಪೂಜಾರಿ ಉಪಸ್ಥಿತರಿದ್ದರು.

ಸಮಾವೇಶವು ಪ್ರಾಂತ ಕೃಷಿ ಕೂಲಿಕಾರರ ಸಂಘಕ್ಕೆ 30 ಮಂದಿಯುಳ್ಳ ಉಡುಪಿ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿದ್ದು, ದೋಗು ಸುವರ್ಣ ಅಧ್ಯಕ್ಷರಾಗಿಯೂ ವೆಂಕಟೇಶ ಕೋಣಿ ಪ್ರಧಾನ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿರುತ್ತಾರೆ. ಪದಾಧಿಕಾರಿಗಳಲ್ಲಿ ಯು.ದಾಸ ಭಂಡಾರಿ, ಎಚ್.ವಿಠಲ ಪೂಜಾರಿ, ಶಶಿಕಲಾ ಪೂಜಾರಿ, ನಾಗರತ್ನ, ರಾಜೀವ ಪಡುಕೋಣೆ ಒಳಗೊಂಡಿರುತ್ತಾರೆ.

ಕಾರ್ಮಿಕ ಸಂಘಟನೆಗಳ ದಕ್ಷಿಣ ಕನ್ನಡ ಜಿಲ್ಲಾ ಸಮಾವೇಶ




ಫೆಬ್ರವರಿ 28 ರಂದು ನಡೆಯಲಿರುವ ಅಖಿಲ ಭಾರತ ಕಾರ್ಮಿಕ ಮುಷ್ಕರವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ದ.ಕ.ಜಿಲ್ಲೆಯಲ್ಲಿರುವ ಅಖಿಲ ಭಾರತ ಮಟ್ಟದ ಕಾರ್ಮಿಕ ಸಂಘಟನೆಗಳು ಹಾಗೂ ಬ್ಯಾಂಕ್, ವಿಮಾ ಬಿಎಸ್ಸೆನ್ನೆಲ್ ನೌಕರರ ಸಂಘಟನೆಗಳು ಫೆಬ್ರವರಿ 21 ರಂದು ಮಂಗಳೂರಿನ ಪುರಭವನದಲ್ಲಿ ಸಮಾವೇಶ ನಡೆಸಿದವು.

ಸಮಾವೇಶವನ್ನುದ್ದೇಶಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ದ.ಕ.ಜಿಲ್ಲಾ ಪ್ರಧಾನ ಸಂಚಾಲಕರಾದ ಸಿಐಟಿಯುನ ಹಿರಿಯ ಕಾರ್ಮಿಕ ಮುಖಂಡ ಬಿ.ಮಾಧವ ಮಾತನಾಡಿ, ಬೆಲೆ ಏರಿಕೆಯನ್ನು ತಡೆಯಬೇಕೆಂಬ ಕಾರ್ಮಿಕ ಸಂಘಟನೆಗಳ ಬೇಡಿಕೆಯನ್ನು ಈಡೇರಿಸಲು ಪೆಟ್ರೋಲಿಯಂ ಮೇಲಿನ ತೆರಿಗೆಗಳನ್ನು ಇಳಿಸುವ ಮೂಲಕ ಪೆಟ್ರೋಲಿಯಂ ಉತ್ಪನ್ನಗಳ ದರ ಇಳಿಸಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಮರ್ಪಕವಾಗಿ ನಿಯಂತ್ರಿಸಿ ಪ್ರತಿಯೊಬ್ಬರಿಗೂ ಕೆ.ಜಿ.ಗೆ ರೂ.3ರ ದರದಲ್ಲಿ ತಿಂಗಳಿಗೆ 35 ಕೆ.ಜಿ.ಆಹಾರ ಧಾನ್ಯಗಳನ್ನು ಒದಗಿಸಬೇಕು ಎಂದು ಸರಕಾರವನ್ನು ಆಗ್ರಹಿಸಿದರು. ಕೇಂದ್ರ ಸರಕಾರವು ಕನಿಷ್ಠ ಕೂಲಿ ತಿಂಗಳಿಗೆ ರೂ.10,000 ನಿಗದಿಪಡಿಸಬೇಕೆಂದು ಒತ್ತಾಯಿಸಿದರು. ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸಮಾವೇಶದ ಒಡಂಬಡಿಕೆಗೆ ಭಾರತ ಸರಕಾರ ಬದ್ಧವಾಗಬೇಕಾದ ನಿಟ್ಟಿನಲ್ಲಿ, ಕಾರ್ಮಿಕ ಸಂಘಟನೆಗಳ ನೋಂದಾವಣೆಗಾಗಿ ಅರ್ಜಿ ಸಲ್ಲಿಸಿದ 45 ದಿನಗಳೊಳಗಾಗಿ ಸಂಘಟನೆಗಳನ್ನು ನೋಂದಾಯಿಸಬೇಕೆಂದೂ ಆಗ್ರಹಿಸಿದರು.

ಸಮಾವೇಶವನ್ನು ಉದ್ದೇಶಿಸಿ ಬಿಎಂಎಸ್‌ನಿಂದ ಸೂರ್ಯನಾರಾಯಣ ರಾವ್, ಎಐಟಿಯುಸಿಯಿಂದ ಹೆಚ್.ವಿ.ರಾವ್, ಎಚ್‌ಎಂಎಸ್‌ನಿಂದ ಎಸ್.ಆರ್.ಕುಬೇರ ಶೆಟ್ಟಿ, ಅ.ಭಾ.ಬ್ಯಾಂಕ್ ನೌಕರರ ಸಂಘದಿಂದ ಪಿ.ಆರ್.ಕಾರಂತ, ಅ.ಭಾ.ಬ್ಯಾಂಕ್ ಅಧಿಕಾರಿಗಳ ಸಂಘದಿಂದ ಕೆ.ರಾಘವ, ಅ.ಭಾ.ವಿಮಾ ನೌಕರರ ಸಂಘದಿಂದ ಗುರುದತ್, ಬಿಇಎಫ್‌ಐನಿಂದ ಬಿ.ಎಂ.ಮಾಧವ ಮಾತನಾಡಿದರು.

ಬಿಎಂಎಸ್‌ನಿಂದ ವಿಶ್ವನಾಥ ಶೆಟ್ಟಿ, ಸಿಐಟಿಯುನ ಜೆ.ಬಾಲಕೃಷ್ಣ ಶೆಟ್ಟಿ, ಎಐಟಿಯುಸಿಯ ವಾಸುದೇವ ಕುಕ್ಯಾನ್, ಎಚ್‌ಎಂಎಸ್‌ನ ಸುರೇಶ್ಚಂದ್ರ ಶೆಟ್ಟಿ ಅಧ್ಯಕ್ಷೀಯ ಮಂಡಳಿಯಾಗಿ ಸಮಾವೇಶವನ್ನು ನಡೆಸಿಕೊಟ್ಟರು. ಸಿಐಟಿಯುನ ವಸಂತ ಆಚಾರಿ ಸ್ವಾಗತಿಸಿದರು. ಎಐಟಿಯುಸಿಯ ಸೀತಾರಾಮ ಬೇರಿಂಜೆ ಧನ್ಯವಾದ ಅರ್ಪಿಸಿದರು.

ಕಾರ್ಮಿಕ ಸಂಘಗಳ ದ.ಕ.ಜಿಲ್ಲಾ ಜಂಟಿ ಸಮಿತಿಯ ಆಶ್ರಯದಲ್ಲಿ ಫೆಬ್ರವರಿ 22 ರಿಂದ 24ರ ವರೆಗೆ 3 ದಿನಗಳ ಜಿಲ್ಲಾ ಜಾಥಾ ನಡೆಸಿ ಫೆಬ್ರವರಿ 28ರ ಮುಷ್ಕರಕ್ಕೆ ಪ್ರಚಾರ ನಡೆಸಲಿದೆಯೆಂದು ಸಮಾವೇಶದಲ್ಲಿ ಘೋಷಿಸಲಾಯಿತು.



ವರದಿ : ವಾ.ಉ.

ವಸತಿ ಹಾಗೂ ನಿವೇಶನ ರಹಿತರಿಂದ ಉಡುಪಿಯಲ್ಲಿ ಪ್ರತಿಭಟನೆ

ತಾಲೂಕಿನ ವಿವಿಧೆಡೆಗಳಲ್ಲಿರುವ ವಸತಿ ಹಾಗೂ ನಿವೇಶನ ರಹಿತರಿಗೆ ಕೂಡಲೇ ಸರಕಾರಿ ಜಮೀನನಲ್ಲಿ ನಿವೇಶನ ಮತ್ತು ವಸತಿಗಳನ್ನು ಒದಗಿಸಿಕೊಡುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿಯ ವತಿಯಿಂದ ಫೆಬ್ರವರಿ 10ರಂದು ತಾಲೂಕು ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು.

ಈಗಾಗಲೇ ತಾಲೂಕಿನ 44 ಗ್ರಾಮಗಳಿಂದ 313 ಅರ್ಜಿಗಳನ್ನು ತಹಸೀಲ್ದಾರರಿಗೆ ಸಲ್ಲಿಸಲಾಗಿತ್ತು. ಹಾಗೂ ಪ್ರತಿಭಟನೆ ಸಂದರ್ಭ ಮರು ಮನವಿ ಸಲ್ಲಿಸಲಾಯಿತು. ಉಡುಪಿ ತಾಲೂಕು ಸಮಿತಿಯ ಕಾರ್ಯದರ್ಶಿ ದೋಗು ಸುವರ್ಣರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ನಾಯಕರಾದ ವಿಠಲ ಪೂಜಾರಿ, ಲಕ್ಷ್ಮಣ್, ಸಾಯಿರಾಬಾನು ಹೂಡೆ, ವಿದ್ಯಾರಾಜ್ ಮುಂತಾದವರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಸದನದಲ್ಲಿ ಕಲಾಪ ನಡೆಯುತ್ತಿರುವಾಗಲೇ ಅಶ್ಲೀಲ ಚಿತ್ರ ವೀಕ್ಷಿಸಿದ ಸಚಿವರನ್ನು ರಾಜೀನಾಮೆ ಕೊಡಿಸಿದರಷ್ಟೇ ಸಾಲದು ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಜೈಲಿಗೆ ಕಳುಹಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.



ಮಂಗಳೂರಿನಲ್ಲಿ ಪಿಯರ್‌ಲೆಸ್ ನೌಕರರ ದಕ್ಷಿಣ ವಲಯ ಸಮಾವೇಶ

ಕಾರ್ಮಿಕ ಸಂಘಟನೆಗಳು ತಮ್ಮ ಪಕ್ಷ ಭೇದ ಮರೆತು ನೌಕರರ ಮೂಲ ಬೇಡಿಕೆಗಳಿಗಾಗಿ ಒಗ್ಗಟ್ಟಾಗುತ್ತಿರುವುದು ಉತ್ತಮ ಬೆಳವಣಿಗೆ ಎಂಬುದಾಗಿ ಸಿಐಟಿಯು ರಾಜ್ಯ ಸಮಿತಿಯ ಉಪಾಧ್ಯಕ್ಷ ಬಿ.ಮಾಧವ ಹೇಳಿದ್ದಾರೆ. ಅವರು ಮಂಗಳೂರಿನಲ್ಲಿ ಫೆಬ್ರವರಿ 19 ರಂದು ನಡೆದ ಅಖಿಲ ಭಾರತ ಪಿಯರ್‌ಲೆಸ್ ನೌಕರರ ಸಂಘದ ದಕ್ಷಿಣ ವಲಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಫೆಬ್ರವರಿ 28 ರಂದು ಎಲ್ಲ ಕಾರ್ಮಿಕ ಹಾಗೂ ನೌಕರ ಸಂಘಟನೆಗಳು ಒಂದಾಗಿ ನಡೆಸಲಿರುವ ಸಾರ್ವತ್ರಿಕ ಮುಷ್ಕರ ದೇಶದ ಇತಿಹಾಸದಲ್ಲೇ ಒಂದು ಮೈಲಿಗಲ್ಲಾಗಲಿದೆ ಎಂದ ಅವರು, ನವ ಉದಾರೀಕರಣ ನೀತಿಯನ್ನು ಕೇವಲ ಭಾರತದಲ್ಲಿ ಮಾತ್ರವಲ್ಲ ವಿಶ್ವದಾದ್ಯಂತ ವಿರೋಧಿಸಲಾಗುತ್ತಿದೆ ಎಂದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಅಖಿಲ ಭಾರತ ಪಿಯರ್‌ಲೆಸ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಗೌತಮ್ ಚಟರ್ಜಿ, ಪೂರ್ವವಲಯ ಪ್ರಧಾನ ಕಾರ್ಯದರ್ಶಿ ಸಿ.ವಿ.ಎ.ಕುಮಾರ್ ಮತ್ತಿತರರು ಉಪಸ್ಥಿತರಿದ್ದರು. ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಸ್ವಾಗತಿಸಿದರು. ಸಂಘದ ಜತೆ ಕಾರ್ಯದರ್ಶಿ ತಾರಾನಾಥ್ ಕಾರ್ಯಕ್ರಮ ನಿರೂಪಿಸಿದರು.

ಪುತ್ತೂರು: ನಿವೇಶನ– ಹಕ್ಕುಪತ್ರಕ್ಕಾಗಿ ಪ್ರತಿಭಟನೆ

ನಿವೇಶನ ರಹಿತರಿಗೆ ಸರ್ಕಾರ ನಿವೇಶನ ಒದಗಿಸಬೇಕು; ಸರ್ಕಾರಿ ಜಮೀನಿನಲ್ಲಿ ವಾಸವಾಗಿದ್ದು ಹಕ್ಕುಪತ್ರ ಹೊಂದಿಲ್ಲದವರಿಗೆ ಹಕ್ಕುಪತ್ರ ನೀಡಬೇಕು; ಇದರೊಂದಿಗೆ ವಿದ್ಯುತ್, ಕುಡಿಯುವ ನೀರು, ರಸ್ತೆ ಸಾರಿಗೆ ವ್ಯವಸ್ಥೆ ಕಲ್ಪಿಸಿಕೊಡಬೇಕು – ಎಂದು ಆಗ್ರಹಿಸಿ ಫೆಬ್ರವರಿ 2 ರಂದು ಸಿಪಿಎಂ ಪುತ್ತೂರು ತಾಲೂಕು ಸಮಿತಿ ವತಿಯಿಂದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಎಂ.ಭಟ್, ಜಿಲ್ಲಾ ಸಮಿತಿ ಸದಸ್ಯ ರಾಮಣ್ಣ ವಿಟ್ಲ ಮಾತನಾಡಿದರು. ಸಿಪಿಎಂ ಪುತ್ತೂರು ತಾಲೂಕು ಕಾರ್ಯದರ್ಶಿ ಪಿ.ಕೆ.ಸತೀಶನ್, ಪಕ್ಷದ ಕಾರ್ಯಕರ್ತರಾದ ಕೇಶವ, ದಾಮೋದರ್, ಈಶ್ವರಿ ಮತ್ತಿತರರು ಭಾಗವಹಿಸಿದ್ದರು.



ತೃಣಮೂಲ ಗೂಂಡಾರಾಜ್.. ಹಾಡಹಗಲೇ ಸಿಪಿಐ(ಎಂ) ಮಾಜಿ ಶಾಸಕ, ಮುಖಂಡರ ಖಗ್ಗೊಲೆ

ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಸರ್ಕಾರ ಬೆಂಬಲಿತ ಭೂಮಾಲೀಕರು ಮತ್ತು ಗೂಂಡಾಗಳ ಗುಂಪುಗಳು ಕಮ್ಯೂನಿಸ್ಟರ ವಿರುದ್ಧ ಅವ್ಯಾಹತವಾಗಿ ದಾಳಿಗಳನ್ನು ಮುಂದುವರೆಸಿದ್ದಾರೆ. ಜನಪರ ಹೋರಾಟಗಳನ್ನು ಹತ್ತಿಕ್ಕಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಕಳೆದ ಒಂಬತ್ತು ತಿಂಗಳ ಹಿಂದೆ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಆಡಳಿತಕ್ಕೆ ಬಂದ ಮೊದಲ ದಿನದಿಂದಲೇ ಕಮ್ಯೂನಿಸ್ಟರ ವಿರುದ್ಧ ಯೋಜಿತ ದಾಳಿಗಳನ್ನು ನಡೆಸಲಾಗುತ್ತಿದೆ. ಇದರ ಮುಂದುವರೆದ ಭಾಗವಾಗಿ ಬುಧವಾರ ತೃಣಮೂಲ ಬೆಂಬಲಿತ ಗೂಂಡಾಗಳು ಹಾಡಹಗಲೇ ಬರ್ಧ್ವಾನ್ ಜಿಲ್ಲೆಯಲ್ಲಿ ಸಿಪಿಐ(ಎಂ)ಪಕ್ಷದ ಮಾಜಿ ಶಾಸಕರೊಬ್ಬರು ಸೇರಿದಂತೆ ಇಬ್ಬರು ಹಿರಿಯ ನಾಯಕರನ್ನು ಮಚ್ಚು ಮತ್ತು ರಾಡ್‌ಗಳಿಂದ ಹೊಡೆದು ಸಾಯಿಸಿದ್ದಾರೆ.

ಪಕ್ಷದ ಹಿರಿಯ ಮುಖಂಡರು, ಬರ್ದ್ವಾನ್ ಉತ್ತರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಪ್ರದೀಪ್ ತಾಹ್ ನೇತೃತ್ವದಲ್ಲಿ ಮೆರವಣಿಗೆ ಹೊರಟಿದ್ದಾಗ ದೇವನ್‌ದಿಘಿ ಪ್ರದೇಶದಲ್ಲಿ ಯೋಜಿತ ದಾಳಿ ನಡೆಸಲಾಗಿದೆ. ಈ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಕಮಲ್ ಜ್ಞಾನ್ ಕೋಲ್ಕತ್ತದ ಆಸ್ಪತ್ರೆಗೆ ಕೊಂಡೊಯ್ಯುವ ಹಾದಿಯಲ್ಲಿ ಅಸುನೀಗಿದ್ದಾರೆ.

ಫೆಬ್ರವರಿ 28, 2012ರ ಅಖಿಲ ಭಾರತ ಮುಷ್ಕರದ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಬುಧವಾರ ಬರ್ದ್ವಾನ್‌ನಲ್ಲಿ ಬೃಹತ್ ಮೆರವಣಿಗೆ ಕೈಗೊಂಡಿದ್ದರು. ಈ ರ್‍ಯಾಲಿಗೆ ಜನಸ್ಪಂದನವನ್ನು ಕಂಡು ಹೌಹಾರಿದ ತೃಣಮೂಲ ಕಾಂಗ್ರೆಸ್ ಗೂಂಡಾಗಳು ಇಬ್ಬರೂ ಮುಖಂಡರ ಮೇಲೆ ಅಮಾನವೀಯವಾಗಿ ಹಲ್ಲೆ ನಡೆಸಿದ್ದಾರೆ. ಬರ್ದ್ವಾನ್‌ನಿಂದ 7 ಕಿಲೋ ಮೀಟರ್ ದೂರದಲ್ಲಿರುವ ದೇವನ್‌ದಿಘದಲ್ಲಿ ಬೆಳಿಗ್ಗೆ 9.30ರ ಸಮಯದಲ್ಲಿ ಬೃಹತ್ ರ್‍ಯಾಲಿ ಹೊರಟಿತ್ತು. ಈ ರ್‍ಯಾಲಿಯಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು. ಪೊಲೀಸರು ಸೇರಿದಂತೆ ಸಾವಿರಾರು ಮಂದಿ ಎದುರಿನಲ್ಲೇ ಈ ದುಷ್ಕೃತ್ಯ ಎಸಗಿದ್ದಾರೆ. ಆದರೂ ರಾಜ್ಯ ಸರ್ಕಾರ ಇದುವರೆಗೂ ಒಬ್ಬೇ ಒಬ್ಬ ಅಪರಾಧಿಯನ್ನೂ ಬಂಧಿಸಿಲ್ಲ.

ಹತಾಶಾ ಧಾಳಿ

ತೃಣಮೂಲ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ದಿನದಿಂದಲೂ ಜನಸಾಮಾನ್ಯರ ಮಧ್ಯೆ ದಿನೇ ದಿನೇ ತನ್ನ ಬೆಂಬಲವನ್ನು ಕಳೆದುಕೊಳ್ಳುತ್ತಿದೆ. ಕಳೆದ ಫೆಬ್ರವರಿ, 19ರಂದು ಬ್ರಿಗೇಡ್ ಪರೇಡ್ ಮೈದಾನದಲ್ಲಿ ಸಂಘಟಿಸಲಾಗಿದ್ದ ಬೃಹತ್ ರ್‍ಯಾಲಿಗೆ ಬೃಹತ್ ಸಂಖ್ಯೆಯಲ್ಲಿ ಜನ ಹರಿದುಬಂದಿದ್ದರು. 1977ರ ನಂತರ ನಂತರ ಅಲ್ಲಿ ನಡೆದ ಅತಿ ದೊಡ್ಡ ರ್‍ಯಾಲಿ ಅದು ಎಂದು ಮಾಧ್ಯಮಗಳು ವರದಿ ಮಾಡಿವೆ. 28ರ ಅಖಿಲ ಭಾರತ ಮುಷ್ಕರದ ಅಂಗವಾಗಿ ಈ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿತ್ತು. ರಾಜ್ಯದಲ್ಲಿ ಎಡರಂಗದತ್ತ ಹರಿದುಬರುತ್ತಿರುವ ಬೆಂಬಲವನ್ನು ನೋಡಿ ಸಹಿಸದ ತೃಣಮೂಲ ಕಾಂಗ್ರೆಸ್ ತನ್ನ ಎಂದಿನ ದುರಾಕ್ರಮಣಕಾರಿ ತಂತ್ರಕ್ಕೆ ಶರಣಾಗಿದೆ.

ವ್ಯಾಪಕ ಖಂಡನೆ

ಸಿಐಟಿಯು ಮುಖಂಡರಾದ ಶ್ಯಾಮಲ್ ಚಕ್ರವರ್ತಿ ಈ ದಾಳಿಯನ್ನು ತೀವ್ರವಾಗಿ ಟೀಕಿಸಿದ್ದು, ಇದೊಂದು ಪೂರ್ವಯೋಜಿತ ಕೃತ್ಯ ಎಂದಿದ್ದಾರೆ. ಕೊಲೆಗಾರರನ್ನು ಕೂಡಲೆ ಬಂಧಿಸಬೇಕೆಂದು ಆಗ್ರಹಿಸಿದ್ದಾರೆ. ಇದು ರಾಜಕೀಯ ಪ್ರತೀಕಾರದ ದಾಳಿಗಳಾಗಿದ್ದು, ಇಂತಹ ದಾಳಿಗಳು ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿವೆ. ಇವನ್ನು ಈ ಕೂಡಲೆ ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ. ಪಶ್ಚಿಮ ಬಂಗಾಳದ ಪ್ರದೇಶ ಕಾಂಗ್ರೆಸ್ ಸಮಿತಿಯೂ ಈ ದಾಳಿಯನ್ನು ತೀವ್ರವಾಗಿ ಟೀಕಿಸಿದೆ. ಇದು ಕೇವಲ ಅಸಹ್ಯಪಡುವಂತಹ ದಾಳಿಯಲ್ಲ. ರಾಜಕೀಯ ಪ್ರತೀಕಾರದ ದಾಳಿಗಳಾಗಿದ್ದು, ಇದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದೆ.

ಆಕಸ್ಮಿಕವಲ್ಲ–ವ್ಯವಸ್ಥಿತ, ಪೂರ್ವಯೋಜಿತ

ಈ ಅನಾಗರೀಕ ದಾಳಿ ಆಕಸ್ಮಿಕವಾಗಿ ನಡೆದಿರುವುದಲ್ಲ. ಇದೊಂದು ಯೋಜಿತ ಕಾರ್ಯಾಚರಣೆಯ ಪರಿಣಾಮವೆಂಬಂತಿದೆ. ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ತೃಣಮೂಲ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರ ದುಡಿಯುವ ಜನರ ಹಕ್ಕುಗಳ ದಮನಕ್ಕೆ ನಿಂತಿರುವುದು ಸ್ಪಷ್ಟವಾಗಿದೆ. ಈ ಧೋರಣೆಯ ಭಾಗವಾಗಿಯೇ ಸ್ವತ: ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಫೆಬ್ರವರಿ 28 ಮುಷ್ಕರಕ್ಕೆ ತಮ್ಮ ಬೆಂಬಲ ಇಲ್ಲ. ತಮ್ಮ ಪಕ್ಷ ಸರ್ಕಾರ ಅದನ್ನು ಶತಾಯಗತಾಯ ಅದನ್ನು ವಿರೋಧಿಸುವುದಾಗಿ ಘೋಷಿಸಿದ್ದಾರೆ. ತೃಣಮೂಲ ಕಾಂಗ್ರೆಸ್‌ನ ಕಾರ್ಮಿಕ ಸಂಘಟನೆಯೂ ಅದನ್ನು ತೀವ್ರವಾಗಿ ವಿರೋಧಿಸಲಿದೆ ಎಂದು ಹೇಳಿದ್ದಾರೆ. ಮಮತ ಬ್ಯಾನರ್ಜಿಯವರ ಪ್ರಚೋದನಾಕಾರಿ ಹೇಳಿಕೆಗಳೇ ಈ ದಾಳಿಗೆ ಕಾರಣ ಎಂದು ಪಶ್ಚಿಮ ಬಂಗಾಳದ ಬಿಜೆಪಿ ಘಟಕ ಪ್ರತಿಕ್ರಿಯಿಸಿರುವುದು ಪರಿಸ್ಥಿತಿಯ ಗಂಭೀರತೆ ಏನೆಂಬುದಕ್ಕೆ ಸಾಕ್ಷಿಯಾಗಿದೆ. ಎಡಪಂಥೀಯ ರಾಜಕಾರಣ, ಎಡ ಪಂಥೀಯ ರಾಜಕಾರಣ ಇರಲೇ ಬಾರದು ಎಂದು ಮಮತ ಬ್ಯಾನರ್ಜಿ ಹೇಳಿರುವುದು ಸರಿಯಾಗಿಯೇ ಇದೆ, ಆದರೆ ಅದು ಜಾರಿಗೆ ಬರಬೇಕಾದರೆ ಮಮತ ತಮ್ಮ ಬಳಿ ಇಟ್ಟುಕೊಂಡಿರುವ ಹೆಚ್ಚುವರಿ ಖಾತೆಗಳನ್ನು ಇತರರಿಗೆ ಹಂಚಿ, ಆಡಳಿತ ಬಿಗಿಗೊಳಿಸಬೇಕೆಂದು ಅವರ ಮಾಧ್ಯಮ ಮಿತ್ರರು ಸಲಹೆ ಕೊಟ್ಟಿರುವುದು ಇತ್ತೀಚೆಗೆ ಮಾಧ್ಯಮಗಳ ಮೂಲಕವೇ ವರದಿಯಾಗಿದೆ. (ದಿ ಎಕನಾಮಿಕ್ಸ್ ಟೈಮ್ಸ್, ಫೆಬ್ರವರಿ 22.2012)

ಇಂತಹ ಬೆಳವಣಿಗೆಗಳ ಒಟ್ಟು ಪರಿಣಾಮವಾಗಿ ಪಶ್ಚಿಮ ಬಂಗಾಳದಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ದಿನೇ ದಿನೇ ಕುಸಿಯುತ್ತಿದೆ. ರಾಜಕೀಯ ದ್ವೇಷದ ದಾಳಿಗಳು ಅವ್ಯಾಹತವಾಗಿ ಸಾಗಿವೆ. ಸಿಪಿಐ(ಎಂ) ಪಕ್ಷದ ನಾಯಕರು, ಕಾರ್ಯಕರ್ತರು, ಹಿತೈಷಿಗಳನ್ನು ಗುರಿಯಾಗಿಸಿಕೊಂಡು ಯೋಜಿತ ರೀತಿಯಲ್ಲಿ ದಾಳಿಗಳನ್ನು ನಡೆಸಲಾಗುತ್ತಿದೆ.

ಈ ಹೇಯ ಕೃತ್ಯವನ್ನು ಖಂಡಿಸಿ ಸಿಪಿಐ(ಎಂ) ಪಕ್ಷ ಗುರುವಾರ ಬರ್ದ್ವಾನ್ ಜಿಲ್ಲೆಯಲ್ಲಿ 12 ಗಂಟೆ ಬಂದ್‌ಗೆ ಕರೆ ನೀಡಿದೆ. ಸಾಲಿಂಗರ್ ಮತ್ತು ಬಹರಾಂಪುರಗಳಲ್ಲಿ ಪ್ರತಿಭಟನಾ ರ್‍ಯಾಲಿಗಳನ್ನು ನಡೆಸಲಾಗಿದೆ. ಇದೊಂದು ಅಮಾನವೀಯ ಮತ್ತು ರಾಜಕೀಯ ದ್ವೇಷದ ಕೃತ್ಯವಾಗಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕರಾದ ಸೂರ್ಯಕಾಂತ್ ಮಿಶ್ರ ಕಟುವಾಗಿ ಟೀಕಿಸಿದ್ದಾರೆ: ತಮ್ಮದೇ ಪಕ್ಷದ ಗೂಂಡಾಗಳು ಹಾಡಹಗಲೇ ಇಂತಹ ದಾಳಿ ನಡೆಸಿರುವ ಕುರಿತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬಹಿರಂಗವಾಗಿ ಹೇಳಿಕೆ ನೀಡಬೇಕೆಂದು ಆಗ್ರಹಿಸಿದ್ದಾರೆ.

ಆದರೆ ಟಿಎಂಸಿ ಮುಖಂಡರು ಮಾತ್ರ ತಮ್ಮ ಸೋಗಲಾಡಿತನವನ್ನು ಬಿಟ್ಟಿಲ್ಲ. ಈ ದಾಳಿಯ ಹಿಂದೆ ಟಿಎಂಸಿ ಕೈವಾಡ ಇಲ್ಲ ಎಂದು ರಾಜ್ಯ ಪೌರಾಡಳಿತ ಸಚಿವ ಫಿರ್‌ಹಾದ್ ಹಕೀಮ್ ಹೇಳಿದ್ದಾರೆ. ಸಿಪಿಐ(ಎಂ) ಕೈಗೊಂಡಿದ್ದ ರ್‍ಯಾಲಿಗೆ ಭಾರಿ ಪ್ರತಿರೋಧ ಬಂದಿರುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ ಎಂದು ಹೇಳಲು ಹೊರಟಿದ್ದಾರೆ. ಆದರೆ ಸಿಪಿಐ(ಎಂ) ಪಕ್ಷ ಇದನ್ನು ಸಾರಾಸಗಟು ನಿರಾಕರಿಸಿದೆ. ಜನರ ಬೆಂಬಲವನ್ನು ನೋಡಿ ಭೀತಿಗೊಂಡಿರುವ ತೃಣಮೂಲ ಕಾಂಗ್ರೆಸ್ ಮುಖಂಡರು ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದಿದೆ. ತೃಣಮೂಲ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರದಲ್ಲಿ ಇದುವರೆಗೂ 58 ಮಂದಿ ಸಿಪಿಎಂ ಕಾರ್ಯಕರ್ತರು ಮತ್ತು ಮುಖಂಡರನ್ನು ಹತ್ಯೆ ಮಾಡಲಾಗಿದೆ.

ರಾಜ್ಯದಲ್ಲಿ ಪ್ರತಿಭಟನೆ

ಬೆಂಗಳೂರಿನಲ್ಲಿ ಫೆಬ್ರವರಿ 24, 2012 ರಂದು ಕಾರ್ಪೋರೇಷನ್ ವೃತ್ತದ ಬಳಿ ಸಿ.ಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತ್ತು. ಕೋಲಾರ, ತುಮಕೂರಿನಲ್ಲಿ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ನಡೆದ ವರದಿಗಳಿವೆ.



ತುಮಕೂರಿನಲ್ಲಿ ನಡೆದ ಪ್ರತಿಭಟನೆ



ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ

ಈ ಹೊಸ ಸಂಸ್ಥೆಯನ್ನು ರಚಿಸುವ ಕುರಿತ ಪ್ರಧಾನ ಮಂತ್ರಿಗಳ ವಿವರಣೆಯಲ್ಲಿಯೇ ವಿರೋಧಾಭಾಸಗಳು ಕಾಣುತ್ತವೆ. ಸಂಸತ್ತು 'ರಾಷ್ಟ್ರೀಯ ತನಿಖಾ ಸಂಸ್ಥೆ'ಯನ್ನು ರಚಿಸುವ ಶಾಸನವನ್ನು ಸರ್ವಾನುಮತದಿಂದ ಅಂಗೀಕರಿಸಿರುವಾಗ ಇನ್ನೊಂದು ಸಂಸ್ಥೆಯ ಅಗತ್ಯವೇನಿದೆ? ವಾಸ್ತವವಾಗಿ ಇದರ ಹಿಂದೆ, ಮತ್ತೊಮ್ಮೆ, ದೇಶದಲ್ಲಿ ಭಯೋತ್ಪಾದನೆಯನ್ನು ಮೆಟ್ಟಿ ಹಾಕುವ ನೈಜ ಕಾಳಜಿಗಳಿಗಿಂತ ಹೆಚ್ಚಾಗಿ ಅಮೆರಿಕಾಕ್ಕೆ ನೀಡಿರುವ ವಚನಗಳ ಒತ್ತಡಗಳೇ ಇರುವಂತೆ ಕಾಣುತ್ತದೆ. ಭಾರತದಲ್ಲಿ ಅಮೆರಿಕಾದ ಗ್ವಂಟನಮೋ ಪಡಿಯಚ್ಚುಗಳು ಖಂಡಿತಾ ಬೇಡ.

'ರಾಷ್ಟ್ರೀಯ ಪ್ರತಿ-ಭಯೋತ್ಪಾದನೆ ಕೇಂದ್ರ'ದ ಗುರಿ

ಭಯೋತ್ಪಾದನೆಯ ವಿರುದ್ಧವೋ ಅಥವ ಒಕ್ಕೂಟ ತತ್ವದ ವಿರುದ್ಧವೋ?



'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಫೆಬ್ರವರಿ 23, 2012 ರ ಸಂಚಿಕೆಯ ಸಂಪಾದಕೀಯದಿಂದ

ಯುಪಿಎ-2 ಸರಕಾರ 'ರಾಷ್ಟ್ರೀಯ ಪ್ರತಿ-ಭಯೋತ್ಪಾದನೆ ಕೇಂದ್ರ'(ಎನ್‌ಸಿಟಿಸಿ) ರಚಿಸಿರುವುದಾಗಿ ಮಾಡಿರುವ ಏಕಪಕ್ಷೀಯ ಪ್ರಕಟಣೆ ಸಹಜವಾಗಿಯೇ ಪ್ರತಿಪಕ್ಷಗಳ ಆಳ್ವಿಕೆಯ ರಾಜ್ಯ ಸರಕಾರಗಳ ಕ್ರೋಧಕ್ಕೆ ಪಾತ್ರವಾಗಿದೆ; ಕೆಲವು ಯುಪಿಎ ಮಿತ್ರಪಕ್ಷಗಳ ಆಳ್ವಿಕೆಯ ರಾಜ್ಯ ಸರಕಾರಗಳ ಕ್ರೋಧಕ್ಕೂ. ಇದು ರಾಜ್ಯಗಳ ಹಕ್ಕುಗಳ ಮೇಲಿನ ಇನ್ನೊಂದು ಅತಿಕ್ರಮಣ ಎಂದು ಭಾವಿಸಿರುವುದರಲ್ಲಿ ತಪ್ಪೇನಿಲ್ಲ. ಇದೀಗ ಕೇಂದ್ರ -ರಾಜ್ಯ ಸಂಬಂಧಗಳ ಮೇಲೆ ಹೊಸದಾಗಿ ಚರ್ಚೆಯನ್ನು ಬಡಿದೆಬ್ಬಿಸಿದೆ.

ನಮ್ಮ ಸಂವಿಧಾನದ ಮೊದಲ ಕಲಮು ನಮ್ಮ ದೇಶ "ಇಂಡಿಯಾ, ಅಂದರೆ ಭಾರತ ಒಂದು ರಾಜ್ಯಗಳ ಸಂಘ' ಎಂದು ನಿರೂಪಿಸುತ್ತದೆ ಎಂಬುದನ್ನು, ದುರದೃಷ್ಟವಶಾತ್, ಯುಪಿಎ-2 ಸರಕಾರಕ್ಕೆ ನೆನಪಿಸಬೇಕಾಗಿ ಬಂದಿದೆ. ನಮ್ಮ ಸಂವಿಧಾನದ ಒಕ್ಕೂಟ ಸ್ವರೂಪ ನಮ್ಮ ಸಂವಿಧಾನದ ಈ ನಿರೂಪಣೆಯಿಂದ ಹೊಮ್ಮಿದ್ದು, ಇದು ನಮ್ಮ ಸಂವಿಧಾನದ ಒಂದು ಮೂಲ ಲಕ್ಷಣ ಎಂದು ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ. ವರ್ಷಗಳು ಕಳೆದಂತೆ ರಾಜ್ಯಗಳ ಹಕ್ಕುಗಳನ್ನು ನಿರಂತರವಾಗಿ ಮೊಟಕು ಮಾಡುತ್ತಿದ್ದು, ನಮ್ಮ ಸಂವಿಧಾನದ ಒಕ್ಕೂಟ ಸ್ವರೂಪವನ್ನು ನಿಧಾನವಾಗಿ ಒಂದು ಏಕಘಟಕ ಪ್ರಭುತ್ವ ರಚನೆಯಾಗಿ ಮಾರ್ಪಡಿಸಲಾಗುತ್ತಿದೆ.

1977 ರಷ್ಟು ಹಿಂದೆಯೇ, ಪಶ್ಚಿಮ ಬಂಗಾಲದಲ್ಲಿ ಜ್ಯೋತಿ ಬಸು ಮುಖ್ಯಮಂತ್ರಿಯಾಗಿ ಮೊದಲ ಎಡರಂಗ ಸರಕಾರ ಅಧಿಕಾರ ವಹಿಸಿಕೊಂಡಾಗ, ನಮ್ಮ ಸಂವಿಧಾನದ ಭಾವನೆಗೆ ಅನುಗುಣವಾಗಿ ಮತ್ತು ಅಕ್ಷರಶಃ ಕೂಡ ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್ರಚಿಸಬೇಕೆಂಬ 15 ಅಂಶಗಳ ಬೇಡಿಕೆ ಪಟ್ಟಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಲಾಯಿತು. ಹೀಗೆ ಮೊದಲಡಿಯಿಟ್ಟ ನಂತರ, 1983ರಲ್ಲಿ ಕೇಂದ್ರ-ರಾಜ್ಯ ಸಂಬಂಧಗಳ ಮೇಲೆ ಹಲವು ಕಾಂಗ್ರೆಸೇತರ ಮುಖ್ಯಮಂತ್ರಿಗಳ ಸಭೆಗಳ ಸರಣಿ ನಡೆಯಿತು. ಇವುಗಳಲ್ಲಿ ಮೊದಲನೆಯದಕ್ಕೆ ಜಮ್ಮು-ಕಾಶ್ಮೀರದ ಆಗಿನ ಮುಖ್ಯಮಂತ್ರಿ ಫಾರುಕ್ ಅಬ್ದುಲ್ಲ ಆತಿಥ್ಯ ನೀಡಿದರು. ಈ ಪ್ರಯತ್ನಗಳ ಫಲಿತಾಂಶವಾಗಿ 1983ರಲ್ಲಿ ಕೇಂದ್ರ-ರಾಜ್ಯ ಸಂಬಂಧಗಳ ಮೇಲೆ ಸರ್ಕಾರಿಯಾ ಆಯೋಗವನ್ನು ರಚಿಸಲಾಯಿತು. ಅದು 1983ರಲ್ಲಿ ತನ್ನ ವರದಿ ಮಂಡಿಸಿತು. ಅದರ ಬಹಳಷ್ಟು ಶಿಫಾರಸುಗಳು ಈಗಲೂ ಕೇಂದ್ರ ಸರಕಾರದ ಕಡತಗಳಲ್ಲಿ ಧೂಳು ತಿನ್ನುತ್ತಿವೆ. ಯುಪಿಎ-1 ಸರಕಾರ ಎಡಪಕ್ಷಗಳ ನಿರ್ಣಾಯಕ ಹೊರಗಣ ಬೆಂಬಲದಿಂದ ರಚನೆಗೊಂಡ ನಂತರ ಏಪ್ರಿಲ್ 2007ರಲ್ಲಿ ಈ ಪ್ರಶ್ನೆಯ ಮೇಲೆ ಎಂ ಎಂ ಪೂಂಚಿ ಆಯೋಗವನ್ನು ನೇಮಿಸಲಾಯಿತು. ಅದು 2010ರಲ್ಲಿ ಒಂದು ವರದಿಯನ್ನು ಸಲ್ಲಿಸಿತು. ಆದರೆ ಅದರ ಶಿಫಾರಸುಗಳ ಮೇಲೆ ಒಂದು ಮಾಹಿತಿಪೂರ್ಣ ಚರ್ಚೆಯೂ ನಡೆಲಿಲ್ಲ, ಗಮನಾರ್ಹವಾದುದೇನನ್ನೂ ಜಾರಿಗೊಳಿಸಲೇ ಇಲ್ಲ.

ವಿವರಣೆಯಲ್ಲೇ ವಿರೋಧಾಭಾಸ

ಎನ್‌ಸಿಟಿಸಿ ಕುರಿತಂತೆ ಸದ್ಯದ ನೈಜ ಆತಂಕಗಳನ್ನು ದೂರಮಾಡುವ ಒಂದು ಪ್ರಯತ್ನವಾಗಿ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶ ನಡೆಸಿ ಈ ಭಯೋತ್ಪಾದನೆ-ವಿರೋಧಿ ಸಂಸ್ಥೆ ರಾಜ್ಯಗಳ ಹಕ್ಕುಗಳ ಮೇಲೆ ಅತಿಕ್ರಮಣ ನಡೆಸುವುದಿಲ್ಲ ಎಂದು ರಾಜ್ಯ ಸರಕಾರಗಳಿಗೆ ಭರವಸೆ ನೀಡಿದರು. ಏಳು ಮುಖ್ಯಮಂತ್ರಿಗಳಿಗೆ ಬರೆದ ಒಂದು ಪತ್ರದಲ್ಲಿ ಪ್ರಧಾನ ಮಂತ್ರಿಗಳು "ಎನ್‌ಸಿಟಿಸಿ ರಚಿಸುವಲ್ಲಿ, ಸಂವಿಧಾನಿಕ ಅಂಂಶಗಳ ಮೂಲ ಲಕ್ಷಣಗಳನ್ನು ಹಾಗೂ ರಾಜ್ಯಗಳು ಮತ್ತು ಸಂಘದ ನಡುವಿನ ಅಧಿಕಾರ ಹಂಚಿಕೆಯನ್ನು ಯಾವುದೇ ರೀತಿಯಲ್ಲಿ ತಟ್ಟುವ ಆಶಯ ಸರಕಾರದ್ದಲ್ಲ" ಎಂದು ಹೇಳಿದ್ದಾರೆ. ದೇಶಾದ್ಯಂತ ಭಯೋತ್ಪಾದನೆಗೆ ಪ್ರತಿಯಾಗಿ ಪ್ರಯತ್ನಗಳನ್ನು ಸಂಯೋಜಿಸುವ ಅಗತ್ಯವನ್ನು ವಿವರಿಸುತ್ತಾ ಪ್ರಧಾನ ಮಂತ್ರಿಗಳು "ಈ ಕಾರಣಕ್ಕಾಗಿ 'ಎನ್‌ಸಿಟಿಸಿ'ಯನ್ನು ಪ್ರತ್ಯೇಕ ಸಂಘಟನೆಯಾಗಿ ಮಾಡದೆ ಬೇಹುಗಾರಿಕೆ ಕಚೇರಿ(ಇಂಟೆಲಿಜೆನ್ಸ್ ಬ್ಯೂರೊ-ಐಬಿ)ಯೊಳಗೆ ಇಡಲಾಗಿದೆ " ಎಂದಿದ್ದಾರೆ.

ಹೀಗೆ, ಈ ಹೊಸ ಸಂಸ್ಥೆಯನ್ನು ರಚಿಸುವ ಕುರಿತ ಪ್ರಧಾನ ಮಂತ್ರಿಗಳ ವಿವರಣೆಯಲ್ಲಿಯೇ ವಿರೋಧಾಭಾಸಗಳು ಕಾಣುತ್ತವೆ. ಐಬಿ ಈಗಾಗಲೇ ಈ ಕೆಲಸ ಮಾಡುತ್ತಿದ್ದರೆ, ಈ ಇನ್ನೊಂದು ಶೀರ್ಷಸ್ತ ಸಂಸ್ಥೆಯ ಅಗತ್ಯ ಏನಿದೆ? ಯುಪಿಎ ಸರಕಾರವೇ, ಮುಂಬೈ ಭಯೋತ್ಪಾದಕ ದಾಳಿಗಳ ಹಿನ್ನೆಲೆಯಲ್ಲಿ 'ರಾಷ್ಟ್ರೀಯ ತನಿಖಾ ಸಂಸ್ಥೆ'(ಎನ್‌ಐಎ) ಯನ್ನು ರಚಿಸಿತು. ಸಂಸತ್ತು ಇದನ್ನು ಸರ್ವಾನುಮತದಿಂದ ಶಾಸನವಾಗಿ ಅಂಗೀಕರಿಸಿತು. ಹೀಗಿರುವಾಗ ಇನ್ನೊಂದು ಸಂಸ್ಥೆಯ ಅಗತ್ಯವೇನಿದೆ?

ನೈಜ ಸಂದೇಹಗಳು

ಸಂಸತ್ತಿನಲ್ಲಿ ಎನ್‌ಐಎ ಕುರಿತ ಚರ್ಚೆಯ ವೇಳೆಯಲ್ಲಿ ಎಡಪಕ್ಷಗಳು ರಾಜ್ಯಗಳ ಹಕ್ಕುಗಳ ಬಗ್ಗೆ ನೈಜ ಆತಂಕಗಳನ್ನು ಎತ್ತಿದ್ದವು. ಏಕೆಂದರೆ ಸಂವಿಧಾನ 'ಕಾನೂನು ಮತ್ತು ವ್ಯವಸ್ಥೆ'ಯ, ಅಪರಾಧ ತನಿಖೆಯನ್ನು ನಡೆಸುವ ಮತ್ತು ಅದಕ್ಕೆ ಸಂಬಂಧಪಟ್ಟ ನ್ಯಾಯವನ್ನು ಒದಗಿಸುವ ಹಕ್ಕನ್ನು ನಿರ್ದಿಷ್ಟವಾಗಿ ರಾಜ್ಯಗಳಿಗೇ ಕೊಟ್ಟಿದೆ. ಆಗ ಕೇಂದ್ರ ಗೃಹ ಮಂತ್ರಿಗಳು, ಮೊದಲ ಆರು ತಿಂಗಳ ಅನುಭವದ ಆಧಾರದಲ್ಲಿ ಈ ಪ್ರಶ್ನೆಯನ್ನು ಸಂಸತ್ತು ಮತ್ತೆ ಎತ್ತಿ ಕೊಳ್ಳುವುದು ಎಂದು ಸಂಸತ್ತಿಗೆ ಭರವಸೆ ನೀಡಿದ್ದರು. ಆದರೆ ಅದನ್ನೇನೂ ಮಾಡಿಲ್ಲ.

ಇದರ ಬೆಳಕಿನಲ್ಲಿ ನೋಡಿದಾಗ, ಎನ್‌ಸಿಟಿಸಿ ರಚನೆ ಅದರ ನಿಜ ಉದ್ದೇಶಗಳ ಬಗ್ಗೆ ನೈಜ ಸಂದೇಹಗಳನ್ನು ಮತ್ತು ಆತಂಕಗಳನ್ನು ಎಬ್ಬಿಸುತ್ತದೆ. ಎಲ್ಲೆಡೆ ಬೇಹುಗಾರಿಕಾ ಸಂಸ್ಥೆಗಳ ಚಾರಿತ್ರಿಕ ವಿಕಾಸ ಮತ್ತು ಪ್ರಜಾಪ್ರಭುತ್ವಗಳ ಅನುಭವಗಳನ್ನು ಪರಿಶೀಲಿಸಿದಾಗ, ಪೋಲೀಸ್ ಇಲಾಖೆ ಕ್ರಿಮಿನಲ್ ತನಿಖೆಗಳಲ್ಲಿ ಉಪಯೋಗಿಸಲು ಮತ್ತು ನ್ಯಾಯ ಒದಗಿಸಲು ಬೇಕಾದ ಮಾಹಿತಿಯನ್ನು ಕಲೆ ಹಾಕುವುದು ಅವುಗಳ ಕಾರ್ಯಭಾರ ಎಂಬುದು ಕಂಡು ಬರುತ್ತದೆ. ಆರಕ್ಷಣೆಯ ಅಂದರೆ ಪೊಲಿಸಿಂಗ್ ಕೆಲಸವನ್ನು ಈ ಬೇಹುಗಾರಿಕಾ ಸಂಸ್ಥೆಗಳಿಗೆ ವಿಧಿಸಿರುವುದಿಲ್ಲ. ಎನ್‌ಸಿಟಿಸಿಗೆ ಶೋಧ ಮತ್ತು ಬಂಧನದ ಹಕ್ಕುಗಳನ್ನೂ ನೀಡಿರುವುದರಿಂದ ಬೇಹುಗಾರಿಕೆ ಮತ್ತು ಆರಕ್ಷಣೆಯ ನಡುವಿನ ಈ ವ್ಯತ್ಯಾಸ ಮಸುಕುಗೊಂಡು ಬಹುವಿಧಗಳ ದುರುಪಯೋಗಗಳಿಗೆ ದಾರಿಗಳನ್ನು ತೆರೆದಂತಾಗುತ್ತದೆ. ಇದು ಅಮೆರಿಕಾದ ಎಫ್‌ಬಿಐ ಸೇರಿದಂತೆ ಹಲವು ಆಧುನಿಕ ಪ್ರಜಾಪ್ರಭುತ್ವಗಳ ಅನುಭವವಾಗಿದೆ. ಭಾರತದ ಸಂದರ್ಭದಲ್ಲಿ, ಇದರೊಡನೆ, ನಮ್ಮ ಸಂವಿಧಾನದ ಒಕ್ಕೂಟ ರಚನೆಯನ್ನು ಮತ್ತು ರಾಜ್ಯಗಳ ಹಕ್ಕುಗಳನ್ನು ಅತಿಕ್ರಮಿಸುವ ಅಂಶವೂ ಸೇರುತ್ತದೆ. ಅಲ್ಲದೆ, ಭಾರತದಲ್ಲಿ ಐಬಿ ನಡೆದು ಬಂದ ದಾರಿ, ರಾಜಕೀಯ ಬೇಹುಗಾರಿಕೆ ನಡೆಸಿರುವ ಅದರ ಕುಖ್ಯಾತಿಯ ದಾಖಲೆಗಳು ರಾಜ್ಯಗಳ ಇಂತಹ ನೈಜ ಆತಂಕಗಳನ್ನು ಇನ್ನಷ್ಟು ಬಲಪಡಿಸುತ್ತವೆ.

ಏಕಿಷ್ಟು ತರಾತುರಿ?

ಯುಪಿಎ ಸರಕಾರ ಈ ಎನ್‌ಸಿಟಿಸಿಯ ರಚನೆಯ ನಿರ್ಧಾರವನ್ನು ಇಷ್ಟೊಂದು

ಪುಟ 14ಕ್ಕೆ ......





ಜನಶಕ್ತಿ
ಕನ್ನಡ ವಾರಪತ್ರಿಕೆ

ಪಠ್ಯ ಪುಸ್ತಕಗಳ ವಿಕೃತೀಕರಣ

ಕರ್ನಾಟಕ ರಾಜ್ಯದ ಶಾಲಾ ಪಠ್ಯ ಪುಸ್ತಕಗಳನ್ನು ಯಾವ ರೀತಿಯಾಗಿ ಆರೆಸ್ಸೆಸ್‌ನ ಮತಾಂಧ, ಜಾತಿವಾದಿ, ದೃಷ್ಟಿಕೋನದಿಂದ ವಿಕೃತಗೊಳಿಸುವ ಸಂಚುಗಳು ನಡೆದಿವೆ ಎಂಬ ಬಗ್ಗೆ ಕಳೆದ ವಾರ ಓದಿದ್ದೀರಿ. ಈ ವಾರ ಇದೇ ವಿಷಯದಲ್ಲಿ ವಿಷಮಯ ಪಠ್ಯದ ಇನ್ನೂ ಹಲವು ಆಯಾಮಗಳ ಕುರಿತು ಓದಿ.

ಆರ್.ರಾಮಕೃಷ್ಣ

ಆರ್ಯರ ಮೂಲದ ಮಾತಿಲ್ಲ

ಸಂಘ ಪರಿವಾರದ ಭಾರತ ಚರಿತ್ರೆಯ ವಿಕೃತೀಕರಣ ಪ್ರಕ್ರಿಯೆಯ ಒಂದು ಪ್ರಮುಖ ಪ್ರಶ್ನೆ, ಆರ್ಯರ ಮೂಲದ ಪ್ರಶ್ನೆ. ಆರ್ಯರು ಇಂದಿನ ಭಾರತದ ಈ ಭೂಭಾಗಕ್ಕೆ ಮಧ್ಯ ಏಷ್ಯಾದಿಂದ ವಲಸೆ ಬಂದ ಜನಾಂಗ ಎಂಬ ವಿಚಾರ ಬಹಳಷ್ಟು ವಸ್ತು ನಿಷ್ಠ ಇತಿಹಾಸಕಾರರ ಅಭಿಮತವಾಗಿದ್ದರೂ ಸಂಘ ಪರಿವಾರ ಅದನ್ನು ಒಪ್ಪದೇ ಮಂಡಿಸುತ್ತಿರುವ ತರ್ಕ, ಕುತರ್ಕಗಳು ಕುಖ್ಯಾತವಾಗಿವೆ.

ತರಗತಿ 5ರ 'ವೇದಕಾಲದ ಭಾರತ' ಎಂಬ ಪಾಠದಲ್ಲಿ

"ಸುಮಾರು ಐದು ಸಾವಿರ ವರ್ಷಗಳ ಹಿಂದೆ ಸಿಂಧೂ ಮತ್ತು ಸರಸ್ವತಿ ಬಯಲಿನಲ್ಲಿ ನೆಲೆಗೊಂಡಿದ್ದವರನ್ನು ಆರ್ಯರು ಎನ್ನುವರು. ತಾವು ನೆಲೆಯೂರಿದ ಪ್ರದೇಶವನ್ನು ಆರ್ಯರು ಸಪ್ತ ಸಿಂಧವ' (ಸಪ್ತ ಸಿಂಧೂ) ಎಂದು ಕರೆದರು." ಎನ್ನುವ ಒಂದು ಪ್ಯಾರಾ ಇದೆ.

ಸುಮ್ಮನೆ ತರ್ಕಕ್ಕಾಗಿ ಆರ್ಯರ ಮೂಲದ ಪ್ರಶ್ನೆಯು ಒಂದು ವಿವಾದಿತ ವಿಷಯ ಎಂದು ಒಪ್ಪಿದರೂ ಕನಿಷ್ಟ, ಆರ್ಯರು ಮಧ್ಯ ಏಷ್ಯಾದಿಂದ ವಲಸೆ ಬಂದವರೆಂದು ಹಲವು ಇತಿಹಾಸಕಾರರು ಪ್ರತಿಪಾದಿಸುತ್ತಾರೆನ್ನುವ ವಿಚಾರದ ಪ್ರಸ್ತಾಪವನ್ನಾದರೂ ಮಾಡುವ ಶೈಕ್ಷಣಿಕ ಶಿಸ್ತು, ಬೌದ್ಧಿಕ ಶಿಸ್ತು ಪಠ್ಯಕ್ಕಿಲ್ಲ.

"ಪವಿತ್ರ ಗೋವು' ಎಂಬ ಸುಳ್ಳಿನ ಕಂತೆ...'

ಕರ್ನಾಟಕ ರಾಜ್ಯದ ಶಾಲಾ ಪಠ್ಯ ಪುಸ್ತಕಗಳನ್ನು ಯಾವ ರೀತಿಯಾಗಿ ಆರೆಸ್ಸೆಸ್‌ನ ಮತಾಂಧ, ಜಾತಿವಾದಿ, ದೃಷ್ಟಿಕೋನದಿಂದ ವಿಕೃತಗೊಳಿಸುವ ಸಂಚುಗಳು ನಡೆದಿವೆ ಎಂಬ ಬಗ್ಗೆ ಕಳೆದ ವಾರ ಓದಿದ್ದೀರಿ. ಈ ವಾರ ಇದೇ ವಿಷಯದಲ್ಲಿ ವಿಷಮಯ ಪಠ್ಯದ ಇನ್ನೂ ಹಲವು ಆಯಾಮಗಳ ಕುರಿತು ಓದಿ.

ಇದೇ ಪಾಠದಲ್ಲಿ "ಗೋವುಗಳನ್ನು ಕೊಲ್ಲಲಾಗದ್ದು ಎಂಬ ನಂಬಿಕೆ ಇತ್ತು.". ಎನ್ನುತ್ತದೆ ಪಠ್ಯ.

ಮುಂದೆ ಉತ್ತರ ವೇದಕಾಲ ಎನ್ನುವ ಶೀರ್ಷಿಕೆಯಡಿ ಸಾಮಾಜಿಕ ಬದಲಾವಣೆಗಳು ಎಂಬ ಭಾಗದಲ್ಲಿ " ಕಾಲ ಕ್ರಮೇಣ ದುಡಿಮೆಯ ಆಧಾರದ ಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮತ್ತು ಶೂದ್ರರೆಂಬ ವರ್ಣಗಳು ಏರ್ಪಟ್ಟವು. ಇದನ್ನು ವರ್ಣ ವ್ಯವಸ್ಥೆ ಎನ್ನುವರು ಎಂದು ವಿವರಿಸಲಾಗಿದೆ.

ಎಲ್ಲರೂ ದುಡಿಮೆಗಾರರು....
ದುಡಿಸುವವರು ಮಾಯ

ಆರ್ಯ ಸಮಾಜದಲ್ಲಿ ವರ್ಣಗಳು ಏರ್ಪಟ್ಟಿರುವುದು ದುಡಿಮೆಯ ಆಧಾರದ ಮೇಲಲ್ಲ. ದುಡಿಯುವವರು, ದುಡಿಸುವವರು ಎನ್ನುವ ವರ್ಗ ವಿಭಜನೆಯ ಆಧಾರದ ಮೇಲೆ. ದುಡಿಮೆಯ ಆಧಾರದ ಮೇಲೆ ವರ್ಣ ವಿಭಜನೆ ಎನ್ನುವುದಾದರೆ ಬ್ರಾಹ್ಮಣರ ಕೆಲಸ ಏನು ? ಅವರು ಏನು ದುಡಿಯುತ್ತಿದ್ದರು ? ಕ್ಷತ್ರಿಯರ ದುಡಿಮೆ ? ಏನು ಪ್ರಶ್ನೆಯೂ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ? ಕ್ಷತ್ರಿಯ ವರ್ಣದ ಉದಯ ಎಂದರೆ ಅದು ಸಮಾಜದಲ್ಲಿ ಪ್ರಭುತ್ವ ವಿಕಾಸಗೊಳ್ಳುತ್ತಾ ಸ್ಪಷ್ಟ ರೂಪ ಪಡೆಯುತ್ತಿರುವ ಲಕ್ಷಣವಲ್ಲವೇ ? ಸಂಘ ಪ್ರೇರಿತ ಇತಿಹಾಸಕಾರರನ್ನು ತೂರಿಸಲಾದ ಪಠ್ಯದಲ್ಲಿ ಈ ದೃಷ್ಟಿಯ ಇತಿಹಾಸ ನಿರೂಪಣೆಯ ಸಾಧ್ಯತೆ ಏನು ಎನ್ನುವುದು ಅರ್ಥವಾಗುವಂತಹದ್ದೇ !ಆದರೆ ಸಂಘ ಪರಿವಾರದ ವರ್ಗ ಹಿತಾಸಕ್ತಿಗಳೇನು ? ವರ್ಗ ಪಕ್ಷಪಾತದ ಸ್ವರೂಪವೇನೆಂದೂ ಇಂತಹ ಉದಾಹರಣೆಗಳಿಂದ ಅರ್ಥ ಮಾಡಿಕೊಳ್ಳಲು ಸಾಧ್ಯ.



ಯುವಜನರ ತಲೆಗೆ ವಿವೇಚನಾ ರಹಿತ ಕೋಮುವಾದಿ ಉನ್ಮಾದ ಮತ್ತನ್ನು ಏರಿಸುವುದು ಪಠ್ಯ ಪುಸ್ತಕಗಳ ಕೋಮುವಾದಿಕರಣದ ಒಂದು ಪ್ರಮುಖ ಗುರಿ

ವೈದಿಕ ಸಾಹಿತ್ಯದ ಪುಟ ಪುಟಗಳಲ್ಲೂ ಯಜ್ಞ, ಯಾಗಗಳ ಕುರಿತು ಮತ್ತು ಅವುಗಳಲ್ಲಿ ಪಶು ಬಲಿಗಳ ವಿವರಣೆ, ಪ್ರಸ್ತಾಪಗಳೂ ತುಂಬಿ ತುಳುಕುತ್ತಿವೆ.' ಕುದುರೆ, ಗೋವು ಮುಂತಾದವುಗಳನ್ನು ಈ ಸಂದರ್ಭಗಳಲ್ಲಿ ಬಲಿ ಕೊಡುತ್ತಿದ್ದುದರ ಬಗೆಗೆ ಉಲ್ಲೇಖಗಳಿವೆ. ಋಷಿ ಮುನಿಗಳು ಗೋ ಮಾಂಸ ತಿನ್ನುತ್ತಿದ್ದುದರ ವಿವರಗಳಿವೆ.

ವೈದಿಕ ಧರ್ಮದಲ್ಲಿನ ಮೌಢ್ಯ, ಹಿಂಸೆ, ದುಂದು, ಜನಪೀಡಕ ಆಚರಣೆ, ವರ್ಣ ವ್ಯವಸ್ಥೆಯ ಕ್ರೌರ್ಯಗಳ ವಿರುದ್ಧದ ಬಂಡಾಯವಾಗಿಯೇ ಕ್ರಿ.ಪೂ. ಆರನೇ ಶತಮಾನದಲ್ಲಿ ಬೌದ್ಧ ಧರ್ಮ ಮತ್ತು ಜೈನ ಧರ್ಮಗಳು ಬೆಳೆದು ಬಂದದ್ದು.

ಪ್ರತಿಭಟನಾ ಪರಂಪರೆಗಳನ್ನೆ ನುಂಗಿ ನೊಣೆಯುವ ಷಡ್ಯಂತ್ರಗಳು

ಹೊಸ ಧರ್ಮಗಳ ಬೆಳವಣಿಗೆಯಿಂದ ತತ್ತರಿಸಿ ಹೋದ ವೈದಿಕ ಪುರೋಹಿತಶಾಹಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ತಂತ್ರವಾಗಿ ಗೋ ಮಾಂಸ ಭಕ್ಷಣೆಯನ್ನು ಕೈ ಬಿಟ್ಟಿತು.

ಈ ಪಠ್ಯ ಪುಸ್ತಕ ಹೇಳುವುದು ನೋಡಿ. "ಹೊಸ ಚಿಂತನೆಗೆ ಚಾಲನೆ ನೀಡಿದ್ದು ಮುಖ್ಯವಾಗಿ ಉಪನಿಷತ್ತಿನ ವಿಚಾರಗಳು" ಎನ್ನುತ್ತದೆ ಪಠ್ಯ.

ಭಾರತದ ಸಂಸ್ಕೃತಿ ಎಂದರೆ ವೈದಿಕ ಸಂಸ್ಕೃತಿ !!!

ಈ ಪಠ್ಯದ ಪ್ರಕಾರ ಭಾರತದ ಸಂಸ್ಕೃತಿ ಎಂದರೆ ವೈದಿಕ ಸಂಸ್ಕೃತಿ. " ಭಾರತದ ಪ್ರಾರಂಭಿಕ ಇತಿಹಾಸದಲ್ಲಿ ವೇದಕಾಲವು ಮಹತ್ವದ್ದಾಗಿದೆ. ಬಹುತೇಕ ಭಾರತೀಯ ಮೌಲ್ಯಗಳು ಹಾಗೂ ಜೀವನ ಪದ್ಧತಿ ಇದೇ ಕಾಲದಲ್ಲಿ ರೂಪುಗೊಂಡವು" ಎಂದೆಲ್ಲಾ ಹೇಳುವುದರ ಅರ್ಥವೇನು ?

ಭಾರತದ ಪುರೋಹಿತಶಾಹಿ ನಂಬಿಕೊಂಡಿರುವ ಇಂತಹ ಸ್ವಹಿತಾಸಕ್ತ ಮೌಢ್ಯ, ಆತ್ಮ ರತಿಯ ವಿಚಾರಗಳನ್ನು ಪಠ್ಯಗಳನ್ನು ಹೇಸಿಗೆ ಇಲ್ಲದೇ ಹಾಗೇ ತುಂಬಲಾಗಿದೆ. ಇಂತಹ ವಿಚಾರಗಳಿಗೆ ಇನ್ನೂ ಎಷ್ಟೋ ಉದಾಹರಣೆಗಳನ್ನು ಕೊಡಬಹುದು.

ಪ್ರತಿರೋಧದ ಫಲ

ಇಂತಹ ವಿಚಾರಗಳಿಗೆ ಪಠ್ಯ ಪುಸ್ತ ರಚನಾ ಸಮಿತಿಯೊಳಗೇ ವಿರೋಧ ಬಂದಿರುವುದರಿಂದ ಪಠ್ಯದಲ್ಲಿ ಆರ್ಯರು ದಾಸ ದಸ್ಯುಗಳ ವಿರುದ್ಧ ಹೋರಾಟ ಮಾಡುತ್ತಿದ್ದರು...., ಆರ್ಯರ ವೈರಿಗಳಾಗಿದ್ದ ಮತ್ತೊಂದು ಸಮೂಹವೆಂದರೆ ಪಾಣಿಗಳು.... ಇವರು ಶ್ರೀಮಂತರಾಗಿದ್ದರು.... ವೈದಿಕ ಪುರೋಹಿತರನ್ನು ಇವರು ತಿರಸ್ಕರಿದವರು... ಮುಂತಾದ ಅಂಶಗಳು 8 ನೇ ತರಗತಿ ಪಠ್ಯದಲ್ಲಿ ಸೇರಲು ಸಾಧ್ಯವಾಗಿದೆ. 5 ನೇ ತರಗತಿಯ ಪಠ್ಯದಲ್ಲಿ ಈ ಅಂಶಗಳ ಉಲ್ಲೇಖ ಎಲ್ಲಿಯೂ ಇಲ್ಲ.

ವರ್ತಮಾನದ ಮತಾಂಧ ರಾಜಕೀಯ ಅಗತ್ಯಗಳೂ. ಮತ್ತು ಇತಿಹಾಸ ನಿರೂಪಣೆ

ಆರ್ಯರು ಈಗಿನ ಭಾರತದ ಈ ಭಾಗಕ್ಕೆ ಹೊರಗಿನಿಂದ ಬಂದವರಲ್ಲ, ಅವರು ಆಕ್ರಮಣಕಾರರಲ್ಲ, ಭಾರತದ ಮೂಲ ನಿವಾಸಿಗಳು ಎಂದು ಸಾಧಿಸಿದರೆ ಮಾತ್ರ ಮುಸ್ಲೀಮರು ವಿದೇಶಿಯರು, ಅವರು ದಾಳಿಕೋರರು. ಮುಸ್ಲಿಮರನ್ನು ಸದೆಬಡಿಯ ಬೇಕು. ಕ್ರಿಶ್ಚಿಯನ್ ಧರ್ಮ ವಿದೇಶದ್ದು. ಅದನ್ನು ಒಪ್ಪಬಾರದು. ಸಹಿಸಬಾರದು ಎಂಬ ಸಂಘ ಪ್ರಿಯ ವಿಚಾರ, ತರ್ಕ ತಕರಾರುಗಳಿಗೆ ಒಂದು ಚಾರಿತ್ರಿಕ, ಸೈದ್ಧಾಂತಿಕ ನೆಲೆ ದೊರೆಯುತ್ತದೆ. ಕೋಮುದ್ವೇಷದ ಪ್ರಚಾರಕ್ಕೆ ಒಂದು ಹರಿತ ಬರುತ್ತದೆ. ಇಲ್ಲವಾದರೆ ಯುವಜನರ ತಲೆಗೆ ಕೋಮು ವಿದ್ವೇಷದ ಮತ್ತು ಏರುವಂತೆ ಮಾಡುವ ಬಗೆಯಾದರು ಯಾವುದು ? ಇದೇ ಉದ್ದೇಶಕ್ಕೆ ಬಳಕೆಯಾಗುತ್ತಿರುವ ಮತ್ತೊಂದು ಪ್ರಶ್ನೆ ಗೋ ಮಾಂಸದ ಪ್ರಶ್ನೆ.

ಭಾರತದ ಮೂಲದ್ದೇ ಎಂದು ಸಂಘ ಪರಿವಾರ ಸಾರುವ ಬೌದ್ಧ, ಜೈನ ಮತಗಳ ವಿಷಯದಲ್ಲಾದರೂ ಸಂಘ ಪರಿವಾರ ಪ್ರಾಮಾಣಿಕವಾಗಿಯೇ ಎಂದರೆ ಅದೂ ಇಲ್ಲ ಎಂದೇ ಹೇಳ ಬೇಕಾಗುತ್ತದೆ.

ಧರ್ಮದ ಹೆಣ

ಧರ್ಮಾಧಾರಿತ ರಾಜಕೀಯವೇ ಈಗ
ಬಲ್ಲಿರಾ ಬಿ.ಜೆ.ಪಿ. ಪಕ್ಷಕ್ಕೆ ಜಾಗ
ಧರ್ಮವನು ಕೊಂದದ್ದೂ ಇವರೇನೆ ಮತ್ತೆ
ಇದರ ಹೆಣ ಕೊಳೆಯುತ್ತಿದೆ ಸುಡಲಿಲ್ಲ ಗೊತ್ತೆ?.

– ವಿಡಂಬಾರಿ


ಸಿಪಿಐಎಂ ಮಹಾಧಿವೇಶನದತ್ತ.. ಯಶಸ್ವಿಯಾಗಿ ನಡೆದ ವಿವಿಧ ರಾಜ್ಯ ಸಮ್ಮೇಳನಗಳು

ಪಶ್ಚಿಮ ಬಂಗಾಳ

ಪಶ್ಚಿಮ ಬಂಗಾಳದ 23ನೇ ರಾಜ್ಯ ಸಮ್ಮೇಳನ ಕೊಲ್ಕತ್ತಾದಲ್ಲಿ ಯಶಸ್ವಿಯಾಗಿ ನಡೆಯಿತು. ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಕೆಂಪು ಧ್ವಜ ಅರಳಿಸುವುದರೊಂದಿಗೆ ಸಮ್ಮೇಳನಕ್ಕೆ ವಿಧ್ಯುಕ್ತ ಚಾಲನೆ ದೊರೆಯಿತು. ರಾಜ್ಯ ಕಾರ್ಯದರ್ಶಿ ಬಿಮನ್ ಬಸು, ಸೀತಾರಾಮ ಯೆಚೂರಿ, ಕೆ.ವರದರಾಜನ್, ಬುದ್ಧದೇವ ಭಟ್ಟಾಚಾರ್ಯ, ಬೃಂದಾ ಕಾರಟ್, ಮಹಮ್ಮದ್ ಅಮೀನ್, ನಿರುಪಮ್ ಸೇನ್ ಹುತಾತ್ಮರಿಗೆ ಗೌರವ ಸಲ್ಲಿಸಿದರು.

ಪಕ್ಷವನ್ನು ಮುನ್ನಡೆಸಿ ಕಳೆದ ಅವಧಿಯಲ್ಲಿ ನಮ್ಮನ್ನಗಲಿದ ಹಿರಿಯ ನಾಯಕರಾದ ಜ್ಯೋತಿಬಸು, ಹರಿಕಿಶನ್ ಸಿಂಗ್ ಸುರ್ಜೀತ್, ಎಂ.ಕೆ. ಪಂಧೆ, ಪಶ್ಚಿಮ ಬಂಗಾಳದ ಕಾರ್ಯದರ್ಶಿ ಮಂಡಳಿ ಸದಸ್ಯ ಸುಭಾಷ್ ಚಕ್ರವರ್ತಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ಪ್ರಸ್ತಾಪಿಸಿದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್, ಕಳೆದ ಅವಧಿಯಲ್ಲಿ ಎಡಪಕ್ಷಗಳ ಬಲಹೀನತೆಯಿಂದಾಗಿ ದೇಶದ ಸಂಸದೀಯ ವೇದಿಕೆಗಳಲ್ಲಿ ಎಡಶಕ್ತಿಗಳ ಮಧ್ಯಪ್ರವೇಶಕ್ಕೆ ಹಿನ್ನಡೆ ಉಂಟಾಗಿದೆ. ಈ ಪರಿಸ್ಥಿತಿಯನ್ನು ಎದುರಿಸಿ ಮುನ್ನಡೆಯಲು ಪಕ್ಷದ ಸ್ವತಂತ್ರ ಚಟುವಟಿಕೆಯನ್ನು ಬಲಪಡಿಸಬೇಕಾಗಿದೆ ಎಂದು ಕರೆ ನೀಡಿದರು. ನಲುವುಬದ್ಧ ಹಾಗೂ ಸ್ಥಳೀಯ ಸಮಸ್ಯೆಗಳ ಹೋರಾಟಕ್ಕೆ ಪಕ್ಷದ ಘಟಕಗಳು ಮುಂದಾಗಬೇಕು ಎಂದು ಅವರು ಕರೆ ನೀಡಿದರು. ಶೋಷಿತ ಜನವಿಭಾಗದ ಹಿತಕಾಪಾಡಲು ಸತತ ಹೋರಾಟ, ಕಾರ್ಮಿಕ, ರೈತಪರ ಚಳವಳಿಯನ್ನು ಕಟ್ಟಿಬೆಳೆಸುವ ಜೊತೆಗೆ ಕಾಂಗ್ರೆಸ್-ಬಿಜೆಪಿಯೇತರ ತೃತೀಯ ಶಕ್ತಿಗಳ ಕ್ರೋಢೀಕರಣಕ್ಕೆ ಶ್ರಮಿಸುವಂತೆ ಕರೆ ನೀಡಿದರು.



ಪಕ್ಷದಲ್ಲಿನ ಆಂತರಿಕ ದೌರ್ಬಲ್ಯ ಮೆಟ್ಟಿನಿಲ್ಲಲು ಶುದ್ಧೀಕರಣ ಚಳವಳಿ ಅತ್ಯಗತ್ಯ ಎಂದು ಪುನರುಚ್ಚರಿಸಿದ ಅವರು, ಎಲ್ಲ ರೀತಿಯ ಪರೀಕ್ಷೆಗಳನ್ನು ಎದುರಿಸಿ ಮತ್ತಷ್ಟು ಸದೃಢಗೊಳ್ಳಬೇಕೆಂದು ತಿಳಿಸಿದರು.

ಸಿಪ್ಟಿಸಿ

ಕಾರ್ಯದರ್ಶಿ ಬಿಮನ್ ಬಸು, ರಾಜಕೀಯ-ಸಂಘಟನಾತ್ಮಕ ವರದಿಯನ್ನು ಮಂಡಿಸಿದರು. ತೃಣಮೂಲ ಗೂಂಡಾಗಳ ದಾಳಿ-ದಮನದಿಂದ ಪಕ್ಷ ಅಸಂಖ್ಯಾತ ಕಾರ್ಯಕರ್ತರನ್ನು ಕಳೆದುಕೊಂಡಿದೆ ಎಂದು ಕಳೆದ ಅವಧಿಯಲ್ಲಿ ನಡೆದ ದಾಳಿಯ ವಿವರವನ್ನು ತೆರೆದಿಟ್ಟ ಅವರು, ಅಧಿಕಾರಕ್ಕೆ ಬಂದ ಮೇಲೆ ಮಮತಾ ಅವರ ನಿಜಬಣ್ಣ ಬಯಲಾಗಿದೆ ಎಂದು ಹೇಳಿದರು.


ಅಂತಿಮವಾಗಿ 83 ಸದಸ್ಯ ಬಲದ ನೂತನ ರಾಜ್ಯ ಸಮಿತಿಯನ್ನು ಸಮ್ಮೇಳನ ಆಯ್ಕೆ ಮಾಡಿತು. ಬಿಮನ್ ಬಸು ಮತ್ತೊಮ್ಮೆ ರಾಜ್ಯ ಕಾರ್ಯದರ್ಶಿಯಾಗಿ ಚುನಾಯಿತರಾದರು. ರಾಜ್ಯ ಸಮಿತಿಯಲ್ಲಿ 12 ಹೊಸ ಮುಖಗಳಿಗೆ ಅವಕಾಶ ನೀಡಲಾಗಿದ್ದು, ಮಾಜಿ ಸ್ಪೀಕರ್ ಹಷೀಮ್ ಅಬ್ದುಲ್ ಹಲೀಂ, ನಕುಲ್ ಮೆಹ್ತಾ ಸಹಿತ 6 ಮಂದಿ ಹಿರಿಯ ನಾಯಕರನ್ನು ರಾಜ್ಯ ಸಮಿತಿಯ ಖಾಯಂ ಆಹ್ವಾನಿತರನ್ನಾಗಿ ಸಮ್ಮೇಳನ ಆಯ್ಕೆ ಮಾಡಿದೆ. ನೂತನ ನಾಯಕತ್ವ ಜನಪರ ಹೋರಾಟಗಳ ಮೂಲಕ ರಾಜ್ಯದಲ್ಲಿ ಮತ್ತೆ ಪಕ್ಷವನ್ನು ಸದೃಢಗೊಳಿಸುವ ವಿಶ್ವಾಸವನ್ನು ವ್ಯಕ್ತಪಡಿಸಿತು.

ಕೇರಳ

ಫೆಬ್ರವರಿ 6ರಿಂದ 10ರ ವರೆಗೆ ತಿರುವನಂತಪುರದಲ್ಲಿ ಪಕ್ಷದ ಕೇರಳದ 20ನೇ ರಾಜ್ಯ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. 20 ಸಾವಿರ ಕೆಂಪು ಸೈನಿಕರ ಶಿಸ್ತುಬದ್ಧ ಪಥ ಸಂಚಲನದೊಂದಿಗೆ ಬೃಹತ್ ರ್ಯಾಲಿ ಆರಂಭಗೊಂಡಿತು. ತಿರುವನಂತಪುರದ ಚಂದ್ರಶೇಖರನ್ ನಾಯರ್ ಸ್ಟೇಡಿಯಂನಲ್ಲಿ ಕೆಂಪು ಸಮುದ್ರವೇ ಮೇಳೈಸಿತು.

ಕೇಂದ್ರ ಸಮಿತಿ ಸದಸ್ಯ ಇ.ಪಿ ಜಯರಾಜನ್ ನೇತೃತ್ವದ ಜಾಥಾ ಕಾಸರಗೋಡಿನ ಕಯ್ಯೂರಿನಿಂದ ಹುತಾತ್ಮ ಜ್ಯೋತಿಯನ್ನು ತಂದರು. ಇನ್ನೊಬ್ಬ ಕೇಂದ್ರ ಸಮಿತಿ ಸದಸ್ಯ ಎಂ.ಎ.ಬೇಬಿ ನೇತೃತ್ವದ ಎರಡನೇ ಜಾಥಾ ಪುನ್ನಪ್ರ ವಯಲಾರ್‌ನಿಂದ ಹುತಾತ್ಮ ಜ್ಯೋತಿಯನ್ನು ತಂದರು.

ಸಮ್ಮೇಳನದ ಪಂಜನ್ನು ರಾಜ್ಯ ಸಮಿತಿ ಸದಸ್ಯ ಆನವೂರ್ ನಾಗಪ್ಪನ್ ನೇತೃತ್ವದ ಜಾಥಾ ರಾಜಧಾನಿಗೆ ತಂದಿತು. ಇ.ಬಾಲಾನಂದನ್ ನಗರದಲ್ಲಿ ಸ್ವಾಗತ ಸಮಿತಿಯ ಸಂಚಾಲಕ ಎಂ. ವಿಜಯ್ ಕುಮಾರ್ ಕೆಂಪು ಧ್ವಜವನ್ನು ಅರಳಿಸಿದರು.



ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಸಮ್ಮೇಳವನ್ನು ಉದ್ಘಾಟಿಸಿದರೆ ಪಿಣರಾಯಿ ವಿಜಯನ್ ಜ್ಯೋತಿ ಬೆಳಗಿಸಿದರು. ಕೇಂದ್ರ ಸಮಿತಿ ಸದಸ್ಯ ಹಾಗೂ ಪ್ರತಿಪಕ್ಷ ನಾಯಕ ವಿ.ಎಸ್.ಅಚ್ಯುತಾನಂದನ್ ಕೆಂಪು ಧ್ವಜವನ್ನು ಅರಳಿಸಿದರು.

ಪ್ರಕಾಶ್ ಕಾರಟ್, ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್, ಪಾಲಿಟ್‌ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರನ್ ಪಿಳ್ಳೈ, ಕೆ.ವರದರಾಜನ್, ಕೊಡಿಯೇರಿ ಬಾಲಕೃಷ್ಣನ್ ಮತ್ತು ಕೇಂದ್ರ ಸಮಿತಿ ಸದಸ್ಯ ವಿ.ಎಸ್.ಅಚ್ಯುತಾನಂದನ್ ಹುತಾತ್ಮ ಚೌಕಕ್ಕೆ ಗೌರವ ವಂದನೆ ಸಲ್ಲಿಸಿದರು.

ಪಕ್ಷದ 3.70 ಲಕ್ಷ ಸದಸ್ಯರನ್ನು ಪ್ರತಿನಿಧಿಸಿದ 556 ಮಂದಿ ರಾಜ್ಯ ಸಮ್ಮೇಳನದಲ್ಲಿ ಪಾಲ್ಗೊಂಡರು.

ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ನಡೆದ ಇತಿಹಾಸ ಚಿತ್ರ ಪ್ರದರ್ಶನದಲ್ಲಿ ಏಸು ಕ್ರಿಸ್ತ ಕಲಾಕೃತಿಯಿಂದ ಉಂಟಾದ ವಿವಾದವನ್ನು ಪ್ರಸ್ತಾಪಿಸಿದ ಪ್ರಕಾಶ್ ಕಾರಟ್, ಇದರ ಹಿಂದೆ ದೊಡ್ಡ ಪಿತೂರಿ ಇದೆ ಎಂದು ಎಚ್ಚರಿಸಿದರು. ಪಕ್ಷ ಯಾವುದೇ ಧರ್ಮ ಮತ್ತು ನಂಬಿಕೆಯನ್ನು ಒಪ್ಪುವುದಿಲ್ಲ. ಈ ನಿಲುವೇ ಪ್ರಾಥಮಿಕವಾಗಿ ಕೋಮುವಾದ ಮತ್ತು ಧಾರ್ಮಿಕ ಮೂಲಭೂತವಾದವನ್ನು ಎದುರಿಸುತ್ತದೆ ಎಂದು ಹೇಳಿದರು.

ದೇಶದಲ್ಲಿ ಜಾತ್ಯತೀತವಾದದ ಪರ ನಿರಂತರ ಹಾಗೂ ಸ್ಥಿರ ಹೋರಾಟ ಮಾಡಿದ ಪಕ್ಷ ಸಿಪಿಐಎಂ ಬಿಟ್ಟರೆ ಬೇರೊಂದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಸಮ್ಮೇಳನದಲ್ಲಿ ಅಂತಿಮವಾಗಿ 84 ಸದಸ್ಯರ ನೂತನ ರಾಜ್ಯ ಸಮಿತಿಯನ್ನು ಆರಿಸಲಾಯಿತು. ಒಂದು ಸ್ಥಾನವನ್ನು ಖಾಲಿ ಬಿಟ್ಟು 12 ಸದಸ್ಯರ ಕಾರ್ಯದರ್ಶಿ ಮಂಡಳಿಯನ್ನು ಆರಿಸಿತು. ನೂತನ ರಾಜ್ಯ ಕಾರ್ಯದರ್ಶಿಯಾಗಿ ಪಿಣರಾಯಿ ವಿಜಯನ್ ಚುನಾಯಿತರಾದರು. ಪಿಣರಾಯಿ ಹೆಸರನ್ನು ವಿ.ಎಸ್.ಅಚ್ಯುತಾನಂದನ್ ಸೂಚಿಸಿದರೆ ಟಿ.ಶಿವದಾಸ ಮೆನನ್ ಈ ಸೂಚನೆಯನ್ನು ಅನುಮೋದಿಸಿದರು.

ತ್ರಿಪುರಾ

ಸಿಪಿಐಎಂನ 20ನೇ ರಾಜ್ಯ ಸಮ್ಮೇಳನ ಬೈದ್ಯನಾಥ್ ಮಜುಂದಾರ್ ನಗರದಲ್ಲಿ (ಅಗರ್ತಲಾ) ಯಶಸ್ವಿಯಾಗಿ ನಡೆಯಿತು. ಪಕ್ಷವನ್ನು ಏಳನೇ ಬಾರಿಗೆ ಮತ್ತೆ ಅಧಿಕಾರಕ್ಕೆ ಏರಿಸುವ ಸಂಕಲ್ಪವನ್ನು ಸಮ್ಮೇಳನದಲ್ಲಿ ಮಾಡಲಾಯಿತು.

ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಕೆಂಪು ಧ್ವಜವನ್ನು ಅರಳಿಸಿದರು. ಹಿರಿಯ ನಾಯಕ ಚಿತ್ತಚಂದಾ, ಪಾಲಿಟ್ ಬ್ಯೂರೋ ಸದಸ್ಯ ಮಾಣಿಕ್ ಸರ್ಕಾರ್, ರಾಜ್ಯ ಕಾರ್ಯದರ್ಶಿ ಬಿಜನ್ ಧರ್ ಮೊದಲಾದವರು ಹುತಾತ್ಮ ಸ್ತಂಭಕ್ಕೆ ವಂದನೆ ಸಲ್ಲಿಸಿದರು. ಅನಿಲ್ ಸರ್ಕಾರ್, ಬಜುಬನ್ ರಿಯಾಂಗ್, ಖಗೇನ್ ದಾಸ್, ರಾಮದಾಸ್ ಮತ್ತು ಫೈಜುರ್ ರೆಹಮಾನ್ ಅವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ಸಮ್ಮೇಳನವನ್ನು ನಡೆಸಿಕೊಟ್ಟಿತು. ಪ್ರಕಾಶ್ ಕಾರಟ್ ಜೊತೆಗೆ, ಸೀತಾರಾಮ ಯೆಚೂರಿ, ಬೃಂದಾ ಕಾರಟ್, ಕೇಂದ್ರ ಸಮಿತಿ ಸದಸ್ಯ ನುರೂಲ್ ಹುದಾ ಕೇಂದ್ರದ ಭಾಗವಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಮುಂಬರುವ ಮಹಾಧಿವೇಶನದ ಮಹತ್ವನ್ನು ಹೇಳಿದ ಪ್ರಕಾಶ್ ಕಾರಟ್, ದೇಶದ ರಾಜಕೀಯ ರಂಗದಲ್ಲಿ ಎಡ ಪರ್ಯಾಯ ಏಕೈಕ ಅಗತ್ಯವಾಗಿದೆ ಎಂದು ಹೇಳಿದರು.

ತ್ರಿಪುರಾದ ಎಡರಂಗ ಸರ್ಕಾರದ ಸಾಧನೆ ಅನನ್ಯ. ಈ ಬಗ್ಗೆ ಇಡೀ ಪಕ್ಷಕ್ಕೆ ಹೆಮ್ಮೆ ಇದೆ ಎಂದು ಹೇಳಿದ ಅವರು, ಪಶ್ಚಿಮಬಂಗಾಳ ಮತ್ತು ಕೇರಳದ ಹಿನ್ನಡೆಯ ಪರಿಣಾಮ ಇಲ್ಲಿನ ವಿಧಾನಸಭಾ ಚುನಾವಣೆಗೆ ತಟ್ಟದು. ಆದರೂ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ಎಡ ಸರ್ಕಾರದ ಸಾಧನೆಯನ್ನು ಜನತೆಗೆ ಮುಟ್ಟಿಸಬೇಕೆಂದು ಹೇಳಿದರು.

ಕಾರ್ಯದರ್ಶಿ ಬಿಜನ್ ಧರ್ ರಾಜಕೀಯ-ಸಂಘಟನಾತ್ಮಕ ವರದಿಯನ್ನು ಮಂಡಿಸಿದರು. ರಾಜ್ಯದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ ಪ್ರತಿಪಕ್ಷದ ಪಾತ್ರವನ್ನೂ ತಿಳಿಸಿ ಹೇಳಿದರು. ಗುಡ್ಡಗಾಡು ಜನರನ್ನು ಹೊಂದಿರುವ ಈ ರಾಜ್ಯ ಎದುರಿಸುವ ಸಮಸ್ಯೆಗಳನ್ನು ಮಾರ್ಕ್ಸ್‌ವಾದಿ ತತ್ವದಿಂದ ಎದುರಿಸಬೇಕು ಎಂದು ತಿಳಿಸಿದರು. ಕೈಗಾರಿಕೆಗಳಿಗೆ ರಾಜ್ಯದಲ್ಲಿ ಅನುಕೂಲ ವಾತಾವರಣ ಇದ್ದರೂ ಬಂಡವಾಳಿಗರ ವರ್ಗ ಲಾಭಿಗೆ ಮುಂದಾಗಿದೆ. ಕಳೆದ ಅವಧಿಯಲ್ಲಿ ಸಾಕಷ್ಟು ಸಣ್ಣ ಉದ್ದಿಮೆಗಳು ಆರಂಭವಾಗಿವೆ. ಈ ಸಂದರ್ಭದಲ್ಲಿ ಮಧ್ಯಮ ವರ್ಗ ದಾರಿತಪ್ಪದಂತೆ ನೋಡಿಕೊಳ್ಳುವ ಅಗತ್ಯವನ್ನು ವರದಿಯಲ್ಲಿ ಒತ್ತಿ ಹೇಳಲಾಯಿತು. 36.7 ಲಕ್ಷ ಜನರನ್ನು ಹೊಂದಿರುವ ತ್ರಿಪುರಾದಲ್ಲಿ 77 ಸಾವಿರ ಪಕ್ಷ ಸದಸ್ಯರಿದ್ದಾರೆ. ಪ್ರತಿ 29 ಜನರಲ್ಲಿ ಒಬ್ಬ ಪಕ್ಷ ಸದಸ್ಯರಾಗಿದ್ದಾರೆ. ಇದು ಸಕಾರಾತ್ಮಕ ಅಂಶವಾಗಿದ್ದು ಪಕ್ಷದ ಮಹತ್ವದ

ಪುಟ 15ಕ್ಕೆ....

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (R.B.I) ಆದೇಶವೊಂದನ್ನು ಹೊರಡಿಸಿ, ಸಿ.ಆರ್.ಎ.ಆರ್. ಕನಿಷ್ಠ ಶೇ 4ಕ್ಕಿಂತ ಕಡಿಮೆ ಇರುವ 'ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್' ತನ್ನ ಸ್ಥಿತಿಯನ್ನು ಮಾರ್ಚ್ 31, 2010ರೊಳಗೆ ಉತ್ತಮ ಪಡಿಸಿಕೊಳ್ಳದಿದ್ದರೆ ಬ್ಯಾಂಕಿಂಗ್ ಲೈಸೆನ್ಸ್‌ನ್ನು ರದ್ದು ಪಡಿಸಿ, ಬ್ಯಾಂಕನ್ನು ಮುಚ್ಚುವುದಾಗಿ ಹೇಳಿದೆ. ಈಗ ಸದ್ಯ 'ಬ್ಯಾಂಕ್'ನ ಸಿ.ಆರ್.ಎ.ಆರ್. ಅನುಪಾತವೂ 0.5 ರಷ್ಟು ಮಾತ್ರವಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಸಣ್ಣ ರೈತರು, ಕೃಷಿ ಕೂಲಿ ಕಾರ್ಮಿಕರು ಈ ಬ್ಯಾಂಕ್ ಆರ್ಥಿಕ ವ್ಯವಹಾರವನ್ನು ನಡೆಸುತ್ತಿದ್ದಾರೆ. ಬ್ಯಾಂಕ್ ಮುಚ್ಚಲ್ಪಟ್ಟರೆ ಈ ವಿಭಾಗದ ಜನತೆಗೆ ತೀವ್ರ ತೊಂದರೆಯಾಗುವುದರ ಜೊತೆಗೆ ಸರ್ಕಾರಗಳ ಕಡಿಮೆ ಬಡ್ಡಿಗೆ ಸಾಲದ ಯೋಜನೆಗಳಿಂದ ವಂಚಿತರಾಗಲಿದ್ದಾರೆ.

ಹಲವು ದಶಕಗಳಿಂದ ರೈತರಿಗೆ ಕೃಷಿ ಸಾಲ ನೀಡುವಲ್ಲಿ ಮುಂಚೂಣಿಯ ಪಾತ್ರ ವಹಿಸಿದ್ದ 'ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್' ಕಲಾ ಕ್ರಮೇಣ 'ಸ್ವಾರ್ಥಪರರು', 'ಪಟ್ಟಭದ್ರ ಹಿತಾಶಸಕ್ತಿಗಳು' ಹಸುವಿನ ಹಾಲು ಕರೆದು ಕುಡಿಯುವುದಕ್ಕಿಂತ ಕೆಚ್ಚಲನ್ನೆ ಕುಯ್ಯುವ' ರೀತಿಯ ಕೆಲವು ಮಹಾ ಭ್ರಷ್ಟ ಚುನಾಯಿತ ಆಡಳಿತ ಮಂಡಳಿಯವರು ಹಾಗು ಅಧಿಕಾರಿಶಾಹಿಗಳು ಕೂಡಿ, ರೈತರಿಗೆ ಸದಾ ನೆರವು ನೀಡುತ್ತಿದ್ದ 'ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್'ನ್ನು ದಿವಾಳಿ ಮಾಡಿದ್ದಾರೆ. ಹೀಗಾಗಿ ಕಳೆದ ಹತ್ತು ವರ್ಷಗಳಿಂದ ಬ್ಯಾಂಕ್ ಸಾವು, ಬದುಕಿನ ಸ್ಥಿತಿಯನ್ನು ಎದುರಿಸುತ್ತಿದೆ.

ವಿಶ್ವಾಸದಿಂದ ಠೇವಣಿಯನ್ನು ಇಟ್ಟ ಹತ್ತಾರು ಸಾವಿರ ಗ್ರಾಹಕರಿಗೆ ಮಹಾ ಮೋಸ ಮಾಡಿದಲ್ಲದೆ, ಈ ಕಾಲಾವಧಿಯಲ್ಲಿ ಕೃಷಿ ಬಿಕ್ಕಟ್ಟಿನಿಂದ ರೈತರನ್ನು ಹಾಗು ಕೃಷಿ ಕೂಲಿಕಾರರನ್ನು ರಕ್ಷಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಘೋಷಣೆ ಮಾಡಿದ 'ಸಾಲ ಮನ್ನಾ' 'ಬಡ್ಡಿ -ಮನ್ನಾ'. ಮುಖ್ಯವಾಗಿ ವ್ಯಾಪಕವಾದ ಕೃಷಿ ಸಾಲ ನೀಡಿಕೆ "ವಿಶೇಷವಾಗಿ ಶೇ.1ರ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಿಕೆಯಂತಹ ಅನೇಕ ಸೌಲಭ್ಯಗಳಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಮುಗ್ಧ ರೈತರು ಮತ್ತು ಕೃಷಿ ಕೂಲಿಕಾರರನ್ನು ವಂಚನೆ ಮಾಡಲಾಗಿದೆ. ಬ್ಯಾಂಕ್‌ನ ಈ ಸ್ಥಿತಿಗೆ ಕಾರಣವಾದ ಚುನಾಯಿತ ಅಧ್ಯಕ್ಷರು, ನಿರ್ದೇಶಕರು ಹಾಗು ಅಧಿಕಾರಿಗಳು, ಸಾರ್ವಜನಿಕರ ಹಣವನ್ನು ನುಂಗಿ, ಅಗಾಧವಾದ



ಆರ್ಥಿಕವಾಗಿ ದಿವಾಳಿ ಎದ್ದಿರುವ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರಿ (ಡಿಸಿಸಿ) ಬ್ಯಾಂಕ್ ಉಳಿಸಲು ಸರ್ಕಾರ ಮುಂದಾಗದಿದ್ದಲ್ಲಿ ಪ್ರಬಲ ಹೋರಾಟವನ್ನು ರೂಪಿಸಲು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ರೈತರು, ಸಹಕಾರಿಗಳು ಹಾಗೂ ಜನಪ್ರತಿನಿಧಿಗಳ ಸಮಾವೇಶದಲ್ಲಿ ನಿರ್ಧರಿಸಲಾಯಿತು.

'ಕೋಲಾರ ಡಿಸಿಸಿ ಬ್ಯಾಂಕ್ ಉಳಿಸಿ' ಜಿಲ್ಲಾ ಸಮಾವೇಶದಲ್ಲಿ ಒತ್ತಾಯ

ವರದಿ : ವಿಜಯಕೃಷ್ಣ

ಅಸ್ತಿಗಳನ್ನು ಮಾಡಿಕೊಂಡು ಸಮಾಜದಲ್ಲಿ ಇವತ್ತು ಮೆರೆಯುತ್ತಿದ್ದಾರೆ. ಘೋರ ತಪ್ಪು ಮಾಡಿದ ಇವರಿಗೆ ಶಿಕ್ಷೆಯನ್ನು ನೀಡಲು ಅಸಮರ್ಥವಾಗಿರುವ ಸರ್ಕಾರಗಳು, ರಾಜಕೀಯ ವ್ಯವಸ್ಥೆ, 'ಎತ್ತಿಗೆ ಜ್ವರ ಬಂದರೆ, ಎಮ್ಮೆಗೆ ಬರೆ', ಎನ್ನುವಂತೆ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ರೈತರು ಮತ್ತು ಬಡವರನ್ನು ಹತ್ತು ವರ್ಷಗಳಿಂದ ಶಿಕ್ಷೆಗೆ ಗುರಿ ಮಾಡಲಾಗಿದೆ. ಉದಾ : 2010-11ರ ಸಾಲಿನ ಶೇ 1ರ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲವಾಗಿ ರಾಜ್ಯದಲ್ಲಿ ಒಟ್ಟು 4297-33 ಕೋಟಿ ಗಳನ್ನು ಸಹಕಾರಿ ಕೇತ್ರದಲ್ಲಿ ರೈತರಿಗೆ ನೀಡಿದ್ದು, ಅದರಲ್ಲಿ ಬೆಳಗಾಂ-544.05 ಕೋಟಿ, ಬಾಗಲಕೋಟೆ-448.95 ಕೋಟಿ, ದಕ್ಷಿಣ ಕನ್ನಡ -488.12 ಕೋಟಿ ಹಾಗು ಬಿಜಾಪುರ-433 ಕೋಟಿ ರೂಗಳನ್ನು ಅಲ್ಲಿಯ 'ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್'ಗಳಿಂದ ರೈತರು ಸಾಲ ಪಡೆದಿದ್ದರೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಒಟ್ಟು ರೈತರು ಪಡೆದಿರುವ ಒಟ್ಟು ಸಾಲದ ಮೊತ್ತ ಕೇವಲ 26.98 ಕೋಟಿ ರೂಗಳು ಮಾತ್ರ.

ಶೇ.1ರ ಬಡ್ಡಿ ದರ ಎಂದರೆ ವರ್ಷಕ್ಕೆ 1ಲಕ್ಷವನ್ನು ಸಾಲವಾಗಿ ಪಡೆದು ಆ ವರ್ಷದೊಳಗೆ ಸಾಲ ಮರುಪಾವತಿ ಮಾಡಿದರೆ 'ರೈತ' ಕಟ್ಟಬೇಕಿರುವ ಬಡ್ಡಿ ಕೇವಲ 1000-00ರೂ. ಮಾತ್ರ. ಆದರೆ ಇತ್ತೀಚಿಗೆ ಕೇಂದ್ರ ಸರ್ಕಾರ ಮತ್ತೊಂದು ಘೋಷಣೆ ಮಾಡಿದೆ. 'ರೈತ' ವರ್ಷದೊಳಗೆ 1ಲಕ್ಷ ರೂ ಸಾಲ ಮರುಪಾವತಿ ಮಾಡಿದರೆ, 3000-00 ಸಾಹಾಯ ಧನ"ವನ್ನು ನೀಡುತ್ತಿದೆ. ಅಂದರೆ 1 ಲಕ್ಷ ರೂ ಸಾಲ, ನಿಗದಿ ಅವಧಿಗೆ ಮರು ಪಾವತಿ ಮಾಡಿದರೆ, ಬಡ್ಡಿಯನ್ನೆ ಕಟ್ಟಬೇಕಿಲ್ಲ, ಬದಲಿಗೆ ಸರ್ಕಾರವೇ 2000-00ರೂ ಹೆಚ್ಚುವರಿಯಾಗಿ ಸಹಾಯ ಧನ ನೀಡುತ್ತದೆ.

ಈ ನಡುವೆ 'ಕೇಂದ್ರದ ಸಾಲ ಮನ್ನಾ' ಯೋಜನೆಯಿಂದ "ಬ್ಯಾಂಕ್" ಕ್ರಮೇಣಾ ನಿಧಾನವಾಗಿ ಚೇತರಿಸಿಕೊಂಡು ತನ್ನ 'ವಹಿವಾಟನ್ನು' ಶುರುಮಾಡಿದೆ.. ಆದರೆ ಜಿಲ್ಲೆಯಲ್ಲಿರುವ ಒಟ್ಟು 195 'ಪ್ರಾಥಮಿಕ ಸಹಕಾರಿ ಸಂಘ'ಗಳ ಪೈಕಿ ಕೇವಲ 97 'ಪ್ರಾಥಮಿಕ ಸಹಕಾರಿ ಸಂಘ'ಗಳು ಮಾತ್ರ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಬಾರಿ ಸೀಮಿತವಾಗಿ ಈ 'ಸಂಘ'ಗಳ ಮೂಲಕವೇ ಸಾಲ ನೀಡಿಕೆ ನಡೆಯುತ್ತಿದೆ. ಈ ವರ್ಷ ರಾಜ್ಯ ಸರ್ಕಾರ, ಅವ್ಯವಸ್ಥೆಯಿಂದ ಕೂಡಿರುವ 98 'ಸಂಘ'ಗಳನ್ನು ರದ್ದು ಮಾಡಿ, ಸಕ್ರಮವಾಗಿ ನಡೆಯುವ 'ಸಂಘ'ಗಳ ಮೂಲಕ ಮಾತ್ರವೇ ಸಾಲ ನೀಡಬೇಕೆಂದು ಆದೇಶಸಿದೆ. 98 'ಸಂಘ'ಗಳ ಬದಲಿಗೆ ಹೊಸ ಸಂಘಗಳನ್ನು [illegible] ಸ್ಥಿತಿ ಉಂಟಾಗಿದೆ.


ಹೀಗಾಗಿ 'ಬ್ಯಾಂಕನ್ನು' ಉಳಿಸಬೇಕಾದರೆ. ಕೇಂದ್ರ ಸರ್ಕಾರ ನೀಡಬೇಕಿರುವ 339 ಕೋಟಿ ರೂಗಳ ಬಿಡುಗಡೆ ಹಾಗು ತಕ್ಷಣವೇ ರಾಜ್ಯ ಸರ್ಕಾರ ನೀಡಬೇಕಿರುವ ಷೇರು ಬಂಡವಾಳ ರೂ 90.72 ಲಕ್ಷ ರೂ. 'ಬಡ್ಡಿ ಮನ್ನಾ' ಯೋಜನೆಯ ಭಾಗವಾಗಿ ರಾಜ್ಯ ಸರ್ಕಾರ ಬ್ಯಾಂಕಿಗೆ ಬಾಕಿ ಇರುವ 310.00 ಲಕ್ಷ ರೂ ಗಳ ಬಿಡುಗಡೆ ಹಾಗು ಎರಡು ಜಿಲ್ಲೆಗಳ ರೈತರು. ಕೃಷಿ ಕೂಲಿಕಾರರು ಹಾಗು ಗ್ರಾಹಕರನ್ನು ರಕ್ಷಿಸಲು ತಕ್ಷಣ ಕನಿಷ್ಠ 5 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾದರೆ ಮಾತ್ರ 'ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ'ನ್ನು ಉಳಿಸಬಹುದು ಹಾಗು ರೈತರಿಗೆ ಸಾಲ ನೀಡಿಕೆಯನ್ನು ಮುಂದುವರಿಸಲು ಸಾಧ್ಯವಾಗುತ್ತದೆ. ಈ ಹಿಂದೆ 'ಧಾರವಾಡ ಜಿಲ್ಲಾ ಬ್ಯಾಂಕ್'ನ್ನು ಉಳಿಸಲು 20 ಕೋಟಿ ರೂಗಳು ಅನುದಾನವನ್ನು ಈ ಹಿಂದೆ ನೀಡಿ ಬ್ಯಾಂಕ್‌ಅನ್ನು ಪುನಃಶ್ಚೇತನ ಮಾಡಲಾಗಿತ್ತು.

ಇದರ ಜೊತೆಗೆ, ಎರಡು ಜಿಲ್ಲೆಗಳಲ್ಲಿ ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲಾ 195 ಪ್ರಾಥಮಿಕ ಸಹಕಾರಿ ಸಂಘಗಳನ್ನು ಪುನಃಶ್ಚೇತನಗೊಳಿಸಿ, ರೈತರಿಗೆ ವ್ಯಾಪಕವಾಗಿ ಈ ವರ್ಷದಿಂದಲೇ ಕೃಷಿ ಸಾಲ ನೀಡಿಕೆಗೆ ರಾಜ್ಯ ಸರ್ಕಾರ ಮುಂದಾಗಬೇಕೆಂದು ಸರ್ಕಾರದ ಮೇಲೆ ಒತ್ತಡ ತರುವ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ಸಮಾವೇಶಕ್ಕೆ ಎಲ್ಲಾ ರಾಜಕೀಯ ಪಕ್ಷಗಳು, ಚುನಾಯಿತ ಪ್ರತಿನಿಧಿಗಳು, ಸಹಕಾರಿಗಳನ್ನು ಆಹ್ವಾನಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ವರ್ತೂರು ಪ್ರಕಾಶ್ ಮಾತನಾಡಿ ಸಹಕಾರಿ ಸಂಸ್ಥೆಗಳ ದಿವಾಳಿತನಕ್ಕೆ ಈ ಹಿಂದೆ ಸಹಕಾರಿ ಸಂಸ್ಥೆಗಳಲ್ಲಿ ಆಡಳಿತ ಚುಕ್ಕಾಣಿ ಹಿಡಿದವರೇ ನೇರ ಹೊಣೆ, ರೈತರಿಗೆ ಸಲ್ಲಬೇಕಾದ ಸವಲತ್ತುಗಳನ್ನು ದುರುಪಯೋಗಪಡಿಸಿಕೊಂಡು ಸಹಕಾರಿ ಸಂಸ್ಥೆಯನ್ನು ಹಾಳು ಮಾಡಿದ್ದಾರೆ ಎಂದರಲ್ಲದೇ ಬ್ಯಾಂಕ್‌ಅನ್ನು ಉಳಿಸಲು ಎಲ್ಲ ರೀತಿಯ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಚಿಕ್ಕಬಳ್ಳಾಪುರ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಮಳ್ಳೂರು ಶಿವಣ್ಣ, ಕೋಲಾರ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಉರುಗಲಿ ರುದ್ರಸ್ವಾಮಿ, [illegible] ಅಧ್ಯಕ್ಷರಾದ ಹೊಳಲಿ ಪ್ರಕಾಶ್, ಸಿಪಿಐ(ಎಂ) ಕೋಲಾರ ಜಿಲ್ಲಾ ಕಾರ್ಯದರ್ಶಿ ಗಾಂಧಿ ನಾರಾಯಣಸ್ವಾಮಿ, ಕೆಪಿಆರ್‌ಎಸ್‌ನ ಜಿಲ್ಲಾ ಅಧ್ಯಕ್ಷರಾದ ಪಿ.ಆರ್.ಸೂರ್ಯನಾರಾಯಣ ಮತ್ತಿತರರು ಮಾತನಾಡಿ ಬ್ಯಾಂಕ್ ಉಳಿಸಲು ನಿರಂತರವಾಗಿ ಹೋರಾಟ [illegible]

[illegible]



ಎನ್.ಕೆ.ಉಪಾಧ್ಯಾಯ ಭವನ ಉದ್ಘಾಟನೆ

ಎನ್.ಕೆ.ಯವರು ಪಂಚಾಯತ್ ನೌಕರರ ಸಂಘವನ್ನು ಹುಟ್ಟುಹಾಕಿದವರಾಗಿದ್ದು, ಕನಿಷ್ಠ ಕೂಲಿ ನಿಗದಿ ಕಾರ್ಮಿಕರಿಗೆ ಸಿಗಬೇಕೆಂದು ಹೋರಾಟ ಮಾಡಿದವರಾಗಿದ್ದರು. ಅವರ ಹೆಸರಿನ ಈ ಭವನದ ಉದ್ಘಾಟನೆ ಸಂತಸ ತಂದಿದೆ ಕನಿಷ್ಠ ಕೂಲಿ ನಿಗದಿ ಮಾಡಬೇಕೆನ್ನುವ ಕೂಗಿನ ಹೋರಾಟದ ಎರಡನೇ ಹಂತ. ಇದಾಗಿದ್ದು ನೋಟಿಫಿಕೇಷನ್ ಆಗಿದೆ ಆದರೆ ಕೂಲಿ ಕೊಡ್ತಾ ಇಲ್ಲ. ಅನುದಾನಗಳನ್ನು ಪಂಚಾಯತಗಳಿಗೆ ಸರ್ಕಾರ ಕೊಟ್ಟರೆ ಮಾತ್ರ ಪಂಚಾಯತ ನೌಕರರಿಗೆ ಸಂಬಳ ಕೊಡಬಹುದು. ಉದಾರೀಕರಣದ ನಂತರ ಪಂಚಾಯತದ ನಿರ್ವಹಣೆ ಸರ್ಕಾರದ ಕರ್ತವ್ಯ ಅಲ್ಲ ಎನ್ನುವಂತಾಗಿದೆ. ಪಂಚಾಯತ ಎಲ್ಲರನ್ನೂ ಒಟ್ಟೂಗೂಡಿಸುವಂತದ್ದು ಆದರೆ ಇವರನ್ನೇ ಒಡೆಯುತ್ತಿದ್ದಾರೆ. 10,000 ಕನಿಷ್ಠ ಕೂಲಿ, ಬೆಲೆ ಏರಿಕೆ ತಡೆ, ಗುತ್ತಿಗೆ ಆಧಾರದ ತಡೆ ಇತ್ಯಾದಿ



ಬೇಡಿಕೆಗಳನ್ನಟ್ಟು ಕೊಂಡು 24-02ರಂದು ಅಖಿಲ ಭಾರತ ಮುಷ್ಕರ ನಡೆಯಲಿದ್ದು 91ರಿಂದ ಇದು 14ನೇ ಮುಷ್ಕರವಾಗಿದೆ. ಎಲ್ಲರೂದೊಡ್ಡ ರೀತಿಯಲ್ಲಿ ಬೆಂಬಲ ವ್ಯಕ್ತ ಪಡಿಸಬೇಕು. ಕರ್ನಾಟಕದಲ್ಲಿ ಬದಲಾವಣೆ ಮತ್ತು ಕಾರ್ಮಿಕ ಚಳುವಳಿಯನ್ನು ಮೆಲ್ಮಟ್ಟಕ್ಕೆ ತರಲಿಕ್ಕೆ ಇದು ಕಾರಣವಾಗಲಿ ಎಂದು ಎನ್.ಕೆ.ಭವನವನ್ನು ಉದ್ಘಾಟಿಸಿದ ವಿಜೆಕೆ ನಾಯರ್ ಹೇಳಿದರು.

1971ರಲ್ಲಿ ಎನ್.ಕೆ.ಯವರ ಸಂಪರ್ಕಕ್ಕೆ ಬಂದುದಾಗಿ ಮಾತು ಆರಂಭಿಸಿದ ಜಿ.ವಿ.ಶ್ರೀರಾಮರೆಡ್ಡಿ ಈ ದೇಶದ 'ನಿಜವಾದ' ಸ್ವಾತಂತ್ರ್ಯ ಹೋರಾಟಗಾರರ ಮಹಾನ್ ಸೇನಾನಿ ಎನ್.ಕೆ.ಯವರಾಗಿದ್ದು ಜನತೆ ನಡೆಸಿದ ಹೋರಾಟದ ಅವಿಭಾಜ್ಯ ಅಂಗವಾಗಿದರು. ಗೋವಾ ವಿಮೋಚನಾ ಹೋರಾಟದಲ್ಲಿ ತಮ್ಮ ಪ್ರಾಣವನ್ನೇ ಪಣವಾಗಿಸಿದ್ದರು (ಪೋರ್ಚುಗಲ್‌ರ ವಿರುದ್ಧ). ತ್ಯಾಗ ಹೋರಾಟದ ಪರಂಪರೆ ಈ ದೇಶದಲ್ಲಿ ಯಾರಿಗಾದರೂ ಇದ್ದರೆ ಅದು ಕಮ್ಯುನಿಸ್ಟರಿಗೆ ಮಾತ್ರ.ಸ್ವಾತಂತ್ರ್ಯಕ್ಕಾಗಿ ಅತೀ ಹೆಚ್ಚು ಜೈಲುವಾಸ ಅನುಭವಿಸಿದವರು ಕಮ್ಯುನಿಸ್ಟರು. ಆ ಪರಂಪರೆಯ ಭಾಗ ಎನ್.ಕೆಯವರು."(ನಿಜವಾದ ಹೋರಾಟದಲ್ಲಿ ಭಾಗವಹಿಸಿದವರು ಬರೆದ ಇತಿಹಾಸ ಓದಿ) 63 ವರ್ಷಗಳ ಹಿಂದೆ ಯಾವ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಹೋರಾಡಿದ್ದರೋ ಇಂದು ಅದಕ್ಕೂ ಬಲಿಷ್ಠ ಶಕ್ತಿ ಇದ್ದು ಅದು ಆರ್ಥಿಕ ನೀತಿಗಳನ್ನು ನಿರ್ದೇಶಿಸುತ್ತಿದೆ ಮತ್ತು ರೂಪಿಸುತ್ತಿದೆ. ಅದು ಅಮೇರಿಕಾ ಮತ್ತು ಮಿತ್ರ ಪಕ್ಷಗಳಾಗಿವೆ. ನಮ್ಮ ಸರ್ಕಾರಗಳು ಅದರ ಒಂದು ಭಾಗ ಮಾತ್ರ. ಶಾಶ್ವತ ಪರಿಹಾರ, ಸೌಲಭ್ಯಗಳು, ನೌಕರರ ಖಾಯಂ ನೇಮಕ,ಕಾರ್ಮಿಕ ಹಿತ ರಕ್ಷಣಾ ಕಾನೂನುಗಳು ಇರಬಾರದು ಎಂಬುದು ಅವರ ನೀತಿ. 81 ಕೋಟಿ ದುಡಿವ ಜನರಲ್ಲಿ 60 ಕೋಟಿ ಗುತ್ತಿಗೆ ಆಧಾರದವರಾಗಿದ್ದು, ಅದರಲ್ಲಿ ಗುತ್ತಿಗೆ ಮತ್ತು ಹೊರಗುತ್ತಿಗೆ ಎಂಬ ಎರಡು ಬಗೆಗಳಿವೆ. ಅಂದು ಬ್ರಿಟೀಷ್‌ರು ಇಂದು ಅಮೇರಿಕಾ ಮತ್ತು ಮಿತ್ರ ದೇಶಗಳು; ಅಂದು ಬರಿ ಬಂದೂಕು ಫಿರಂಗಿ ಇಂದು ಒಂದು ಕ್ಷಣದಲ್ಲಿ ಇಡೀ ಪ್ರಪಂಚವನ್ನೇ ನಾಶ ಮಾಡುವಂತ ಸಲಕರಣೆಗಳಿವೆ. ದುಡಿವ ಜನರಿಗೆ ಮಾತ್ರ ದೇಶವನ್ನು ಉಳಿಸಿಬೆಳೆಸುವ ಶಕ್ತಿ ಇರುವುದು. ಕಮ್ಯುನಿಸ್ಟ್‌ರ ನೇತೃತ್ವದಲ್ಲಿ ಕಾರ್ಮಿಕರು ಹೋರಾಟ ನಡೆಸಿದರು. ಸಂಪೂರ್ಣ ಸ್ವಾತಂತ್ರ್ಯ ಬೇಕು ಅಂದ ಕಮ್ಯುನಿಸ್ಟ್‌ರಿಗೆ ಮಾತ್ರ ಬ್ರಿಟೀಷರು ನಿಜವಾಗಿ ಹೆದರಿದ್ದು. ಗೋವಾ ವಿಮೋಚನಾ ಚಳುವಳಿಯ ಹೋರಾಟಗಾರರಿಗೆ ಮಾಶಾಸನ ಕೊಡಬೇಕು ಅಂತ ಎನ್.ಕೆ.ಯವರು ಹೋರಾಟ ಮಾಡಿದ್ದರು, ಸ್ವಂತಕ್ಕಾಗಿ ಏನನ್ನೂ ಮಾಡಿಕೊಂಡಿಲ್ಲ. ದಬ್ಬಾಳಿಕೆ ವಿರೋಧಿಸಿ ಹೋರಾಟ ಕಟ್ಟಿ ಸಾಮ್ರಾಜ್ಯಶಾಹಿ ವಿರೋಧಿ ಪರಂಪರೆ ಉಳಿಸಿ ಎಂದು ಅತಿಥಿಗಳಾಗಿ ಆಗಮಿಸಿದ್ದ ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು. ಇನ್ನೊಬ್ಬ ಅತಿಥಿಗಳಾದ ವಿ.ಪಿ.ಕುಲ್ಕರ್ಣಿ ಬಹಳ ದಿನದ ಕನಸು ನನಸಾಗಿದೆ ಎಂದರು. ನಂದವೂರು ಕೃಷ್ಣ ಉಪಾಧ್ಯಾಯ ಎಂಬುದು ಎನ್.ಕೆ.ಅವರ ಪೂರ್ಣ ಹೆಸರು. 60 ವರ್ಷಕ್ಕೂ ಹೆಚ್ಚು ಕಾಲ ಪ್ರಮುಖ ಸಕ್ರಿಯ ಪಾತ್ರ ವಹಿಸಿದ್ದರು. ದ.ಕ.ದಿಂದ ದುಡಿಯಲು ಅಣ್ಣ ಎನ್.ಎಲ್.ಉಪಾಧ್ಯಾಯರ ಜೊತೆ ದುಡಿಯಲು ಮುಂಬೈಗೆ ಹೋದಾಗ ಕಮ್ಯುನಿಸ್ಟ್‌ರ ಸಂಪರ್ಕ ಬಂದು ಕರ್ನಾಟಕದಲ್ಲಿ ಸಂಘ ಕಟ್ಟಲು ಕಮ್ಯುನಿಸ್ಟ್‌ರೆಂದರೆ ಅನುಮಾನದಿಂದ ನೋಡುವ ಸ್ಥಿತಿ ಇರುವ ಸಂದರ್ಭದಲ್ಲಿ ಬಂದರು. ನಗರ ಸ್ಥಳೀಯ ಸಂಸ್ಥೇಗಳನ್ನು ಸಂಘಟಿಸಿ ಸರ್ಕಾರೀ ನೌಕರರಿಗೆ ಸಮಾನ ವೇತನ ಮತ್ತು ಮಾನದಂಡ ಇರಬೇಕು ಅನ್ನುವ ಹೋರಾಟ ಕಟ್ಟಿದರು ಇಂದೂ ಅದೇ ಹೋರಾಟ. 6ವರ್ಷ ಜೈಲುವಾಸ ಅನುಭವಿಸಿದರು. ಅವರ ಪತ್ನಿ 'ಕೆಂಡ ನುಂಗಿ ಜೀವನ' ಮಾಡಿದರು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ, ಆಲಮಟ್ಟಿ ಡ್ಯಾಮ್ ಕಟ್ಟಲು, ಬಿಜಾಪುರ ಕಡೆ ಸಮಗ್ರ ನೀರಾವರಿ ಆಗಬೇಕು ಎಂಬ ಹೋರಾಟಗಳಲ್ಲಿ ಪ್ರಮುಖ ಪಾತ್ರ ಎನ್.ಕೆ. ವಹಿಸಿದ್ದರು. ನಾಲೆಗೆ ಅವರ ಹೆಸರಿಡುವ ಪ್ರಸ್ತಾಪ ಇತ್ತು ಅದು ನೆರವೇರಲಿಲ್ಲ. ಸರ್ಕಾರ ಮರೆತಹಾಗೆ ತಾವೆಲ್ಲ ಮರೆಯದೇ ಭವನ ಕಟ್ಟಿ ಶಾಶ್ವತಗೊಳಿಸಿದ್ದೀರಿ. ಎಂದರು.


ಕಾರ್ಮಿಕರು ನೆಮ್ಮದಿಯಿಂದ ಒಂದಾಗಿ ಬದುಕಬೇಕೆಂಬ ಆಶಯದ ಹೋರಾಟ ಜೀವನದುದ್ದಕ್ಕೂ ಮಾಡಿದ್ದರು. 'ಸುಸ್ತನ್ನೇ ಅರಿಯದ ಸರದಾರ'ನ ಧೀರೋದ್ದಾತ ಹೋರಾಟದ ಸ್ಮರಣೆಗಾಗಿ ಅವರ ಆಶಯಗಳನ್ನು ಪೂರ್ಣಗೊಳಿಸಲು ಭವನ ಕಟ್ಟಿದ್ದೀರಿ. ಅಪಾರ ತಾಳ್ಮೆ ಹೊಂದಿದ್ದ ಅವರನ್ನು ಬಳ್ಳಾರಿ ಭಾಗದಲ್ಲಿ 'ಎನ್.ಕೆ. ದೇವರು' ಎಂದೇ ಹೇಳುತ್ತಿದ್ದರು. ಈ ಭವನ ಪಣ ತೊಟ್ಟು ದುಡಿಯಲು ಇರುವ ಕೇಂದ್ರ ಇದಾಗಿದೆ. ಎಲ್ಲರ ಬದುಕು ಹಸನಾಗಿ, ಬದುಕಲು ಬೇಕಾದ ಕನಿಷ್ಠ ಕೂಲಿ 10,000 ಕೇವಲ ನೋಟಿಫಿಕೇಷನ್ ಅಲ್ಲ ಕಿಸೆಗೆ ದುಡ್ಡು ಬರಬೇಕು. 28ರ ಹೋರಾಟ ಪ್ರಮುಖ ಹೆಜ್ಜೆ ಎಂದು ಪ್ರಸನ್ನ ಕುಮಾರ ಹೇಳಿದರು.

ಎನ್.ಕೆ. ಅವರ ಮಗಳು ಸುಜಾತ ಮಾತನಾಡಿ ಇವತ್ತಿಗೂ ತಂದೆಯ ಮಾರ್ಗದರ್ಶನದಂತೆ ಪರರ ಸೊತ್ತಿಗೆ ಆಸೆ ಪಡದೇ ಶೀಟ್ ಮನೆಯಲ್ಲಿಯೇ ಬದುಕುತ್ತಿದ್ದೇವೆ. ಸಂಘಟನೆಗಳ ಸೇವೆಗೆ ಸದಾಸಿದ್ಧ. ಎಲ್ಲರನ್ನೂ ತಂದೆ ತುಂಬಾ ಗೌರವಿಸುತ್ತಿದ್ದರು. ಅಪಾರ ತಾಳ್ಮೆ ಹೊಂದಿದ್ದರು. ದೇಶ ಮತ್ತು ದುಡಿವ ವರ್ಗಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡಿದರು. ತುಂಬಾ ಬಡತನದಲ್ಲಿ ದಿನಗಳನ್ನು ದೂಡಿದ್ದೇವೆ. ಆದರೂ ತಂದೆಯ ಹಾದಿಯಲ್ಲೇ ನಡೆಯುವ ಆಸೆ ಇದೆ. ಎಂದರು. ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಂಘಟನೆಯ ರಾಜ್ಯ ಸಂಚಾಲಕರಾದ ಮಡಿವಳಪ್ಪರನ್ನು ಸನ್ಮಾನಿಸಲಾಯಿತು. ಯರವಾಡ ಗ್ರಾಮ



ಪಂಚಾಯತ ನೌಕರರಾದ ಇವರು ಉದ್ಯೋಗ[illegible] ಖಾತ್ರಿಯನ್ನು ಸಮಗ್ರ ಸಮರ್ಪಕ ಜಾರಿಗಾಗಿ[illegible] ರಾಷ್ಟ್ರ ಪ್ರಶಸ್ತಿ ದೊರಕಿದೆ. ಸಭೆಯನ್ನು ಉದ್ದೇಶಿಸಿ[illegible] ಮಡಿವಾಳಪ್ಪ, ಭೀಮಶೀ ಕಲಾದಗಿ[illegible] ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ[illegible] ಮಾನ್ಪಡೆಯವರು 1988ರಲ್ಲಿ ಗುಲ್ಬರ್ಗಾದಲ್ಲಿ[illegible] 3 ಜಿಲ್ಲೆಗಳು ಸೇರಿ ರಿಜಿಸ್ಟ್ರೇಷನ್ ಮಾಡಿದ್ದರು.[illegible] ಬೈಲಾ ಬರೆದು ರೂಪ ಕೊಟ್ಟವರಲ್ಲಿ ಎನ್.ಕೆ.[illegible] ಪ್ರಮುಖರು. ಇದರಿಂದ ಶ್ರಮಿಕರ ಹೋರಾಟಕ್ಕೆ[illegible] ಬಲ ಬಂತು. ಪಂಚಾಯತ ನೌಕರರೆಂದರೆ[illegible] ಎಲ್ಲಿಯೂ ಮರ್ಯಾದೆ ಇಲ್ಲದಂತಾಗಿ[illegible] ಸ್ಥಾನಮಾನವಿಲ್ಲದ ಜನರಾಗಿದ್ದಾರೆ. ತಿಂಗಳಿಗೆ[illegible] 10ರೂ. ವರಮಾನ ಪಡೆದು ಕೆಲಸವನ್ನು[illegible] ನಿರ್ವಹಿದ ನೌಕರರ ಚಿತ್ರ ನಮ್ಮ ಮುಂದೆ ಇದೆ.[illegible] ದುಡಿವ ಜನ, ಕರ್ಮಿಕರ ಖಾಳಜಿ ಇರುವ[illegible] ಶ್ರಮದ ಬಗ್ಗೆ ಗೌರವ ಇರುವ ಸುಲಿಗೆ ರಹಿತ[illegible] ಶೋಷಣಾ ರಹಿತ ಸಮಾಜ ಕಟ್ಟಲು ಎನ್.ಕೆ.[illegible] ಸಂಘ ಕಟ್ಟಿದರು. ಅವರಿಂದ ಸ್ಫೂರ್ತಿ ಪಡೆದು[illegible] ಜ್ಯೋತಿಬಸು ರೈಲ್ವೆ ನೌಕರರ ಸಂಘ ಕಟ್ಟಿದರು.[illegible] ಒಟ್ಟೂ ಸಮಾಜದ ಏಳಿಗೆಗೆ ಕೆಂಪುಬಾವುಟದ[illegible] ಪ್ರಯತ್ನ. ಜೊತೆಗಿದ್ದು ಸಾಥ್ ನೀಡಿ ಎಂದರು.

ಎಂ. ಬಿ. ನಾಡಗೌಡರು ಎಲ್ಲರನ್ನು ಸ್ವಾಗತಿಸಿ[illegible] ವಂದಿಸಿದರು. ಸಭೆಯಲ್ಲಿ ಎನ್.ಕೆ. ಅವರ ಪತ್ನಿ[illegible] ಮಗಳು, ಅವರ ಜೊತೆ ಗೋವಾ[illegible] ಹೋರಾಟದಲ್ಲಿ ಭಾಗಿಯಾಗಿದ್ದ ರೇವೂಬಾಯಿ[illegible] ಇದ್ದದ್ದು ಕಾರ್ಯಕ್ರಮಕ್ಕೆ ಕಳೆ ಕಟ್ಟಿತ್ತು.



ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾರ್ಮಿಕ ಕಾನೂನುಗಳ ಉಲ್ಲಂಘನೆಗೆ ಅವಕಾಶ: ಐಎಲ್‌ಸಿಯಲ್ಲಿ ಪ್ರಧಾನಿ ಮೆಚ್ಚುಗೆ!

ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ದ 44 ನೇ ಅಧಿವೇಶನ ಫೆಬ್ರವರಿ 14-15ರಂದು ನಡೆದಿದೆ. ಇದನ್ನು ಉದ್ಘಾಟಿಸುತ್ತ ಪ್ರಧಾನ ಮಂತ್ರಿಗಳು ತಾನು 40 ನೇ ಅಧಿವೇಶನದಿಂದ ಆರಂಭಿಸಿ ನಾಲ್ಕನೇ ಬಾರಿ ಇಂತಹ ಒಂದು ಅಧಿವೇಶನದಲ್ಲಿ ಭಾಗವಹಿಸುತ್ತಿರುವುದಾಗಿ ನೆನಪಿಸಿಕೊಂಡರು, ಆದರೆ, ಕಾರ್ಮಿಕರ ಪರವಾಗಿ ನಿಂತಿದ್ದೇನೆ ಎಂಬ ಹೆಮ್ಮೆಯಿಂದ ಅಲ್ಲ. ಬದಲಾಗಿ, ತಮ್ಮ ನವ-ಉದಾರವಾದಿ ನೀತಿಯ ಪ್ರತಿಪಾದನೆ 'ಯಶಸ್ವಿ'ಯಾಗಿದೆ ಎಂದು!

'ಇತ್ತೀಚಿನ ವರ್ಷಗಳಲ್ಲಿ ಹೆಚ್ಚೆಚ್ಚು ರಾಜ್ಯ ಸರಕಾರಗಳು ಶ್ರಮ ಪುನರ್ರಚನೆ ಮತ್ತು ತರ್ಕಬದ್ಧಗೊಳಿಸುವುದರ ಬಗ್ಗೆ ಒಲವು ತೋರಿಸಿವೆ, ಆ ಮೂಲಕ ಕಾರ್ಮಿಕ ಧೋರಣೆಗಳು ಕಾರ್ಮಿಕರನ್ನು ಅನಗತ್ಯವಾಗಿ ರಕ್ಷಿಸುತ್ತಿವೆ ಎಂಬ ಭಾವನೆ ದೂರವಾಗಿದೆ'- ಇದು ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ತೃಪ್ತಿಯಿಂದ ಉದುರಿಸಿದ ಅಣಿಮುತ್ತು! ಅಂದರೆ ಕಾರ್ಮಿಕರಿಗೆ ಸರಕಾರದ ಕಾನೂನುಗಳೇ ಒದಗಿಸಿರುವ ಹಕ್ಕುಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಉಪೇಕ್ಷಿಸಿರುವುದಷ್ಟೇ ಅಲ್ಲ, ಮಾಲಕರು ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಲು ಅವಕಾಶ ಕಲ್ಪಿಸಿಕೊಟ್ಟ ರಾಜ್ಯಸರಕಾರಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಲು ಐಎಲ್‌ಸಿಯಂತಹ ವೇದಿಕೆಯನ್ನು ದೇಶದ ಪ್ರಧಾನ ಮಂತ್ರಿಗಳು ಆರಿಸಿಕೊಂಡಿದ್ದಾರೆ ಎಂದರೆ ನೀವು ನಂಬಬಲ್ಲಿರಾ? ಅದು ಕೂಡ ಸ್ವತಃ ಅವರ ಕಾಂಗ್ರೆಸ್ ನೇತೃತ್ವದ ಕಾರ್ಮಿಕ ಸಂಘಟನೆಯೂ ಸೇರಿದಂತೆ ದೇಶದ ಎಲ್ಲ ಕಾರ್ಮಿಕ ಸಂಘಟನೆಗಳು ನೀಡಿರುವ ಫೆಬ್ರುವರಿ 28ರ ಸಾರ್ವತ್ರಿಕ ಮುಷ್ಕರದಲ್ಲಿ ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಿನ ಪಾಲನೆ ಒಂದು ಪ್ರಮುಖ ಬೇಡಿಕೆಯಾಗಿರುವಾಗ! ಯುಪಿಎ-2 ಸರಕಾರದ ದರ್ಬಾರಿನಲ್ಲಿ ಇದು ಸಾಧ್ಯ!

ಹೌದು, 42ನೇ ಅಧಿವೇಶನವನ್ನು ಬಿಟ್ಟು ಬೇರೆಲ್ಲವನ್ನೂ ಯುಪಿಎ ಪ್ರಧಾನ ಮಂತ್ರಿಗಳೇ ಉದ್ಘಾಟಿಸಿದ್ದು. ಆದರೆ ಯಾವ ಅಧಿವೇಶನದಲ್ಲೂ ಅವರದ್ದೇ 'ಆಮ್ ಆದ್ಮಿ' ಮಂತ್ರಕ್ಕೆ ನ್ಯಾಯ ಒದಗಿಸಲಾದರೂ 'ಸಾಮಾನ್ಯ ಕಾರ್ಮಿಕರ' ಪರವಾಗಿ ಅವರು ಮಾತಾಡಿರಲಿಲ್ಲ. ಇದು ತ್ರಿಪಕ್ಷೀಯ ಅಂದರೆ ಸರಕಾರ, ಮಾಲಕರು ಮತ್ತು ಕಾರ್ಮಿಕರ ಜಂಟಿ ಸಮ್ಮೇಳನ, ಅವರು ಸರಕಾರದ ಪರವಾಗಿಯಾದರೂ ಮಾತಾಡಬೇಕು. ಅವರು ಅದೂ ಮಾಡಿಲ್ಲ, ಸದಾ ಮಾಲಕರ ಪರವಾಗಿ ಮಾತಾಡಿದ್ದಾರೆ, ಈ ಬಾರಿಯೂ ಅದನ್ನೇ ಮಾಡಿದ್ದಾರೆ ಎನ್ನುತ್ತಾರೆ ಈ ಸಮ್ಮೇಳನದಲ್ಲಿ ಭಾಗವಹಿಸಿರುವ ಕಾರ್ಮಿಕ ಮುಖಂಡರು.

ಸರಕಾರ ಇರುವುದೇ ಮಾಲಕರ ಪರವಾಗಿ ಮಾತಾಡಲು, ಕ್ರಮ ಕೈಗೊಳ್ಳಲು ಎಂದು ಅವರು ಬಲವಾಗಿ ನಂಬಿದಂತಿದೆ. ಆದ್ದರಿಂದಲೇ ಅವರು ಭಾಗವಹಿಸಿದ ಪ್ರತಿಯೊಂದು ಐಎಲ್‌ಸಿ ಅಧಿವೇಶನದಲ್ಲೂ ಅವರು ಮಾಲಕರ ಕಾಳಜಿಗಳಿಗೆ ಸ್ಪಂದಿಸಿದ್ದಾರೆ, ಇಲ್ಲ, ದನಿ ನೀಡಿದ್ದಾರೆ, ಕಾರ್ಮಿಕರ ಸಮಸ್ಯೆಗಳನ್ನು ಕೇಳಲು ಮಾತ್ರ ಅವರಿಗೆ ಸಮಯವೇ ಇರುವುದಿಲ್ಲ, ಅವರ ಹಕ್ಕುಗಳ ರಕ್ಷಣೆಯ ಭರವಸೆ ಕೊಡುವುದಂತೂ ದೂರದ ಮಾತು. ಈ ಬಾರಿಯೂ ಕಾರ್ಮಿಕರ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಕೇಳಲು ಅವರಿಗೆ ಬಿಡುವಿರಲಿಲ್ಲ.

ಕನಿಷ್ಟ ಕೂಲಿ, ಸಾಮಾಜಿಕ ಭದ್ರತೆ ಮತ್ತು ನೌಕರಿ-ನೇಮಕಾರ್ಹತೆ ಇವು ಮೂರು ಈ ಬಾರಿಯ ಐಎಲ್‌ಸಿ ಅಧಿವೇಶನದ ಅಜೆಂಡಾ. ಯುಪಿಎ-2 ಪ್ರಧಾನಿಗಳು ಈ ಅಜೆಂಡಾವನ್ನು ಪ್ರಸ್ತಾಪಿಸಿದರು, ಸಾಮಾಜಿಕ ಭದ್ರತೆ ಮತ್ತು ಕೌಶಲ ಬೆಳವಣಿಗೆಯ ಬಗ್ಗೆ ಮಾತಾಡಿದರು, ಆದರೆ ಈ ರಂಗಗಳಲ್ಲೂ ತನ್ನ ಪ್ರಿಯ 'ಪಿಪಿಪಿ' ಅಂದರೆ ಖಾಸಗಿಯವರೊಂದಿಗೆ ಪಾಲುದಾರಿಕೆಯ ಮಂತ್ರದ ಪುನರುಚ್ಚಾರಕ್ಕಷ್ಟೇ. ಕನಿಷ್ಟ ಕೂಲಿಯ ಬಗ್ಗೆ ಮಾತ್ರ ದಿವ್ಯಮೌನ- ಅಲ್ಲಿ ಪಿಪಿಪಿ ಮಂತ್ರಕ್ಕೆ ಅವಕಾಶವಿಲ್ಲವಲ್ಲಾ! ರೇಗಾ ಕಾನೂನಿನ ಅಡಿಯಲ್ಲಿ ಬಡ ಗ್ರಾಮೀಣರಿಗೆ ಕನಿಷ್ಟ ಕೂಲಿ ಕೊಡಬಾರದು ಎಂದು ಹೈಕೋರ್ಟಿನ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ ಎಂದವರಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ ಎನ್ನುತ್ತಾರೆ ಕಾರ್ಮಿಕ ಮುಖಂಡರು.



ವೇದರಾಜ ಎನ್.ಕೆ.

'ಭಾರತ-ಚೀನಾ ಯುದ್ಧ ಅಮೆರಿಕಾಕ್ಕೆ ಬೇಕಾಗಿದೆ'

ಯಾವುದೇ ಯುಪಿಎ-2 ಕೇಂದ್ರ ಮಂತ್ರಿಯಿಂದ ಇಂತಹ ಹೇಳಿಕೆಯನ್ನು ನಿರೀಕ್ಷಿಸುವಂತಿಲ್ಲ. ನಿಜ, ಈ ಹೇಳಿಕೆ ಅವರದ್ದಲ್ಲ, ಆದರೆ ಯುಪಿಎ-2 ಬೆಂಬಲಕ್ಕೆ ನಿಂತಿರುವ ನ್ಯಾಶನಲ್ ಕಾನ್ಫರೆನ್ಸಿನ ಮುಖಂಡ ಮತ್ತು ಜಮ್ಮು-ಕಾಶ್ಮೀರದ ಮುಖ್ಯ ಮಂತ್ರಿಗಳದ್ದು. ಅಮೆರಿಕಾದ ಮತ್ತೊಂದು ಚಿಂತಕರ ಚಾವಡಿ ಭಾರತ ಮತ್ತು ಚೀನಾದ ನಡುವೆ ಒಂದು ಯುದ್ಧದ ಸಾಧ್ಯತೆ ಇದೆ ಎಂದು ಹೇಳಿರುವ ವರದಿಯ ಬಗ್ಗೆ ಅವರನ್ನು ಕೇಳಿದಾಗ ಅವರು ನೀಡಿದ ಪ್ರತಿಕ್ರಿಯೆ ಇದು. ನೆರೆ ದೇಶಗಳ ನಡುವೆ ಒಂದಿಲ್ಲೊಂದು ಸೆಳೆತ ಇದ್ದೇ ಇರುತ್ತವೆ, ಕಡ್ಡಿಯನ್ನು ಗುಡ್ಡ ಮಾಡುವ ಅಗತ್ಯ ಏನೂ ಇಲ್ಲ ಎಂದು ನೇರವಾಗಿಯೇ ಹೇಳಿದ ಅವರು ಇದನ್ನು ನಮಗೆ (ಭಾರತ ಮತ್ತು ಚೀನಾಕ್ಕೆ) ಬಿಡಿ ಎಂದು ಅಮೆರಿಕನ್ 'ಚಿಂತಕ'ರಿಗೆ ಸಲಹೆ ನೀಡಿದರು.

ಇನ್ನೊಬ್ಬ ಯುಪಿಎ ಮಂತ್ರಿಗೆ ಮತ್ತೊಂದು ಹೈಕೋರ್ಟ್ ಚಾಟಿಯೇಟು





ಯುಪಿಎ-2 ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಿ ವಿರುದ್ಧ ಮುಂಬೈ ಹೈಕೋರ್ಟ್ ಇನ್ನೊಂದು ತೀರ್ಪು ನೀಡಿದೆ. ಮುಂಬೈಯ 'ಸುಭಾಷ್ ಘೈ ಫಿಲ್ಮ್ ತರಬೇತಿ ಸಂಸ್ಥೆ ಮತ್ತು ಮಹಾರಾಷ್ಟ್ರ ಚಿತ್ರ, ನಾಟಕ ಮತ್ತು ಸಂಸ್ಕೃತಿ ಅಭಿವೃದ್ಧಿ ನಿಗಮ'ದ 'ಜಂಟಿ ಉದ್ಯಮ'ಕ್ಕಾಗಿ ಮಾಡಿಕೊಂಡಿರುವ ವ್ಯವಹಾರದಲ್ಲಿ ಆಗ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ವಿಲಾಸರಾವ್ ದೇಶಮುಖ್ ತಮ್ಮ ಸ್ಥಾನದ ದುರುಪಯೊಗ ಮಾಡಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತಿದೆ ಎಂದು ತೀರ್ಪಿತ್ತಿದೆ. ಇವರ ವರ್ತನೆ ಒಪ್ಪತಕ್ಕಂತದ್ದಲ್ಲ ಎಂದಿರುವ ಅದು ಈ ಇಡೀ ವ್ಯವಹಾರ 'ಕಾನೂನುಬಾಹಿರ, ಸ್ವೇಚ್ಛಾಚಾರದ್ದು ಮತ್ತು ಕಾನೂನಿನ ಅಧಿಕಾರ ಇಲ್ಲದ್ದು' ಎಂದು ಹೇಳಿದೆ.

ಈ ತೀರ್ಪಿನ ನಂತರ ಈ ಯುಪಿಎ-2 ಮಂತ್ರಿಗೆ ಇನ್ನೊಂದು 'ಬಡ್ತಿ' ಖಂಡಿತ ಎಂದಿದ್ದಾರೆ ಪ್ರಖ್ಯಾತ ಪತ್ರಕರ್ತ ಪಿ.ಸಾಯಿನಾಥ್. ಏಕೆಂದರೆ ಈ ಮಂತ್ರಿ ಎಲ್ಲರಂತವನಲ್ಲ. ಉನ್ನತ ನ್ಯಾಯಾಲಯದ ಚಾಟಿಯೇಟು ಈತನಿಗೆ ಹೊಸದೇನಲ್ಲ. ಆದರೆ ಪ್ರತಿ ಬಾರಿ ಏಟು ತಿಂದಾಗಲೂ ಕಂಗೆಡದೆ , ಬದಲು 'ಬಡ್ತಿ' ಗಿಟ್ಟಿಸಿಕೊಂಡ ದಾಖಲೆ ಈತನದು ಎನ್ನುತ್ತಾರೆ ಸಾಯಿನಾಥ್.

ಈ ಹಿಂದೆ, ಡಿಸೆಂಬರ್ 2010ರಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ವಿದರ್ಭದ ಒಬ್ಬ ಲೇವಾದೇವಿಗಾರನ ಬಂಧನವನ್ನು ತಡೆದುದಕ್ಕಾಗಿ 10 ಲಕ್ಷ ರೂ.ಗಳ ದಂಡವನ್ನು ಹಾಕಿತ್ತು. 'ಮಹಾರಾಷ್ಟ್ರ ರಾಜ್ಯದಲ್ಲಿ ಸಂವಿಧಾನಿಕ ಕಾರ್ಯನಿರ್ವಾಹಕರು ವರ್ತಿಸುವ ರೀತಿ ಅತ್ಯಂತ ಆಘಾತಕಾರಿ ಮತ್ತು ಇದು ಈ ನ್ಯಾಯಾಲಯದ ಆತ್ಮಸಾಕ್ಷಿಯನ್ನು 'ಕಲಕಿದೆ' ಎಂದಿದ್ದ ತೀರ್ಪು ಈ ಲೇವಾದೇವಿಗಾರನ 'ಕುಟುಂಬದ ವಿರುದ್ಧ ಹಾಕಿದ್ದ ವಿವಿಧ' ದೂರುಗಳ ಅರಿವು ಮುಖ್ಯಮಂತ್ರಿಗಳಿಗಿತ್ತು ಎಂಬುದು ಸ್ಪಷ್ಟ. ಆದರೂ ಈ ಕುಟುಂಬದ ಪರವಾಗಿ ಅನುಕೂಲಕರ ವರ್ತನೆ ತೋರಬೇಕು ಎಂದು ಆದೇಶ ಹೊರಡಿಸಿರುವುದು ಕಾನೂನಿನಲ್ಲಿ ಕೇಳರಿಯದ ಸಂಗತಿ' ಎಂದು ಕಟುವಾಗಿ ಹೇಳಿತ್ತು.

ಇದರ ನಂತರ ನಡೆದದ್ದು ಇನ್ನೂ ಆಘಾತಕಾರಿ. ಇಂತಹ ಟೀಕೆ ಮತ್ತು ದಂಡ ನೀಡಿದ ವ್ಯಕ್ತಿ ವಾಸ್ತವವಾಗಿ ಮುಖ ಮುಚ್ಚಿಕೊಂಡು ಓಡಿಹೋಗಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಬದಲಾಗಿ ದೇಶದ ಅತ್ಯಂತ ಸ್ವಚ್ಛ ವ್ಯಕ್ತಿಯೆನಿಸಿದ ಯುಪಿಎ-2 ಪ್ರಧಾನ ಮಂತ್ರಿಗಳು ಈತನಿಗೆ ತನ್ನ ಸಂಪುಟದಲ್ಲಿ ಗ್ರಾಮೀಣ ಅಭಿವೃದ್ಧಿ ಮಂತ್ರಿಯಾಗಿ ಬಡ್ತಿ ನೀಡಿದರು. ಬಡ್ಡಿಕೋರತನ ಗ್ರಾಮೀಣ ಪ್ರಗತಿಯ ಒಂದು ಜೀವನ್ಮರಣ ಅಂಗ ಎಂಬ ತರ್ಕವನ್ನು ಒಪ್ಪುವವರು ಮಾತ್ರವೇ ಪ್ರಧಾನ ಮಂತ್ರಿಗಳ ಈ ವರ್ತನೆಯನ್ನು ಒಪ್ಪಲು ಸಾಧ್ಯ ಎಂದು ಸಾಯಿನಾಥ್ ವ್ಯಂಗ್ಯವಾಡುತ್ತಾರೆ.

'ಇದು ಸಾಲ ತೆಗೆದುಕೊಂಡ, ಲೇವಾದೇವಿಗಾರರ ಕಿರುಕುಳ ಮತ್ತು ಅತ್ಯಾಚಾರಗಳ ವಿರುದ್ಧ ಕಾನೂನು-ವ್ಯವಸ್ಥೆಯ ಅಧಿಕಾರಿಗಳ ಬಳಿ ಬಂದವರ ಹಿತಗಳನ್ನು ಬಲಿಗೊಟ್ಟು ಕೆಲವು ಆಯ್ದ ವ್ಯಕ್ತಿಗಳಿಗೆ ವಿಶೇಷ ಅನುಕೂಲ ಕಲ್ಪಿಸಿದಂತಾಗುತ್ತದೆ' ಎಂದು ತೀರ್ಪು ಹೇಳಿತ್ತು. ಹಿಂದೆ ಯಾವ ಕೇಂದ್ರ ಮಂತ್ರಿಗೂ, ಮುಖ್ಯಮಂತ್ರಿಗೂ ಇಂತಹ ದಂಡ ಮತ್ತು ಛೀಮಾರಿ ಸಿಕ್ಕಿರಲಿಕ್ಕಿಲ್ಲ.

ಇದಕ್ಕೆ ಯುಪಿಎ-2 ಪ್ರಧಾನ ಮಂತ್ರಿಗಳು ಸ್ಪಂದಿಸಿದ್ದು ಹೇಗೆ ? ಸ್ವಲ್ಪವೂ ವಿಳಂಬ ಮಾಡದೆ ಅವರು ತನ್ನ ರಾಜ್ಯದಲ್ಲಿ ಲೇವಾದೇವಿಗಾರರನ್ನು ರಕ್ಷಿಸಿದ್ದಕ್ಕೆ ದಂಡ ತೆತ್ತ ಈತನನ್ನೇ ಇಡೀ ದೇಶದ ಗ್ರಾಮೀಣ ಅಭಿವೃದ್ಧಿಯ ಕೆಲಸ ಮಾಡಲು ನೇಮಿಸಿದರು! ಈ ವ್ಯಕ್ತಿಯ ಸಾಧನೆಗಳು ಇವೆರಡೇ ಅಲ್ಲ, ಜತೆಗೆ ಆದರ್ಶ ಅಪಾರ್ಟ್‌ಮೆಂಟ್ ಹಗರಣದಲ್ಲಿಯ ಆಪಾದನೆಯಷ್ಟೇ ಅಲ್ಲ, ಈತ ಮುಖ್ಯಮಂತ್ರಿಯಾಗಿದ್ದ ಎಂಟು ವರ್ಷಗಳಲ್ಲಿ ಮಹಾರಾಷ್ಟ್ರದಲ್ಲಿ 30,000 ರೈತರು ಆತ್ಮಹತ್ಯೆ ಮಾಡಿಕೊಂಡರು. ಇಂತಹ ಅಪೂರ್ವ ಸಾಧನೆಗೆ ತಕ್ಕ ಬಹುಮಾನ ಎನ್ನಬೇಕೇ?

ಈತ ಭೂವಿಜ್ಞಾನಗಳ ಮಂತ್ರಿಯೂ ಆಗಿದ್ದರು. ಮಹಾರಾಷ್ಟ್ರದಲ್ಲಿ ರಿಯಲ್ ಎಸ್ಟೇಟ್ ಪರಿಣತಿಗೆ 'ಭೂವಿಜ್ಞಾನಗಳು' ಎನ್ನುವುದು ವಾಡಿಕೆಯಾಗಿದೆಯಂತೆ. ಬಹುಶಃ ದೇಶಮುಖ್‌ರಂತವರ ಈ ಅಪೂರ್ವ ಸಾಧನೆಗಳ ಮತ್ತು ಸ್ವಚ್ಛ ಪ್ರಧಾನಿಯ ವಿಚಿತ್ರ ಕ್ರಮದ ಗುಟ್ಟೇನು ಎಂಬುದರ ಸಂಕೇತ ಇದರಲ್ಲೇ ಸಿಗುತ್ತದೆ. ರಿಯಲ್ ಎಸ್ಟೇಟ್ ದಂಧೆಯನ್ನು ಒಂದು 'ವಿಜ್ಞಾನ'ದ ಮಟ್ಟಕ್ಕೆ ಏರಿಸಿದ್ದೇ ಅವರನ್ನು ಆಳುವ ಮಂದಿಗೆ ಅನನ್ಯರಾಗಿಸಿದೆ ಎನುತ್ತಾರೆ ಪಿ.ಸಾಯಿನಾಥ್.

ಜಗದಗಲ

ಶರತ್‌ಚಂದ್ರ

'ಮಹಿಳೆಯರ ಮೇಲೆ ದೌರ್ಜನ್ಯ ಈಗಲೇ ನಿಲ್ಲಿಸಿ'

ಮಹಿಳಾ ದಿನದ ಶತಮಾನೋತ್ಸವದ ವರ್ಷದಲ್ಲಿ 'ವಿಶ್ವಸಂಸ್ಥೆ ಮಹಿಳೆಯರು' ಎಂಬ ಮಹಿಳೆಯರ ಪ್ರಶ್ನೆಗಳಿಗೆ ಮೀಸಲಾದ ಹೊಸ ಸಂಘಟನೆಯನ್ನು ಸ್ಥಾಪಿಸಿ ಕೆಲಸ ಆರಂಭಿಸಿತು. ಮಹಿಳೆಯರ ಮೇಲೆ ದೌರ್ಜನ್ಯಗಳ ಬಗ್ಗೆ ವ್ಯಾಪಕ ಪ್ರಚಾರದಿಂದ ಅದನ್ನು ತೀವ್ರವಾಗಿ ಹಿಮ್ಮೆಟ್ಟಿಸುವ 'ಮಹಿಳೆಯರ ಮೇಲೆ ದೌರ್ಜನ್ಯ ಈಗಲೇ ನಿಲ್ಲಿಸಿ' ಕಾರ್ಯಕ್ರಮವನ್ನು ಹೊಸ ಸಂಘಟನೆ ಆದ್ಯತೆಯಾಗಿ ಇಟ್ಟುಕೊಂಡಿದೆ. ಇದಕ್ಕೆ ಜಗತ್ತಿನಾದ್ಯಂತ ಸಮುದಾಯಗಳಲ್ಲಿ ಈ ಉದ್ದೇಶಕ್ಕೆ ಬದ್ಧವಾದ ಸಂಘಟನೆಗಳಿಗೆ ಬೆಂಬಲ ನೀಡುವ ಮತ್ತು ಅವುಗಳ ವ್ಯಾಪಕ ಜಾಲ ನಿರ್ಮಿಸುವತ್ತ ಮುಂದಾಗಿದೆ.

ಜಗತ್ತಿನಾದ್ಯಂತ ಮಹಿಳೆಯರ ಮೇಲೆ ದೌರ್ಜನ್ಯಗಳ ಸ್ವರೂಪ ಮತ್ತು ವ್ಯಾಪಕತೆಯನ್ನು ಅಧ್ಯಯನ ಮಾಡಿ ಅದು ಬಹಿರಂಗ ಪಡಿಸಿದ ಅಂಶಗಳು ದಂಗು ಬಡಿಸುವಂತಿದೆ. ಪ್ರತಿ ಸಮುದಾಯದಲ್ಲಿ ಶೇ.10 ರಿಂದ ಶೇ.70 ರಷ್ಟು ಮಹಿಳೆಯರು ಒಂದಲ್ಲ ಒಂದು ರೀತಿಯ ಹಿಂಸೆಗೆ ಒಳಗಾಗುತ್ತಾರೆ. ಇಂತಹ ಪ್ರಕರಣಗಳಲ್ಲಿ ಶೇ.70 ಅವರ ನಿಕಟ ಸಂಬಂಧಿಗಳೇ ಆಗಿರುತ್ತಾರೆ. ಅಮೆರಿಕ, ಕೆನಡಾ, ಇಸ್ರೇಲ್ ಮುಂತಾದ ಮುಂದುವರೆದ ದೇಶಗಳಲ್ಲೂ ಶೇ. 40 ರಿಂದ ಶೇ.70 ಹಿಂಸೆ ಎಸಗುವವರು ಮಹಿಳೆಯ ನಿಕಟವರ್ತಿಗಳೇ ಆಗಿರುತ್ತಾರೆ. ಪ್ರತಿವರ್ಷ 15 ಕೋಟಿಯಷ್ಟು ಮಹಿಳೆಯರು ಬಾಲಕಿಯರು ದೌರ್ಜನ್ಯಗಳಿಗೆ ಒಳಗಾಗುತ್ತಾರೆ. ಅವರಲ್ಲಿ ಅರ್ಧದಷ್ಟು 16 ವರ್ಷದ ಕೆಳಗಿನ ಬಾಲಕಿಯರು. ಶೇ.30ರಷ್ಟು ಹೆಣ್ಣಿನ ಮೊದಲ ಲೈಂಗಿಕ ಅನುಭವ ಬಲಾತ್ಕಾರ ಅಥವಾ ಬಲಾತ್ಕಾರದ ಪ್ರಯತ್ನವಾಗಿರುತ್ತದೆ. 30 ಲಕ್ಷ ಆಫ್ರಿಕನ್ ಮಹಿಳೆಯರು ಲೈಂಗಿಕ ಅಂಗಗಳ ವಿಕಾರದ ಕುಪದ್ಧತಿಯಿಂದ ಬಳಲುತ್ತಾರೆ. ಒಟ್ಟು 10 ರಿಂದ 14 ಕೋಟಿ ಇಂತಹ ವಿಕಾರಗಳ ನೋವನ್ನು ಜೀವನದುದ್ದಕ್ಕೂ ಅನುಭವಿಸುತ್ತಾರೆ.

ಪ್ರತಿ ವರ್ಷ 6 ಕೋಟಿ ಬಾಲವಿವಾಹಗಳು ನಡೆಯುತ್ತವೆ. ವ್ಯಾಪಕ ಮಾನವ ಸಾಗಾಣಿಕೆಯ ಅಪರಾಧಕ್ಕೆ ಒಳಗಾದವರಲ್ಲಿ ಶೇ.80 ಮಹಿಳೆಯರು. ಪ್ರತಿ ವರ್ಷ ಲೈಂಗಿಕ ಶೋಷಣೆಗಾಗಿ 6.3 ಲಕ್ಷ ಮಹಿಳೆಯರು ಬಾಲಕಿಯರನ್ನು ಬಲಾತ್ಕಾರವಾಗಿ ದೂರದ ಪ್ರದೇಶ ಅಥವಾ ದೇಶಗಳಿಗೆ ಸಾಗಿಸಲಾಗುತ್ತದೆ. ಪ್ರತಿ ವರ್ಷ 3.8 ಲಕ್ಷ ಮಹಿಳೆಯರು ಬಾಲಕಿಯರನ್ನು ಲೈಂಗಿಕ ಗುಲಾಮಗಿರಿಗೆ ಒಳಪಡಿಸಲಾಗುತ್ತದೆ. ಯುರೋಪಿನಲ್ಲಿ ಶೆ. 40 ರೀಮದ ಶೇ.50 ಮಹಿಳೆಯರು ಲೈಂಗಿಕ ಕಿರುಕುಳ ಅನುಭವಿಸುತ್ತಾರೆ. ಏಶ್ಯಾದಲ್ಲಿ ಶೇ.50 ರಷ್ಟು ಮಹಿಳಾ ಕಾರ್ಮಿಕರು ಲೈಂಗಿಕ ಕಿರುಕುಳ ಅನುಭವಿಸುತ್ತಾರೆ. ●

ಗವರ್ನರನನ್ನು ಇಳಿಸಲು ಸನ್ನದ್ಧವಾದ ಕಾರ್ಮಿಕ ಚಳುವಳಿ

ಅಮೆರಿಕದ ಒಂದು ಪ್ರಾಂತ್ಯದಲ್ಲಿ ಕಾರ್ಮಿಕ ಚಳುವಳಿ ಒಂದು ಪ್ರಮುಖ ರಾಜಕೀಯ ಗೆಲುವು ಸಾಧಿಸುವ ಹೊಸ್ತಿಲಲ್ಲಿದೆ. ಇದು ಫೆಡರಲ್ ಸರ್ಕಾರವನ್ನೂ ನಡುಗಿಸಬಹುದು. ವಿಸ್ಕೊನ್ಸಿನ್ ಪ್ರಾಂತೀಯ ವಿಧಾನ ಸಭೆ ಕಳೆದ ಮಾರ್ಚ್‌ನಲ್ಲಿ ಮಂಜೂರು ಮಾಡಿದ ಮತ್ತು ರಿಪಬ್ಲಿಕನ್ ಗವರ್ನರ್ ವಾಕರ್ ಸಹಿ ಹಾಕಿದ ಕಾನೂನು, ಸಾರ್ವಜನಿಕ ವಲಯದ ಕಾರ್ಮಿಕರು ಸಾಮೂಹಿಕ ಚೌಕಾಸಿಯ ಹಕ್ಕನ್ನು ಕಸಿದುಕೊಂಡಿದೆ. ಕಾರ್ಮಿಕರ ವೇತನದಿಂದ ಅವರ ಆರೋಗ್ಯ ಸೇವೆ ಮತ್ತು ಪೆಂಶನ್ನಿಗಾಗಿ ಇನ್ನಷ್ಟು ಕಡಿತಗಳನ್ನು ಈ ಕಾನೂನು ಮಾಡುತ್ತದೆ. ಆಗಿನಿಂದ ಈ ಕಾರ್ಮಿಕ-ವಿರೋಧಿ ಕಾನೂನಿನ ವಿರುದ್ಧ ಆ ರಾಜ್ಯದ ಮತ್ತು ದೇಶದ ತುಂಬಾ ವ್ಯಾಪಕವಾಗಿ ಕಾರ್ಮಿಕರ ಪ್ರಚಾರ ಪ್ರಕ್ಷೋಭೆ ಮತ್ತು ಪ್ರತಿಭಟನೆಗಳು ನಡೆದಿವೆ. ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ರಾಜ್ಯ ಸರ್ಕಾರಗಳ ಪರಿಸ್ಥಿತಿಯಿಂದಾಗಿ, ಈ ಹಕ್ಕು ಮೊಟಕು ಮಾಡದೆ ಬೇರೆ ಗತ್ಯಂತರ ಇಲ್ಲ ಅಂತ ರಿಪಬ್ಲಿಕನ್ ಪಕ್ಷದ ವಾದ. ವಿಸ್ಕೊನ್ಸಿನ್ ನ ಡೆಮೊಕ್ರಾಟಿಕ್ ಪಕ್ಷ

ಇವ್ಯಾವೂ ಫಲ ಕೊಡದಿದ್ದಾಗ, ಕಾರ್ಮಿಕರು ನೇರ ರಾಜಕೀಯ ಕಾರ್ಯಾಚರಣೆಗೆ ಇಳಿದಿದ್ದಾರೆ. ಗವರ್ನರನನ್ನು ವಾಪಸು ಕರೆಸುವ ಪ್ರಸ್ತಾವಕ್ಕೆ 10 ಲಕ್ಷ ಸಹಿ ಕಲೆ ಹಾಕಿದ್ದಾರೆ. ಗವರ್ನರನನ್ನು ವಾಪಸು ಕರೆಸುವ ಪ್ರಕ್ರಿಯೆ ಆರಂಭಿಸಲಿಕ್ಕೆ ಸುಮಾರು ಐದುವರೆ ಲಕ್ಷ ಸಹಿ ಸಾಕು. ಅಮೆರಿಕದ ಚುನಾವಣಾ ಕಾನೂನು ಪ್ರಕಾರ, ಈ ಸಹಿಗಳನ್ನು ಚುನಾವಣಾ ಆಯೋಗ ಕ್ರಮಬದ್ಧ ಎಂದು ಮಾನ್ಯ ಮಾಡಿದರೆ, ಗವರ್ನರ್ ವಾಕರ್ ಪುನಃ ಚುನಾವಣೆ ಎದುರಿಸಬೇಕಾಗುತ್ತದೆ. ಅದು ಹೆಚ್ಚು ಮಟ್ಟಿಗೆ ಖಚಿತವಾಗಿದೆ. ಗವರ್ನರ ಅಲ್ಲದೆ, ಲೆಫ್ಟಿನೆಂಟ್ ಗವರ್ನರ್ ಮತ್ತು 4 ಜನ ರಿಪಬ್ಲಿಕನ್ ಸೆನೆಟರುಗಳ ವಿರುದ್ಧ ಸಹ ಇಂತಹ ಕಾರ್ಯಾಚರಣೆ ಮಾಡಲಾಗಿದ್ದು, ಅವರೂ ತಮ್ಮ ಸದಸ್ಯತ್ವ ಉಳಿಸಿಕೊಳ್ಳಲು ಹೋರಾಟ ಮಾಡಬೇಕಾಗುತ್ತದೆ. ಆಗ (ಒಂದೇ ಸೀಟಿನ ಬಹುಮತ ಇರುವ ರಿಪಬ್ಲಿಕನ್ ಸರ್ಕಾರ ಅಧಿಕಾರ ಕಳೆದುಕೊಳ್ಳುವ ಸಾಧ್ಯತೆ ಇದೆ.

ಅಮೆರಿಕದ ಕೇಂದ್ರೀಯ ಕಾರ್ಮಿಕ ಫೆಡರೇಶನುಗಳು ವಿಸ್ಕೊನ್ಸಿನ್ ಗವರ್ನರ್ ವಾಕರನ ಸವಾಲನ್ನು ಯುದ್ಧೋಪಾದಿಯಲ್ಲಿ ಪರಿಗಣಿಸಿದ್ದು, ವಾಕರ್ ಗೆದ್ದರೆ ಇತರ ರಾಜ್ಯಗಳೂ ಇಂತಹ ಕಾನೂನು ತರಬಹುದು. ಅದು ಕಾರ್ಮಿಕ ಯೂನಿಯನುಗಳ ಮರಣ ಶಾಸನವಲ್ಲದೆ ಬೇರೇನಲ್ಲ ಎಂದು ಮನಗಂಡಿದೆ. ಇಡೀ ಅಮೆರಿಕ ಈ ಪ್ರಕರಣವನ್ನು ಆಸಕ್ತಿಯಿಂದ ಗಮನಿಸುತ್ತಿದೆ. ●

ಭಯೋತ್ಪಾದನೆಯ ವಿರುದ್ಧವೋ ಅಥವ......

ಪುಟ 8 ರಿಂದ...

ತರಾತುರಿಯಿಂದ ಪ್ರಕಟಿಸಿರುವುದೇಕೆ? ಮತ್ತೊಮ್ಮೆ, ದೇಶದಲ್ಲಿ ಭಯೋತ್ಪಾದನೆಯನ್ನು ಮೆಟ್ಟಿ ಹಾಕುವ ನೈಜ ಕಾಳಜಿಗಳಿಗಿಂತ ಹೆಚ್ಚಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ನೀಡಿರುವ ವಚನಗಳ ಒತ್ತಡಗಳೇ ಇದರ ಹಿಂದೆ ಇರುವಂತೆ ಕಾಣುತ್ತದೆ. ಇದು ನಿಜಕ್ಕೂ ಅತ್ಯಂತ ದುರದೃಷ್ಟಕರ. ಮುಂಬೈ ಭಯೋತ್ಪಾದಕ ದಾಳಿಗಳ ನಂತರ ಭಾರತದ ಗೃಹಮಂತ್ರಿಗಳು ಅಮೆರಿಕಾ ಭೇಟಿ ಕೈಗೊಂಡರು. ಆಗ ನೀಡಿದ ಪತ್ರಿಕಾ ಪ್ರಕಟಣೆಯ ಪ್ರಕಾರ ಇದರ ಉದ್ದೇಶ "ಅಮೆರಿಕಾದೊಂದಿಗೆ ಸಂವಾದವನ್ನು ಮುಂದುವರೆಸುವುದು . . . ಭಯೋತ್ಪಾದನೆಗೆ ಪ್ರತಿಯಾದ ಅಮೆರಿಕಾದ ಸಂಸ್ಥೆಗಳು ಮತ್ತು ರಚನೆಗಳನ್ನು ಅರ್ಥಮಾಡಿಕೊಳ್ಳುವುದು..." ಮತ್ತು ಭದ್ರತೆ ಮತ್ತು ಬೇಹುಗಾರಿಕೆಯ ವಿಷಯಗಳಲ್ಲಿ ತೊಡಗಿರುವ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡುವುದು. ಜುಲೈ 2010ರಲ್ಲಿ, ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಮತ್ತು ಅಮೆರಿಕಾದ ಅಧ್ಯಕ್ಷ ಒಬಾಮ ಒಂದು 'ಪ್ರತಿ-ಭಯೋತ್ಪಾದನೆ ಸಹಕಾರ ಉಪಕ್ರಮು'ಕ್ಕೆ ಸಹಿ ಹಾಕಿದರು. ಇದನ್ನು ಅನುಸರಿಸಿ ನವಂಬರ್ 2010ರಲ್ಲಿ ಒಂದು ಹೊಸ 'ಸ್ವದೇಶ ಭದ್ರತಾ ಸಂವಾದ'ದ ಪ್ರಕಟಣೆ ಮಾಡಲಾಯಿತು. ಮೇ 27, 2011ರಂದು ಕೇಂದ್ರ ಗೃಹಮಂತ್ರಿಗಳು ಮತ್ತು ಅಮೆರಿಕಾದ ಸ್ವದೇಶ ಭದ್ರತಾ ಕಾರ್ಯದರ್ಶಿ ಈ ಸಂವಾದವನ್ನು ಆರಂಭಿಸಿದರು.

ಇವೆಲ್ಲ ಉಪಕ್ರಮಗಳು ಅಮೆರಿಕಾದೊಂದಿಗೆ ಆಯಕಟ್ಟಿನ ಪಾಲುದಾರಿಕೆಯ ಭಾಗ. ವಾಸ್ತವವಾಗಿ ಇದನ್ನು ಆರಂಭಿಸಿದ್ದು ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರ, ಯುಪಿಎ ಇದನ್ನು ಹುಮ್ಮಸ್ಸಿನಿಂದ ಮುಂದೊಯ್ದಿದೆ. ಈ ಉಪಕ್ರಮಗಳ ಫಲಿತಾಂಶವಾಗಿ, ನವದೆಹಲಿಯಲ್ಲಿನ ಅಮೆರಿಕನ್ ರಾಯಭಾರ ಕಚೇರಿಯ ಪ್ರಕಟಣೆಯ ಪ್ರಕಾರ, ಅಮೆರಿಕನ್ ರಾಜತಾಂತ್ರಿಕ ಭದ್ರತಾ ಬ್ಯೂರೋದ 'ಭಯೋತ್ಪಾದನಾ-ವಿರೋಧಿ ಸಹಾಯ'(ಎಟಿಎ) 1500ಕ್ಕೂ ಹೆಚ್ಚು ಭಾರತೀಯ ಕಾನೂನು ಜಾರಿ ಅಧಿಕಾರಿಗಳಿಗೆ 79 ಪೋಲೀಸ್ ತರಬೇತಿ ಕಾರ್ಯಕ್ರಮಗಳನ್ನು ನಡೆಸಿದೆ.

ಅಮೆರಿಕನ್ ಪಡಿಯಚ್ಚು ಬೇಡ

ಭಾರತೀಯ ಸಂಸತ್ತು, ಭಾರತೀಯ ಜನತೆಯ ಅಭಿಪ್ರಾಯವನ್ನು ಬಿಂಬಿಸುತ್ತ, ಎಲ್ಲ ವಿಧಗಳ ಮತ್ತು ಬಣ್ಣಗಳ ಭಯೋತ್ಪಾದನೆಯೆಂಬ ಈ ದೇಶ-ವಿರೋಧಿ ಪಿಡುಗನ್ನು ನಿರ್ಮೂಲ ಮಾಡುವ ಸರಕಾರದ ಎಲ್ಲ ಉಪಕ್ರಮಗಳನ್ನು ಬೆಂಬಲಿಸುವಲ್ಲಿ ಒಂದಾಗಿ ಎದ್ದು ನಿಂತಿದೆ. ಅದು ಸರಕಾರೀ ಸಂಸ್ಥೆಗಳು ಈ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಲು ಅಧಿಕಾರ ಪಡೆಯುವಂತೆ ಎನ್‌ಐಎ ಮತ್ತು ಇತರ ಆವಶ್ಯಕ ಶಾಸನಗಳನ್ನು ಸರ್ವಾನುಮತದಿಂದ ಅಂಗೀಕರಿಸಿದೆ. ಆದರೆ ಇದನ್ನು ಅಮೆರಿಕನ್ ಏಜೆಂಸಿಗಳಿಗೆ ನಮ್ಮ ಭದ್ರತಾ ವ್ಯವಸ್ಥೆಯಲ್ಲಿ ತೂರಿಕೊಳ್ಳಲು ಅವಕಾಶ ನೀಡಲು ಸರಕಾರಕ್ಕೆ ಕೊಟ್ಟಿರುವ ಅನುಮತಿಯೆಂದು ದಾರಿ ತಪ್ಪಿಸಲು ಸಾಧ್ಯವಿಲ್ಲ.

ಇದು ಭಾರತದಲ್ಲಿ ಅಮೆರಿಕನ್ ಸಂಸ್ಥಾರಚನೆಯ ಪಡಿಯಚ್ಚನ್ನು ತಯಾರಿಸಲು ನೀಡಿರುವ ಪರವಾನಿಗೆ ಎಂದೂ ವ್ಯಾಖ್ಯಾನಿಸಲಾಗದು. ಭಾರತ ಮತ್ತು ಅಮೆರಿಕಾದ ಪ್ರಭುತ್ವ ರಚನೆಯ ಹೂರಣದಲ್ಲಿ ಮತ್ತು ಸ್ವರೂಪದಲ್ಲಿ ಪ್ರಮುಖ ವ್ಯತ್ಯಾಸಗಳಿವೆ. ಅಷ್ಟೇ ಅಲ್ಲ, ಭಯೋತ್ಪಾದನೆಯನ್ನು ಮೆಟ್ಟಿ ಹಾಕುವ ಹೆಸರಿನಲ್ಲಿ ಅಮೆರಿಕನ್ ಸಂಸ್ಥೆಗಳ ಕುಖ್ಯಾತ ವರ್ತನೆಗಳನ್ನು(ಅಲ್ಲಿಯ ಗ್ವಂಟನಮೋ ಸೆರೆಮನೆಯಲ್ಲಿರುವವರಿಗೆ ನೀಡಿರುವ ಚಿತ್ರಹಿಂಸೆಗಳ ಅಮಾನವೀಯ ಅನುಭವಗಳ ಭಯಾನಕ ಉದಾಹರಣೆಯೊಂದೇ ಇದಕ್ಕೆ ಸಾಕು) ಇಲ್ಲಿ ಅನುಕರಿಸಿದರೆ, ಅದು ಭಾರತಕ್ಕೆ ಅದರ ಪ್ರಜಾಪ್ರಭುತ್ವಕ್ಕೆ ಮತ್ತು ಅದರ ಸಂವಿಧಾನದ ಮೂಲ ಲಕ್ಷಣಗಳಿಗೆ ಅತ್ಯಂತ ವಿನಾಶಕಾರಿಯಾಗುತ್ತದೆ.

ಈ ಎಲ್ಲ ಕಾರಣಗಳಿಂದಾಗಿ, ಈ ಯುಪಿಎ-2 ಸರಕಾರದ ಮೇಲೆ, ಈಗ ನಿಶ್ಚೇಷ್ಟಿತವಾಗಿರುವ 'ಅಂತರ-ರಾಜ್ಯ ಮಂಡಳಿ'ಯ ಒಂದು ವಿಶೇಷ ಅಧಿವೇಶನವನ್ನು ಕರೆದು ಈ ಪ್ರಶ್ನೆಯನ್ನು ಚರ್ಚಿಸುವಂತೆ ಮತ್ತು ಎನ್‌ಸಿಟಿಸಿ ಯನ್ನು ಸಂಸತ್ತಿನಲ್ಲಿ ಆಮೂಲಾಗ್ರ ಚರ್ಚೆಗೆ ಒಳಪಡಿಸುವಂತೆ ಒತ್ತಡಗಳನ್ನು ಹೇರಲೇ ಬೇಕಾಗಿದೆ. ●

ಜಗದ ಜ್ಯೋತಿ

ಸಮಾನತೆ ಬ್ರಾತೃತ್ವ ಮಾನವತೆ ಪ್ರೀತಿ
ಇವು ಇಷ್ಟು ಈ ಜಗಕೆ ಬೆಳಕೀವ ಜ್ಯೋತಿ
ಕೆಲವರೇ ಸಂಕುಚಿತ ಸ್ವಾರ್ಥಿಗಳು ಕೂಡಿ
ಈ ಜ್ಯೋತಿ ಬೆಳಗವೇ ಬಿಡಲಿಲ್ಲ ನೋಡಿ

– ವಿಡಂಬಾರಿ

ಮಹಿಳಾ ಆಯೋಗ ಎಲ್ಲಿದೆ ?

ಮಹಿಳೆಯರ ಹಿತ ಕಾಯಬೇಕಿದ್ದ ಮಹಿಳಾ ಆಯೋಗದ ನಿಷ್ಕ್ರಿಯತೆಯನ್ನು ಸಹಿಸದ ಜನವಾದಿ ಮಹಿಳಾ ಸಂಘಟನೆಯು 'ಮಹಿಳಾ ಆಯೋಗ ಕಾಣೆಯಾಗಿದೆ , ಹುಡುಕಿ ಕೊಡಿ' ಎಂಬ ತಲೆಬರಹದ ಅಡಿಯಲ್ಲಿ 18 ಫೆ. 2012 ರಂದು ಹಲಸೂರು ಗೇಟ್ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿತು. ಬನ್ನಪ್ಪ ಪಾರ್ಕ್ ಬಳಿ ಧರಣಿ ನಡೆಸಿದ ಜನವಾದಿಯ ಕಾರ್ಯಕರ್ತರು ಅಲ್ಲಿಂದ ಘೋಷಣೆ ಕೂಗುತ್ತಾ ಹಲಸೂರು ಪೋಲೀಸ್ ಸ್ಟೇಷನ್‌ನಲ್ಲಿ ದೂರು ನೀಡಿದರು. ಒಟಿಟಿ ಮಹಿಳೆಯರ ಕೊಲೆ, ಅತ್ಯಾಚಾರ ಸೇರಿದಂತೆ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. ತಿಂಗಳಿಗೆ 4000 ಮಹಿಳೆಯರು ಕಾಣೆಯಾಗುತ್ತಿದ್ದಾರೆ. ಮರ್ಯಾದೆಯ ಹೆಸರಿನಲ್ಲಿ ಯುವತಿಯ(ಪ್ರೇಯಸಿ) ಕಗ್ಗೊಲೆ ಮಂಡ್ಯದ ಅಂಬಲವಾಡಿ ಯಲ್ಲಿ ನಡೆದಿದೆ. ಆಕೆಯ ಪ್ರಿಯಕರ ದಲಿತನಾಗಿದ್ದು ಭಯಭೀತನಾಗಿ ತಲೆ ಮರೆಸಿಕೊಂಡು ಬದುಕುವ ಸ್ಥಿತಿ ಉಂಟಾಗಿದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಇವು ತನಗೆ ಸಂಬಂಧಿಸಿಲ್ಲ ಎಂಬಂತೆ ಮಹಿಳಾ ಆಯೋಗ ಕಣ್ಣು ಮುಚ್ಚಿ ಕುಳಿತಿದೆ. ಎಂದು ಜೆಎಂಎಸ್ ನ ಅಧ್ಯಕ್ಷೆ ಮಾತನಾಡಿದರು.

ಅಶಕ್ತ, ವೃದ್ಧ, ವಿಧವೆಯರಿಗೆ ಕೊಡುವ ಮಾಶಾಸನವನ್ನು 11 ತಿಂಗಳಿನಿಂದ ನಿಲ್ಲಿಸಿದ್ದಾರೆ. ಇದರ ಬಗ್ಗೆಯೂ ಚಕಾರವೆತ್ತದ ಆಯೋಗ , ಬೆಂಗಳೂರು ಮೊದಲ ಸ್ಥಾನದಲ್ಲಿರುವ ಹೆಣ್ಣು ಭ್ರೂಣ ಹತ್ಯೆಯ ಬಗ್ಗೆಯೂ ತಲೆ ಕೆಡಿಸಿಕೊಂಡಿಲ್ಲ. ಸಮಾಜದ ಆಗುಹೋಗುಗಳಿಗೆ ತಲೆ ಕೆಡಿಸಿಕೊಳ್ಳದೆ ಆಯೋಗ ನಿದ್ದೆ ಮಾಡುತ್ತಿದೆಯೆ ಎಂದು ವರಲಕ್ಷ್ಮಿಯವರು ಪ್ರಶ್ನಿಸಿದರು.

ಸಚಿವರುಗಳು ಸದನದ ಕಾರ್ಯಕಲಾಪಗಳು ನಡೆಯುತ್ತಿರುವಾಗ ಅಶ್ಲೀಲ ಚಿತ್ರಗಳನ್ನು ನೋಡುವುದರಲ್ಲಿ ಮೈ ಮರೆತಿದ್ದುದು ಮಹಿಳೆಯರ ಭಾವನೆಗಳ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಆದರೆ ಅವರ ವಿರುದ್ಧ ಸರ್ಕಾರ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಹೊಣೆಗೇಡಿ ಮಹಿಳಾ ಆಯೋಗ ಈ ಕುರಿತು ಮೌನ ತಾಳಿದೆ ಎಂದು ಕೆ.ಎಸ್.ಲಕ್ಷ್ಮಿ ತಿಳಿಸಿದರು.

ಪ್ರವಾಸೋದ್ಯಮದ ಹೆಸರಿನಲ್ಲಿ ಕಾಮಕೇಳಿ ನಡೆಯುತ್ತಿದ್ದರೂ ನಮ್ಮ ಸರ್ಕಾರ ಮಾತನಾಡುತ್ತಿಲ್ಲ. ಮಹಿಳಾ ಆಯೋಗವೂ ಕೂಡ ಈ ಬಗ್ಗೆ ಎಚ್ಚರ ವಹಿಸುತ್ತಿಲ್ಲ. ಇವರು ಮಹಿಳಾ ಪರವಾಗಿ ಆಡಳಿತ ನಡೆಸುವುದನ್ನು ಬಿಟ್ಟು ಸರ್ಕಾರದ ಏಜೆಂಟರ ರೀತಿ ವರ್ತಿಸುತ್ತಿದ್ದಾರೆ ಎಂದು ಗೌರಮ್ಮ ಆರೋಪಿಸಿದರು.

ಕಾಣೆಯಾದ ಮಹಿಳಾ ಆಯೋಗವನ್ನು ಹುಡುಕಿಕೊಟ್ಟವರಿಗೆ ಸೂಕ್ತ ಬಹುಮಾನ ನೀಡುವುದಾಗಿ ಘೋಷಣೆ ಕೂಗುತ್ತಾ ಕಾರ್ಯಕರ್ತರು ಹಲಸೂರು ಗೇಟ್ ಪೋಲೀಸ್ ಸ್ಟೇಷನ್ ಬಳಿ ಬಂದು ದೂರು ನೀಡಿದರು.

ಅಧಿಕಾರ ದಾಹಿಗಳ ಮತ್ತೊಂದು ಕಿತ್ತಾಟ

ಪುಟ 3ರಿಂದ.......

ಸದಾನಂದಗೌಡ, ಈಶ್ವರಪ್ಪ ಮಾತ್ರ ಭಾಗವಹಿಸಿದ್ದು ಯಡಿಯೂರಪ್ಪ ಉರಿದೇಳಲು ಮತ್ತೊಂದು ಕಾರಣ. ಅಲ್ಲದೇ ಹಗರಣಗಳ ತನಿಖೆ ನಡೆಯುತ್ತಿರುವ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿ ಇದ್ದ ಉಪಲೋಕಾಯುಕ್ತ ಸ್ಥಾನಕ್ಕೆ ತಮ್ಮನ್ನು ಕೇಳದೇ ತಮಗಾಗದ ನ್ಯಾ.ಚಂದ್ರಶೇಖರಯ್ಯನವರನ್ನು ನೇಮಿಸಿದ್ದು ಇನ್ನೊಂದು ಕಾರಣ. ಈ ನೇಮಕಾತಿ ಹಿಂದೆ ದೇವೇಗೌಡರ ಕೈವಾಡವಿದ್ದು, ಸದಾನಂದಗೌಡರು ಜೆ.ಡಿ.ಎಸ್. ನಾಯಕರ ಮಾತು ಕೇಳಿ ನಡೆದುಕೊಳ್ಳುತ್ತಿದ್ದಾರೆಂಬುದು ಆರೋಪ. ಮಗದೊಂದು ಕಡೆ ಯಡಿಯೂರಪ್ಪನವರ ಮೇಲಿನ ಭ್ರಷ್ಟಾಚಾರದ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಕೆಲವರು ನ್ಯಾಯಾಲಯವನ್ನು ಕೋರಿದ್ದು, ಗಣಿ ಹಗರಣಗಳ ಕೇಂದ್ರ ತನಿಖಾ ಸಂಸ್ಥೆಯೂ ಒಪ್ಪಿದಲ್ಲಿ ಯಡಿಯೂರಪ್ಪನವರ ಕುತ್ತಿಗೆಗೆ ಕುಣಿಕೆ ಬಿಗಿಯಾಗುತ್ತವೆಂಬ ಭಯ. ಒಟ್ಟಾರೆ ಯಡಿಯೂರಪ್ಪನವರ ವಿರೋಧಿ ಬಣದ ಹಿಡಿತ ಬಿಗಿಯಾಗುವ ಸಂದರ್ಭಗಳೇ ಇರುವುದರಿಂದಲೂ, ದಿನಗಳೆದಂತೆ ಅವರ ನಿಷ್ಠ ಬೆಂಬಲಿಗ ಶಾಸಕರ ಸಂಖ್ಯೆಯೂ ಕರಗುತ್ತಿರುವುದರಿಂದಲೂ ಆದಷ್ಟು ಬೇಗ ಸಿ.ಎಂ. ಆಗದಿದ್ದಲ್ಲಿ ತೀರಾ ನೆಲ ಕಚ್ಚಬೇಕಾದಿತೆಂಬ ಭಯವೂ ಈಗಿನ ಬಂಡಾಯದ ತರಾತುರಿಗೆ ಪ್ರಮುಖ ಕಾರಣವೂ ಹೌದು, ಆದ್ದರಿಂದಲೇ ಸದಾನಂದಗೌಡರು ಚುನಾವಣಾ ಬಜೆಟ್ ಮಂಡಿಸಿ ಸ್ವಂತ ಅಸ್ತಿತ್ವ ಬಲಗೊಳಿಸಿಕೊಂಡು ಬಿಡಬಾರದೆಂಬ ಹುನ್ನಾರವೂ ಇಲ್ಲದಿಲ್ಲ.

ತೊಲಗುವುದೊಂದೆ

ಪ್ರಶ್ನೆ ಇರುವುದು ಇಲ್ಲಿ ಯಾರು, ಯಾರ ಮೇಲೆ ಮೇಲುಗೈ ಸಾಧಿಸುವರು ಎಂಬುದಕ್ಕಿಂತಲೂ ಜನತೆಯು ನೀಡಿದ ಅಧಿಕಾರವನ್ನು ತಮ್ಮ ಭ್ರಷ್ಟ ಸ್ವಾರ್ಥದ ಸಲುವಾಗಿ, ನಾಡಿನ ಸಂಪತ್ತಿನ ಲೂಟಿ ಮಾಡಿದ ಮತ್ತು ಲೂಟಿ ಮಾಡುವ ಸಲುವಾಗಿ ದುರ್ಬಳಕೆ ಮಾಡಿಕೊಳ್ಳುತ್ತಾ ಜನತೆ ದ್ರೋಹ ಎಸಗುತ್ತಿರುವುದಕ್ಕೆ ಮಿತಿಯೇ ಇಲ್ಲವೇ ಎಂಬುದು!. ಬರದ ಬಗ್ಗೆ ಚರ್ಚೆ ನಡೆದಿರುವಾಗಲೇ ಲೈಂಗಿಕ ವಿಡಿಯೋ ನೋಡುತ್ತಾ ಕಾಲ ಕಳೆಯುವ ಹೊಣೆಗೇಡಿ ನೀಚ ಸಚಿವರೂ, ನಿಷ್ಕ್ರಿಯ ಪೀಡಕ ಸಂಪುಟ ಇರುವ ಬದಲು ವಿಧಾನಸಭೆ ವಿಸರ್ಜಿಸಿ ಹೊಸ ಜನಾದೇಶ ಪಡೆಯುವುದೇ ಸೂಕ್ತವಾದುದು.

ಈಗಾಲೇ ನಾಳೆ(24ರಂದು) ಗಡ್ಕರಿ ಮುಂದೆ ದೂರು, ಬಲ ಪ್ರದರ್ಶನ ನಡೆಸಿದರೂ, ಹೈಕಮಾಂಡ್ ಏನು ಮಾಡೀತು ? ಬುದ್ಧಿ ಹೇಳುವ, 'ಕಿವಿ ಹಿಂಡುವ, ಇಲ್ಲವೇ ಶಿಸ್ತುಕ್ರಮ ವಹಿಸುವ ಯಾವ ಸ್ಥಿತಿಯಲ್ಲಿಯೂ ಅದು ಇಲ್ಲ. ಇದೇ ಗಡ್ಕರಿಯವರು ಯಡ್ಡಿ-ರೆಡ್ಡಿಗಳಿಂದ ಕಪ್ಪ ಕಾಣಿಕೆ ಸ್ವೀಕರಿಸಿ ಶಹಬ್ಬಾಸ್ ಹೇಳುತ್ತಾ ಬಂದಿರುವಾಗ ಸರಿ ತಪ್ಪು ಹೇಳುವ ನೈತಿಕ, ಸಂಘಟನಾ ಬಲವನ್ನೇ ಕಳೆದುಕೊಂಡು ಬಿಟ್ಟಿದ್ದಾರೆ.

ಹೇಗಿದ್ದರೂ, ಏನಾದರೂ, ಬಿಜೆಪಿಯೊಳಗಿನ ಕದನಕ್ಕೆ ಯವುದೇ ಕೊನೆಯಿಲ್ಲ, ಪರಿಹಾರವೂ ಇಲ್ಲ. ಅಷ್ಟೊಂದು ಅಧಃಪತನ ಅಂಚಿಗೆ ಅದು ತಲುಪಿದೆ.

ಕೋಲಾರ ಬ್ಯಾಂಕ್.....

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಕೋಲಾರ - ಚಿಕ್ಕಬಳ್ಳಾಪುರ ಜಿಲ್ಲೆಯ ಸಂಸದರು, ಜಿಲ್ಲಾ ಉಸ್ತುವಾರಿ ಸಚಿವರುಗಳು, ಹಾಲಿ ಮತ್ತು ಮಾಜಿ ಶಾಸಕರು, ಜನಪ್ರತಿನಿಧಿಗಳು, ಸಹಕಾರಿ ಮುಖಂಡರನ್ನೊಳಗೊಂಡ .ನಿಯೋಗವು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಬ್ಯಾಂಕ್ ಉಳಿವಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡುವುದು. ಸರ್ಕಾರ ಇದಕ್ಕೆ ಸ್ಪಂದಿಸದಿದ್ದಲ್ಲಿ ಪ್ರಬಲವಾದ ಹೋರಾಟ ರೂಪಿಸಲಾಗುವುದು. ಅಂತಿಮವಾಗಿ ಮುಖ್ಯಮಂತ್ರಿಗಳ ಮನೆ ಎದುರು ಧರಣಿ ಸತ್ಯಾಗ್ರಹ. ನಡೆಸುವುದು ಎಂದರು.

* ಚಿಕ್ಕಬಳ್ಳಾಪುರ - ಕೋಲಾರ ಜಿಲ್ಲೆಗಳ ರೈತರ ಅಳಿವು ಉಳಿವಿನ ಪ್ರಶ್ನೆಯಾಗಿರುವುದರಿಂದ ಡಿಸಿಸಿ ಬ್ಯಾಂಕ್‌ಅನ್ನು ಉಳಿಸಿಕೊಳ್ಳಲು ಎಲ್ಲ ರೀತಿಯ ಹೋರಾಟಗಳಲ್ಲಿ ಎಲ್ಲರೂ ಭಾಗವಹಿಸುವಂತೆ ಅವರು ಮನವಿ ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ಮಾತನಾಡಿ ಡಿಸಿಸಿ ಬ್ಯಾಂಕ್‌ನಲ್ಲಿ ಮುಸುಳಿರುವ ಭ್ರಷ್ಟರನ್ನು ಶಿಕ್ಷಿಸಬೇಕು, ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಿಓಡಿ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

* ಕೆಪಿಆರ್‌ಎಸ್‌ನ ಕೋಲಾರ ಜಿಲ್ಲಾ ಕಾರ್ಯದರ್ಶಿ ಟಿ.ಎಂ.ವೆಂಕಟೇಶ್ ಸ್ವಾಗತಿಸಿದರು. ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯದರ್ಶಿ ಸಿ.ಗೋಪಿನಾಥ್ ವಂದಿಸಿದರು.

ತ್ರಿಪುರಾ.......

ಪುಟ 10 ರಿಂದ....

ಜವಾಬ್ದಾರಿ ಇದೆ ಎಂಬುದನ್ನು ಕಾರ್ಯದರ್ಶಿ ಬಿಜನ್ ಧರ್ ಉಲ್ಲೇಖಿಸಿದರು. ರಾಜಕೀಯ ಪ್ರಜ್ಞೆ, ಶಿಸ್ತು, ಮೌಲ್ಯ, ಸಿದ್ಧಾಂತವನ್ನು ಸದಸ್ಯರು ಎತ್ತಿಹಿಡಿದು ಪಕ್ಷದ ಮುನ್ನಡೆಗೆ ದಾರಿ ಮಾಡಿಕೊಡಬೇಕಿದೆ ಎಂದು ಧರ್ ಹೇಳಿದರು. 19ನೇ ರಾಜ್ಯ ಸಮ್ಮೇಳನದ ಬಳಿಕ ನಡೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗೆ ಬಿದ್ದ ಮತಪ್ರಮಾಣ ಶೇಕಡಾ 55ರಿಂದ 63ಕ್ಕೇರಿದ್ದನ್ನು ಪ್ರಸ್ತಾಪಿಸಲಾಯಿತು. 2013ರ ವಿಧಾನಸಭಾ ಚುನಾವಣೆ ಪಕ್ಷದ ಮುಂದಿರುವ ದೊಡ್ಡ ಸವಾಲು ಎಂಬುದನ್ನೂ ಪಕ್ಷ ಗಮನಿಸಿತು. 68 ಮಹಿಳೆಯರ ಸಹಿತ 512 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಚಿತ್ತಚಂದಾ (93) ಅತ್ಯಂತ ಹಿರಿಯ ಹಾಗೂ ನೀಲಾಂಜನ (28) ಅತಿ ಕಿರಿಯ ಪ್ರತಿನಿಧಿಯಾಗಿದ್ದರು. ಅಂತಿಮವಾಗಿ 83 ಸದಸ್ಯರ ನೂತನ ರಾಜ್ಯ ಸಮಿತಿಯನ್ನು ಸಮ್ಮೇಳನದ ಆರಿಸಿತು. 14 ಸದಸ್ಯರ ಕಾರ್ಯದರ್ಶಿ ಮಂಡಳಿಯೊಂದಿಗೆ ಬಿಜನ್ ಧರ್ ಅವರನ್ನು ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಸ್ಟೀಲ್ ಕಾರ್ಮಿಕರ ಹೋರಾಟ- ಹಾಸನ

ಪುಟ 4 ರಿಂದ ...

ಸಹಾಯಕ ನಿರ್ದೇಶಕರು ಮೈಸೂರು ಇವರ ಮುಂದೆ, ಭವಿಷ್ಯನಿಧಿ ಇಲಾಖಾ ಅಧಿಕಾರಿಗಳ ಮುಂದೆ, ಸ್ಥಾಯಿ ನಿಬಂಧನೆಯನ್ನು ರಚಿಸಲು, ಉಪ ಕಾರ್ಮಿಕ ಆಯಕ್ತರ ಮುಂದೆ ವಿವಾದಗಳನ್ನು ಸಂಘ ಎತ್ತಿದ್ದು ಈ ಎಲ್ಲವೂ ವಿಚಾರಣಾ ಹಂತದಲ್ಲಿವೆ. ಈ ಹಂತದಲ್ಲಿ ಯಾವುದೇ ದಾಖಲಾತಿಗಳನ್ನು ನೀಡದೆ ಕಳೆದ 5-6 ವರ್ಷಗಳಿಂದ ದೂರದ ರಾಜ್ಯಗಳಾದ ಉತ್ತರ ಪ್ರದೇಶ, ಹರಿಯಾಣ, ಬಿಹಾರ, ಒರಿಸ್ಸಾ ಮತ್ತು ಜಾರ್ಖಂಡ್‌ನಿಂದ ಬಂದು ನೆಲೆಸಿ ನಿರಂತರವಾಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಅವರು ನ್ಯಾಯ ಕೇಳಲು ಸಂಘಟಿತರಾದುದ್ದನ್ನು ಸಹಿಸದ ಆಡಳಿತ ಮಂಡಳಿಯವರು ತನಿಖಾ ಪೂರ್ವದಲ್ಲಿ ಕೆಲಸ ನಿಲ್ಲಿಸಿ ಅವರು ಸ್ಥಳದಲ್ಲಿ ಇಲ್ಲದ ಹಾಗೆ ಮಾಡಲು ಪ್ರಯತ್ನಿಸಿದ್ದರು. ಕಾರ್ಖಾನೆಯ ಇತರೆ ಎಲ್ಲಾ ಕಾರ್ಮಿಕರು ಆಡಳಿತ ಮಂಡಳಿಯವರ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಮಿಂಚಿನ ಮುಷ್ಕರ ನಡೆಸಿ ಹಗಲು-ರಾತ್ರಿ ಕಳೆದ ಮೂರು ದಿನಗಳ ಕಾಲ ಕಾರ್ಖಾನೆಯ ಮುಂದೆ ಧರಣಿ ಸತ್ಯಾಗ್ರಹ ನಡೆಸುತ್ತಾ ಬಂದರು. ಕಾರ್ಮಿಕರ ದೃಢ ನಿಲುಮೆಯಿಂದ ಕಾರ್ಮಿಕರ ಇತರೆ ವಿವಿಧ ಕೊರತೆಗಳನ್ನು ಬಗೆಹರಿಸಲು ಎಲ್ಲಾ ರೀತಿಯ ಸೂಕ್ತ ಕ್ರಮಕೈಗೊಳ್ಳುವುದಾಗಿ ಸಹಾಯಕ ಕಾರ್ಮಿಕ ಆಯಕ್ತರ ಭರವಸೆಯ ಮೇರೆಗೆ ಮುಷ್ಕರವನ್ನು ಹಿಂದಕ್ಕೆ ಪಡೆಯಲಾಗಿದೆ.

ಕೈಗಾರಿಕಾ ಶಾಂತಿಯ ಹಿತದೃಷ್ಟಿಯಿಂದ ಕಾರ್ಮಿಕರ ವಿವಿಧ ಕೊರತೆಗಳನ್ನು ಸರಿಪಡಿಸಲು ಆಡಳಿತ ವರ್ಗ ತನ್ನ ಹಠಮಾರಿತನದ ಧೋರಣೆಯನ್ನು ಬಿಟ್ಟು ಮುಂದೆ ಬರುತ್ತಾರೆಂದು ಕಾರ್ಮಿಕ ಮುಖಂಡರಾದ ಸುಕುಮಾರ್ ಆಶಿಸಿದ್ದಾರೆ.

RNI No. KARKAN/2006/17926 Posted on every Satuarda
Postal Reg. No. RNP/KA/BGS/2078/2010-12 Posted at MBC Bangalore GPO

ಇರಾನ್ ಮೇಲೆ ಯುದ್ಧಕ್ಕೆ ಸಜ್ಜು ?




ಇರಾನ್ ಅಣು ಸ್ಥಾವರಗಳ ಮೇಲೆ ಇಸ್ರೇಲ್ ಸದ್ಯದಲ್ಲೇ ಆಕ್ರಮಣ ಮಾಡಲಿದೆ ಎಂದು ಅಂತರ್ರಾಷ್ಟ್ರೀಯ ಮಾಧ್ಯಮಗಳಲ್ಲಿ ದಟ್ಟವಾದ ವದಂತಿಗಳು ಹರಡಿವೆ. ಅಮೆರಿಕದ ವಿರೋಧ ಪಕ್ಷವಾದ ರಿಪಬ್ಲಿಕನ್ ಪಕ್ಷದ ನಾಯಕರು ಇರಾನ್ ಸದ್ಯದಲ್ಲೇ ಅಣು ಬಾಂಬು ತಯಾರಿಸಲಿದೆ. ಅದು ಅಣು ಬಾಂಬು ಬಳಸಿ ಇಸ್ರೇಲು ಮತ್ತು ಪಶ್ಚಿಮ ಏಶ್ಯಾದ ನೆರೆ ದೇಶಗಳನ್ನು ಬೆದರಿಸಲಿದೆ. ಅಪಾಯ ಒಡ್ಡಲಿದೆ. ಆದ್ದರಿಂದ ಇರಾನ್ ಮೇಲೆ ಅಮೆರಿಕ ದಾಳಿ ಮಾಡಬೇಕು ಅಂತ ಈ ವರ್ಷದ ಅಧ್ಯಕ್ಷೀಯ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಯುದ್ಧ ಘೋಷಣೆಗಳನ್ನು ಮಾಡುತ್ತಿದ್ದಾರೆ. ಈಗಾಗಲೇ ಇಸ್ರೇಲ್ ಮತ್ತು ಇರಾನ್ ನಡುವೆ ಪ್ರಾಕ್ಸಿ ಕದನ ಆರಂಭವಾಗಿದೆ.

ವಸಂತ

ಇಸ್ರೇಲಿ ರಾಜತಾಂತ್ರಿಕ ಸಿಬ್ಬಂದಿ ಮತ್ತು ನಾಗರಿಕರ ಮೇಲೆ ದೆಹಲಿ ಜಾರ್ಜಿಯಾ ಮತ್ತು ಥಾಯ್‌ಲ್ಯಾಂಡಿನಲ್ಲಿ ಒಂದೇ ಸಮಯದಲ್ಲಿ ನಡೆದ ಭಯೋತ್ಪಾದಕ ದಾಳಿಯ ಹಿಂದೆ ಇರಾನ ಕೈವಾಡ ಇದೆ ಎಂದು ಇಸ್ರೇಲು ಆಪಾದಿಸಿದೆ. ಇರಾನಿ ಅಣು ತಜ್ಞರ ಕೊಲೆ ಮತ್ತು ಅವರ ಮೇಲೆ ಮರಣಾಂತಿಕ ದಾಳಿ, ಅಣು ಶಕ್ತಿ ಸ್ಥಾವರಗಳಲ್ಲಿ ಸ್ಫೋಟ, ಕಂಪ್ಯೂಟರ್ ವೈರಸ್ ಮುಂತಾದ ಬುಡಮೇಲು ಕುಕೃತ್ಯಗಳನ್ನು ಮೊಸಾದ್ (ಇಸ್ರೇಲಿ ಬೇಹುಗಾರಿಕೆ ಘಟಕ) ನಡೆಸಿದೆ-ಎಂದು ಇರಾನ್ ಆಪಾದಿಸಿದೆ. ಅಮೆರಿಕ ಹೊರ್ಮುರ್ಝ್ ಜಲಸಂಧಿಯ ಬಳಿ ಇರುವ ಎರಡು ಕೊಲ್ಲಿ ದ್ವೀಪಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಡೆಗಳನ್ನು ಇಳಿಸಿ ಯುದ್ಧಕ್ಕೆ ತಯಾರಿ ನಡೆಸಿದೆ. ಇಸ್ರೇಲ್ ಮತ್ತು ಅಮೆರಿಕಗಳು ಯುದ್ಧ ಹೂಡಲು ನೆಪಕ್ಕೆ ಕಾಯುತ್ತಿವೆ. ಇರಾನ ಅಣುಶಕ್ತಿ ಸ್ಥಾವರಗಳ ಮೇಲೆ ಅಮೆರಿಕದ ಡ್ರೋನ್ (ಪೈಲಟ್-ರಹಿತ ಯುದ್ಧ) ವಿಮಾನಗಳು ದಾಳಿ ಮಾಡುವ ಮೊದಲಿನ ಬೇಹುಗಾರಿಕೆ ಹಾರಾಟ ನಡೆಸಿವೆ. ಇಂತಹ ಒಂದು ವಿಮಾನವನ್ನು ಇರಾನ್ ಹೊಡೆದು ನೆಲಕ್ಕುರುಳಿಸಿ, ಇಸ್ರೇಲಿ-ಅಮೆರಿಕನ್ ಯುದ್ಧ ತಯಾರಿಗೆ ಉದಾಹರಣೆಯಾಗಿ ಪ್ರದರ್ಶನಕ್ಕೆ ಇಟ್ಟಿದೆ.

ಅಂತರ್ರಾಷ್ಟ್ರೀಯ ಅಣುಶಕ್ತಿ ಸಂಘಟನೆ (ಐಎಇಎ) ಅಮೆರಿಕದ ಚಿತಾವಣೆಯಿಂದ ಯಾವುದೇ ಪುರಾವೆ ಇಲ್ಲದಿದ್ದರೂ, ಇರಾನ ಅಣುಶಕ್ತಿ ಸ್ಥಾವರಗಳನ್ನು ಮಿಲಿಟರಿ ಉದ್ದೇಶಕ್ಕೆ ಬಳಸುತ್ತಿದೆಯೇ ಎಂದು ಪದೇ ಪದೇ ಪರೀಕ್ಷಣೆ ನಡೆಸಿ ಒತ್ತಡ ಹೇರುತ್ತಿದೆ. ಇರಾನ್ ತಾನು ಸಹಿ ಮಾಡಿರುವ ಎನ್.ಪಿ.ಟಿ. ಒಪ್ಪಂದದ ಪ್ರಕಾರ ಮಿಲಿಟರಿ ಸ್ಥಾವರಗಳನ್ನು ಐಎಇಎ ಪರೀಕ್ಷಣೆಗೆ ಒಳಪಡಿಸಬೇಕಾಗಿಲ್ಲ. ಇರಾನ್ ಅಣು ಬಾಂಬು ತಯಾರಿಸುತ್ತಿಲ್ಲ. ಆದರೆ ಶಾಂತಿಯುತ ಅಣು ಶಕ್ತಿ ಯೋಜನೆ ಮುಂದುವರೆಸುವ ಹಕ್ಕನ್ನು ಬಿಟ್ಟುಕೊಡುವುದಿಲ್ಲ. ಇಸ್ರೇಲು ಅಥವಾ ಅಮೆರಿಕ ಇರಾನ ಅಣುಶಕ್ತಿ ಸ್ಥಾವರ ಅಥವಾ ಯಾವುದೇ ರೀತಿಯ ದಾಳಿ ನಡೆಸಿದರೆ ತಕ್ಕ ಪ್ರತಿ ಉತ್ತರ ನೀಡುತ್ತದೆ ಎಂದು ಎಚ್ಚರಿಸಿದೆ.




ಅಮೆರಿಕ ಮತ್ತು ನಾಟೋ ದೇಶಗಳು ತಮ್ಮ ಏಕಪಕ್ಷೀಯ ಆರ್ಥಿಕ ದಿಗ್ಬಂಧನವನ್ನು ಬಿಗಿ ಗೊಳಿಸಲು ಪ್ರಯತ್ನಿಸುತ್ತಿವೆ. ಇದರಿಂದ ಇರಾನನಲ್ಲಿ ಔಷಧಿ ಮುಂತಾದ ಆಮದಾದ ಅಗತ್ಯ ವಸ್ತುಗಳ ಬೆಲೆ ಏರತೊಡಗಿದೆ. ಇರಾನ್ ಯುರೋಪಿಗೆ ತೈಲ ರಫ್ತು ಕಡಿತಗೊಳಿಸಿದೆ. ಇರಾನಿನ ಮೇಲೆ ಆರ್ಥಿಕ ದಿಗ್ಬಂಧನದಲ್ಲಿ ಭಾಗವಹಿಸಲು ಅಮೆರಿಕ, ಭಾರತ ಮುಂತಾದ ದೇಶಗಳ ಮೇಲೆ ಇನ್ನಿಲ್ಲದ ಒತ್ತಡ ಹೇರುತ್ತಿದೆ. ಇರಾನ ತೈಲದ ದೊಡ್ಡ ಆಮದುದಾರರಲ್ಲಿ ಒಂದಾದ ಮತ್ತು ಇರಾನನ ಜತೆ ಸಾಕಷ್ಟು ರಫ್ತು ವ್ಯಾಪಾರ ಹೊಂದಿರುವ ಭಾರತ ಈ ಒತ್ತಡಕ್ಕೆ ಈ ವರೆಗೆ ಮಣಿದಿಲ್ಲ. ಪಾಕಿಸ್ತಾನ ಸಹ ಅಮೆರಿಕದ ಒತ್ತಡವನ್ನು ಲೆಕ್ಕಿಸಿಲ್ಲ. ಆದರೂ ಇರಾನ ತೈಲ ರಫ್ತು ಆದಾಯ ಈಗಾಗಲೇ ಕುಸಿಯಲು ಆರಂಭಿಸಿದ್ದು, ಇರಾನನ ಒಳಗೆ ವಿದೇಶೀ ಕರೆನ್ಸಿ ಮತ್ತು ಅಗತ್ಯ ವಸ್ತುಗಳ ಕಾಳಸಂತೆ ಆರಂಭವಾಗಿದೆ.

ಮಿಲಿಟರಿ ಮತ್ತು ತೈಲದ ದೃಷ್ಟಿಯಿಂದ ಆಯಕಟ್ಟಿನ ಪ್ರದೇಶವಾದ ಪಶ್ಚಿಮ ಏಶ್ಯಾದಲ್ಲಿ ತನ್ನ ಪೂರ್ಣ ಅಧಿಪತ್ಯ ಸ್ಥಾಪಿಸಲು ಪ್ರಾದೇಶಿಕ ಶಕ್ತಿ ಇರಾನನ್ನು ಬಗ್ಗು ಬಡಿಯುವುದು ಅಮೆರಿಕಕ್ಕೆ ಅತ್ಯಗತ್ಯವಾಗಿದೆ. ಪ್ರಾದೇಶಿಕ ಶಕ್ತಿಗಳಾಗ ಬಯಸುವ ತುರ್ಕಿ ಮತ್ತು ಸೌದಿ ಅರೇಬಿಯಾಗಳ ಪೂರ್ಣ ಬೆಂಬಲ ಇದಕ್ಕಿದೆ. ಇರಾನನ ಏಕಮಾತ್ರ ಬೆಂಬಲಿಗ ಸಿರಿಯಾದ ಮೇಲೂ ಲಿಬ್ಯಾ-ಮಾದರಿಯ 'ಸರ್ಕಾರ ಬದಲಾವಣೆ' ಆಪರೇಶನ್ನಿಗೆ ಗುರಿ ಮಾಡಿದೆ. ಈ ಪ್ರದೇಶದ ಶಿಯಾ-ಸುನ್ನಿ ಕಲಹ ಬಳಸಿ, ಹಲವು ಅರಬ್ ದೇಶಗಳನ್ನು ಈ ದಾಳಿಯಲ್ಲಿ ಶಾಮೀಲು ಮಾಡಿದೆ.

ಅಮೆರಿಕದ ಹಲವು ಸಚಿವರು, ಮಿಲಿಟರಿ ಮತ್ತು ರಾಜತಾಂತ್ರಿಕ ಸಿಬ್ಬಂದಿ ಇರಾನ್ ವಿರುದ್ಧ ಯುದ್ಧ ಸನ್ನಾಯಲ್ಲಿ ತೊಡಗಿದ್ದಾರೆ. ಆದರೆ ಅಧ್ಯಕ್ಷ ಒಬಾಮ ಮತ್ತು ಆಳುವ ಡೆಮೊಕ್ರಾಟಿಕ್ ಪಕ್ಷ, ಚುನಾವಣಾ ವರ್ಷದಲ್ಲಿ ಇರಾನ್ ಯುದ್ಧದ ಆಂತರಿಕ ರಾಜಕೀಯ ಪರಿಣಾಮಗಳ ಬಗ್ಗೆ ಲೆಕ್ಕಾಚಾರ ಮಾಡುತ್ತಿದೆ. ಈಗಾಗಲೇ ಇರಾನ್ ಯುದ್ಧ ವಿರುದ್ಧ ಹಲವು ಪ್ರತಿಭಟನೆಗಳು ನಡೆದಿದ್ದು, ಆರ್ಥಿಕ ಸಂಕಟಗಳ ವಿರುದ್ಧ 'ವಶಪಡಿಸಿಕೊಳ್ಳಿ' ಚಳುವಳಿ ಎರಡನೇ ಹಂತದ ಬಿಸಿಯೇರುತ್ತಿರುವಾಗ ಯಾವ ಪರಿಣಾಮಗಳು ಆಗಬಹುದು ಎಂಬ ಬಗ್ಗೆ ಆತಂಕ ಒಬಾಮ ಅವರಿಗೆ ಇದ್ದಂತಿದೆ. ಯುದ್ಧದಿಂದ ತೈಲ ಬೆಲೆಗಳು ಏರಿ ಪ್ರತಿಕೂಲ ಪರಿಣಾಮಗಳೇ ಆಗುವ ಸಾಧ್ಯತೆ ಜಾಸ್ತಿ ಎಂದು ಅವರ ಆತಂಕ ಇದ್ದಂತಿದೆ. ಆದರೆ ರಿಪಬ್ಲಿಕನ್ ಯುದ್ಧ ಸನ್ನಾಯನ್ನೂ ಅವರು ಎದುರಿಸಬೇಕಾಗಿದೆ. ಆದ್ದರಿಂದ ಎಲ್ಲಾ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ ಎಂಬ ಜಾಗರೂಕ ಹೇಳಿಕೆ ನೀಡಿದ್ದಾರೆ.

ಫೆಬ್ರವರಿ 28 , 2012, ಚಾರಿತ್ರಿಕ ಮುಷ್ಕರದತ್ತ.....

ದೇಶದ ಮತ್ತು ರಾಜ್ಯದ ದುಡಿಯುವ ವರ್ಗ ಐತಿಹಾಸಿಕ ಆಂದೋಲನಕ್ಕೆ ಸಜ್ಜಾಗುತ್ತಿದೆ. ಈ ಮುಷ್ಕರ ಕೇವಲ ಕಾರ್ಖಾನೆಗಳ ಬಂದ್ ಆಗಿ ಉಳಿಯುವುದಿಲ್ಲ. ಸಂಘಟಿತ ಕಾರ್ಮಿಕರು, ಅಸಂಘಟಿತ ಕಾರ್ಮಿಕರು, ನೌಕರರ ವಿವಿಧ ವಿಭಾಗಳ ಜನರು, ವ್ಯಾಪಾರಸ್ಥರು, ರೈತರು, ಕೂಲಿಕಾರರು, ವಿದ್ಯಾರ್ಥಿ, ಯುವಜನರು, ಮಹಿಳೆಯರು, ಮುಂತಾದ ಸಮಾಜದ ನಾನಾ ವರ್ಗಗಳ ಜನರು ಮಹಾ ಮುಷ್ಕರದ ಸಿದ್ಧತೆಯಲ್ಲಿ ತೊಡಗಿದ್ದಾರೆ. ಸಮಾವೇಶಗಳು, ಜಾಥಗಳು, ಸಭೆಗಳು, ವೈವಿಧ್ಯಮಯ ಪ್ರಚಾರಾಂದೋಲನ ಬರದಿಂದ ಸಾಗಿದೆ. ಶಾಲಾ ಕಾಲೇಜುಗಳ ಬಂದ್‌ಗೆ ವಿದ್ಯಾರ್ಥಿಗಳು ಸಿದ್ಧತೆ ನಡೆಸಿದ್ದಾರೆ.



ಜನವಿರೋಧಿ ಧೋರಣೆಗಳನ್ನು ಅನುಸರಿಸುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಪಾಠ ಕಲಿಸುವ ಐತಿಹಾಸಿಕ ಮುಷ್ಕರದ ಯಶಸಿಗಾಗಿ ನೀವೂ ಕೈಜೋಡಿಸಿ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH